ವಿಕಾಸ

ಸಂಪುಟ ೧೨ ಸಂಚಿಕೆ ೧೧ ಮಾರ್ಚ್ ೧೮, ೧೯೯೦ ರೂ. ೧.೫೦

ಜನತೆಯ ಸಿಟ್ಟು ಮತ್ತೊಮ್ಮೆ ವ್ಯಕ್ತಗೊಂಡಿದೆ

– ಹರಿಕಿಶನ್ ಸಿಂಗ್ ಸುರ್ಜಿತ್

ಲೋಕ ಸಭಾ ಚುನಾವಣೆಗಳಂತೆ ವಿಧಾನಸಭಾ ಚುನಾವಣೆಗಳೂ ಕಾಂಗ್ರೆ ವಿರುದ್ಧ ಜನತೆಯ ಸಿಟ್ಟನ್ನು ಮತ್ತೆ ತೋರಿಸಿವೆ. ಜನತೆ ಸ್ಪಷ್ಟ ತೀರ್ಪು ನೀಡಿದ್ದಾರೆ. ಎಡ ಜಾತ್ಯತೀತ ಶಕ್ತಿಗಳ ಸತತ ಹೋರಾಟಕ್ಕೆ ದೊಡ್ಡ ಜಯ ದೊರೆತಿದೆ. ಆದರೆ ಪ್ರತಿಯೊಂದೆಡೆ ಕಾಂಗ್ರೆ ವಿರೋಧಿ ಅತೃಪ್ತಿ ಪ್ರಜಾಪ್ರಭುತ್ವ ಮಾರ್ಗ ಹಿಡಿದಿಲ್ಲ. ಎಡ ಪಕ್ಷಗಳು ದುರ್ಬಲವಾಗಿದ್ದಲ್ಲಿ, ಜನತಾದಳ ಸಮಯಸಾಧಕ ನೀತಿ ಅನುಸರಿಸಿದಲ್ಲಿ, ಬಿ.ಜೆ.ಪಿ.ಯ ಕೋಮು ಪ್ರಚಾರ ಯಶಸ್ವಿಯಾಗಿದೆ. ಆದ್ದರಿಂದ ಎಡ ಪಕ್ಷಗಳ ಮೇಲೆ ಈಗ ಗುರುತರ ಹೊಣೆ ಬಿದ್ದಿದೆ. ಇದನ್ನು ಚಾಕಚಕ್ಯತೆಯಿಂದ ನಿಭಾಯಿಸಿದರೆ ದೇಶದಲ್ಲಿ ಹೊಸ ವರ್ಗ ಬಲಾಬಲ ರೂಪಿಸಲು ಸಾಧ್ಯ ಎನ್ನುತ್ತಾರೆ, ಸಿ.ಪಿ.ಐ.(ಎಂ) ಪೊಲಿಟ್‌ಬ್ಯೂರೋ ಸದಸ್ಯ ಕಾಂ. ಹರಿಕಿಶನ್‌ಸಿಂಗ್ ಸುರ್ಜಿತ್, ವಿಧಾನ ಸಭಾ ಚುನಾವಣೆಗಳನ್ನು ಕುರಿತ ಈ ವಿಶ್ಲೇಷಣೆಯಲ್ಲಿ.

ಲೋಕಸಭಾ ಚುನಾವಣೆಗಳಲ್ಲಿ ಕಾಂಗ್ರೆಸ್ (ಐ) ದುರಾಡಳಿತದ ವಿರುದ್ಧ ಜನತೆಯ ತೀರ್ಪಿನ ಮೂರು ತಿಂಗಳೊಳಗೆ ಫೆಬ್ರುವರಿ ೨೭ ರಂದು ಎಂಟು ರಾಜ್ಯಗಳಲ್ಲಿ, ಒಂದು ಕೇಂದ್ರಾಡಳಿತ ಪ್ರದೇಶದಲ್ಲಿ ಚುನಾವಣೆ ನಡೆಯಿತು. ಇಲ್ಲೆಲ್ಲಾ ಚುನಾವಣೆಯ ಮೊದಲು ಕಾಂಗ್ರೆಸ್(ಐ) ಆಳುವ ಪಕ್ಷವಾಗಿತ್ತು.

ದೇಶದ ಐಕ್ಯತೆಯ ರಕ್ಷಣೆಯಲ್ಲಿ ವಿಫಲತೆ, ಜನರ ಆರ್ಥಿಕ ಸಮಸ್ಯೆ ಪರಿಹರಿಸುವಲ್ಲಿ ವಿಫಲತೆ, ಇವುಗಳ ಜತೆಗೆ ಪ್ರಜಾಪ್ರಭುತ್ವ ವಿರೋಧಿ ಕ್ರಮಗಳು, ವಿಪರೀತ ಕೇಂದ್ರೀಕರಣ, ಸರ್ವಾಧಿಕಾರಿ ವಿಧಾನಗಳು, ಇವೆಲ್ಲದರ ಮೇಲೆ ಬೊಫೋರ್ಸ್ ಇತ್ಯಾದಿ ಹಗರಣಗಳು. ಈ ಹಿನ್ನೆಲೆಯಲ್ಲಿ ಸೋಲುಂಡ ಕಾಂಗ್ರೆಸ್(ಐ) ಚುನಾವಣೆಯ ತೀರ್ಪಿನಿಂದ ಸರಿಯಾದ ಪಾಠ ಕಲಿಯುವಲ್ಲಿಯೂ ವಿಫಲಗೊಂಡಿತು. ಬದಲು ಅಧೋಗತಿ ಗಿಳಿಯುತ್ತಿದ್ದ ತನ್ನ ಮಾನವನ್ನು ಉಳಿಸಿಕೊಳ್ಳಲು ಮುಖ್ಯ ಮಂತ್ರಿಗಳ ಬದಲಾವಣೆ ನಡೆಸಲಾಯಿತು. ಆದರೆ ಜನರ ಮಧ್ಯೆ ಹೋಗಲಿಲ್ಲ, ತಪ್ಪು ಒಪ್ಪಿಕೊಳ್ಳಲಿಲ್ಲ. ದೇಶದ ತುರ್ತು ಸಮಸ್ಯೆಗಳತ್ತ ನೋಡಲಿಲ್ಲ.

ಆದ್ದರಿಂದ ವಿಧಾನಸಭಾ ಚುನಾವಣೆಗಳ ಪ್ರಚಾರ ಕಾಲದಲ್ಲಿ ಅದಕ್ಕೆ ಏನೂ ಪ್ರಭಾವ ಬೀರುವುದು ಸಾಧ್ಯವಾಗಲಿಲ್ಲ. ಪಂಜಾಬ್, ಕಾಶ್ಮೀರ ಸನ್ನಿವೇಶ, ಕೋಮುವಾತಾವರಣ ರಾಷ್ಟ್ರೀಯರಂಗ ಸರ್ಕಾರ ಬಂದ ಮೇಲೆ ಹದಗೆಟ್ಟಿದೆ ಎಂಬ ಒಂದೇ ರಾಗವಿದ್ದದ್ದು ರಾಜೀವ ಗಾಂಧಿ ಬಳಿ. ತನ್ನದೇ ಸರಕಾರಗಳ ಸೃಷ್ಟಿ ಎಂಬುದನ್ನು ಜನರು ಮರೆಯುವಂತೆ ಅವರನ್ನು ತಪ್ಪು ದಾರಿ ಗೆಳೆಯಬಹುದೆಂದು ಅವರ ಎಣಿಕೆಯಾಗಿತ್ತು. ಚುನಾವಣೆಯ ಮೊದಲು ಕಾಂಗ್ರೆ ಮುಖ್ಯಮಂತ್ರಿಗಳು ಘೋಷಿಸಿದ ಅಗ್ಗದ ಜನಪ್ರಿಯತೆಯ ಕ್ರಮಗಳೂ ಜನಗಳ ಮೇಲೆ ಪ್ರಭಾವ ಬೀರಲಿಲ್ಲ. ಏಕೆಂದರೆ ಇಂತಹ ಘೋಷಣೆಗಳ ಅನುಭವ ಅವರಿಗಾಗಿದೆ. ಹೀಗೆ ಎಲ್ಲಾ ರಾಜ್ಯಗಳಲ್ಲಿ ತಾನು ಅಧಿಕಾರ ಉಳಿಸಿ ಕೊಳ್ಳುತ್ತೇನೆ ಎಂಬ ಅದರ ಹೇಳಿಕೆ ಹಾಸ್ಯಾಸ್ಪದವಾಗಿತ್ತಷ್ಟೆ.

ಚುನಾವಣಾ ಫಲಿತಾಂಶ ನಿರೀಕ್ಷಿಸಿದಂತಿತ್ತು. ಅರುಣಾಚಲ ಪ್ರದೇಶ ಬಿಟ್ಟು ಬೇರೆಲ್ಲಾ ಕಡೆಗೆ ಅವಮಾನಕ್ಕೊಳಗಾಯಿತು ಕಾಂಗ್ರೆಸ್(ಐ). ಅದರ ಎಂ.ಎಲ್.ಎ. ಗಳ ಸಂಖ್ಯೆ ೧೧೨೦ ರಿಂದ ೩೯೬ ಕ್ಕಿಳಿಯಿತು. ಲೋಕ ಸಭಾ ಚುನಾವಣೆಗಳಿಗಿಂತಲೂ ಕೆಟ್ಟದಾದ ಫಲಿತಾಂಶ ಅದಕ್ಕೆ. ಜನತೆಯ ಕಾಂಗ್ರೆಸ್(ಐ) ವಿರೋಧಿ ಮನಃಸ್ಥಿತಿ ಎಗ್ಗಿಲ್ಲದೆ ಮುಂದೆ ಸಾಗುತ್ತಿದೆ. ಕಾಂಗ್ರೆಸ್(ಐ) ಪಕ್ಷದ ಮೇಲೇನೆ ಇದರ ಪರಿಣಾಮವಾಗಲಿದೆ. ಜನ ಬೆಂಬಲದಲ್ಲಿನ ದೊಡ್ಡ ನಷ್ಟ ಅದರ ಸಂಘಟನೆಯ ಮೇಲೂ ಪ್ರಭಾವ ಬೀರುವುದು ಖಂಡಿತ. ತಮ್ಮ ಹಾಗೂ ಪಕ್ಷದ ಭವಿಷ್ಯದ ಬಗ್ಗೆ ಕಾಂಗ್ರೆಸ್ಸಿನಲ್ಲಿ ಪುನರಾಲೋಚನೆ ನಡೆಯುವುದೂ ಖಚಿತ.

ಪಶ್ಚಿಮ ಬಂಗಾಳ, ಕೇರಳ ಉಪ ಚುನಾವಣೆಗಳಲ್ಲಿ ಸಿ.ಪಿ.ಐ.(ಎಂ) ಮತ್ತು ಎಡ ಪಕ್ಷಗಳು ದೊಡ್ಡ ವಿಜಯ ಸಾಧಿಸಿದೆ. ರಾಷ್ಟ್ರೀಯ ರಂಗದ ಪ್ರಮುಖ ಅಂಗವಾದ ಜನತಾದಳ ಒರಿಸ್ಸಾದಲ್ಲಿ ಭಾರೀ ಯಶಸ್ಸು ಗಳಿಸಿದೆ. ಎಡಪಕ್ಷಗಳು ಈ ರಾಜ್ಯದಲ್ಲಿ ದುರ್ಬಲವಾಗಿದ್ದರೂ ಜನತಾದಳ ಎಡ ಶಕ್ತಿಗಳ ಒಗ್ಗಟ್ಟು, ಕಾಂಗ್ರೆಸ್(ಐ)ನ್ನು ಸೋಲಿಸುವಲ್ಲಷ್ಟೇ ಅಲ್ಲ, ಬಿ.ಜೆ.ಪಿ.ಯನ್ನು ಅಂಚಿಗೆ ತಳ್ಳುವುದರಲ್ಲಿಯೂ ಯಶಸ್ವಿಯಾಯಿತು. ಜನತಾದಳದ ಸ್ಥಾನಗಳ ಸಂಖ್ಯೆ ೧೯೮೫ ರ ೨೧ ರಿಂದ ೧೨೨ ಕ್ಕೇರಿತು. ಬಿಹಾರದಲ್ಲೂ ಕಾಂಗ್ರೆಸ್(ಐ) ಬಲ ಮೂರನೇ ಒಂದಕ್ಕಿಳಿಯಿತು. ಜನತಾದಳದ ಬಲ ಇಮ್ಮಡಿಗೂ ಹೆಚ್ಚಾಯಿತು. ಸಿ.ಪಿ.ಐ. ತನ್ನ ಬಲವನ್ನು ೧೨ ರಿಂದ ೨೪ ಕ್ಕೇರಿಸಿದರೆ ಸಿ.ಪಿ.ಐ.(ಎಂ) ೧ ರಿಂದ ೬ ಕ್ಕೇರಿಸಿತು. ಬಿಹಾರದಲ್ಲಿ ಎಡ ಪಕ್ಷಗಳ ಪ್ರಭಾವ ಗಮನಾರ್ಹವಾಗಿದೆ. ಒರಿಸ್ಸಾದಂತೆ ಎಡ ಪಕ್ಷಗಳೊಂದಿಗೆ ಒಟ್ಟು ತಿಳುವಳಿಕೆಗೆ ಬಂದಿದ್ದರೆ ಕಾಂಗ್ರೆಸ್(ಐ), ಬಿ.ಜೆ.ಪಿ.ಯ ಬಲ ಮತ್ತಷ್ಟು ಕಡಿಮೆಯಾಗುತ್ತಿತ್ತು. ಬೇಗು ಸರಾಯ್ ಜಿಲ್ಲೆಯ ಉದಾಹರಣೆ ಇದನ್ನು ತೋರಿಸಿಕೊಟ್ಟಿದೆ. ಆದರೆ ಜನತಾದಳ ಕಳೆದ ಬಾರಿ ಗೆದ್ದ ಅಥವಾ ಎರಡನೇ ಸ್ಥಾನ ಪಡೆದ ಕ್ಷೇತ್ರಗಳ ಬಗ್ಗೆಯೂ ಪರಸ್ಪರ ತಿಳುವಳಿಕೆಗೆ ಕೂಡಾ ಬದ್ಧವಾಗಲಿಲ್ಲ.

ಮಹಾರಾಷ್ಟ್ರದ ಚಿತ್ರ ಸ್ವಲ್ಪ ಭಿನ್ನ. ಬಿ.ಜೆ.ಪಿ. ಶಿವಸೇನೆ ಕೂಟ ಅಲ್ಪ ಸಂಖ್ಯಾತರು, ದಲಿತರು ಮತ್ತು ಬೇರೆ ರಾಜ್ಯಗಳಿಂದ ಬಂದು ಇಲ್ಲಿ ವಾಸಿಸುವವರಿಗೊಂದು ಗಂಭೀರ ಬೆದರಿಕೆಯೊಡ್ಡಿತು. ಕಾಂಗ್ರೆಸ್(ಐ) ಬಗ್ಗೆ ಅಸಂತೃಪ್ತಿಯಿದ್ದರೂ ಪ್ರಗತಿಪರ, ಪ್ರಜಾಪ್ರಭುತ್ವ ರಂಗ (ಪಿ.ಡಿ.ಎಫ್.) ಈ ಕೂಟವನ್ನು ಸೋಲಿಸಲಾರದು ಎಂದು ಜನ ಭಾವಿಸಿದರು. ಬಿ.ಜೆ.ಪಿ. ಶಿವಸೇನೆಯ ಬೆದರಿಕೆಯ ಫಲ ಚುನಾವಣಾ ಫಲಿತಾಂಶಗಳಲ್ಲಿ ಎದ್ದು ಕಾಣುತ್ತಿತ್ತು. ಬಹು ಪಾಲು ದಲಿತ, ಅಲ್ಪ ಸಂಖ್ಯಾತ ಮತಗಳು ಕಾಂಗ್ರೆಸ್(ಐ) ಗೆ ಹೋದವು.

ಮಧ್ಯಪ್ರದೇಶ, ಹಿಮಾಚಲ ಪ್ರದೇಶದಲ್ಲಿ ಚಿತ್ರ ಸಂಪೂರ್ಣ ಭಿನ್ನ. ಕಣ್ಣಿಗೆ ಕಾಣುವ ಎಡ ಆಂದೋಲನವಿಲ್ಲದ್ದರಿಂದಾಗಿ, ಜನತಾದಳದ ದೌರ್ಬಲ್ಯದಿಂದಾಗಿ ಕಾಂಗ್ರೆಸ್(ಐ) ವಿರುದ್ಧ ಅಸಂತೃಪ್ತಿಯ ಪೂರ್ಣ ಪ್ರಯೋಜನ ಬಿ.ಜೆ.ಪಿ.ಗೆ ದೊರೆತು ಅದರ ಬಲ ಮಧ್ಯಪ್ರದೇಶದಲ್ಲಿ ೫೮ರಿಂದ ೨೧೯ ಕ್ಕೆ ಹಿಮಾಚಲ ಪ್ರದೇಶದಲ್ಲಿ ೭ ರಿಂದ ೪೪ ಕ್ಕೇರಿತು. ಕಾಂಗ್ರೆಸ್(ಐ) ನ ಬಲ ಅನುಕ್ರಮವಾಗಿ ೨೫೦ ರಿಂದ ೫೬ ಕ್ಕೆ, ೫೮ ರಿಂದ ೮ ಕ್ಕಿಳಿಯಿತು. ಕಳೆದ ಒಂದು ವರ್ಷದಿಂದ ಹಾಲು [illegible] ಬಂದ ಹಿಂದೂ ಕೋಮು ಪ್ರಚಾರವನ್ನು ಬಿ.ಜೆ.ಪಿ. ಪೂರ್ಣವಾಗಿ ಬಳಸಿಕೊಂಡಿತು.

ಗುಜರಾತ್, ರಾಜಸ್ಥಾನದಲ್ಲೂ ಕಾಂಗ್ರೆಸ್(ಐ) ಪೂರ್ಣ ಪರಾಭವ ಕಂಡಿದೆ. ಈ ಎರಡು ರಾಜ್ಯಗಳಲ್ಲಿ ಕಾಂಗ್ರೆಸ್(ಐ) ಬಲ ಅನುಕ್ರಮವಾಗಿ ೧೪೯ ರಿಂದ ೩೩ ಕ್ಕೆ ೧೧೩ ರಿಂದ ೫೦ ಕ್ಕಿಳಿಯಿತು. ಇಲ್ಲಿ ಜನತಾದಳ, ಬಿ.ಜೆ.ಪಿ. ನಡುವೆ ಹೊಂದಾಣಿಕೆಯಾಗಿತ್ತು. ಅಲ್ಪ ಸಂಖ್ಯಾತ ಮತದಾರರು ಸುಮಾರಾಗಿ ಜನತಾದಳಕ್ಕೆ ಮತನೀಡಿದರು. ರಾಜಸ್ಥಾನದಲ್ಲೂ ಸ್ವತಂತ್ರ ಅಭ್ಯರ್ಥಿಗಳ ಆಯ್ಕೆ ಹಾಗೂ ಎಡ ಶಕ್ತಿಗಳೊಂದಿಗೆ ಹೊಂದಾಣಿಕೆ ನಡೆಸಿದ್ದರೆ ಜನತಾದಳ ಇನ್ನೂ ಉತ್ತಮ ಫಲ ಕಾಣಬಹುದಿತ್ತು. ಚುನಾವಣೆಗಳ ನಂತರ ಗುಜರಾತದಲ್ಲಿ ಜನತಾದಳ, ಹೊರಗಿನಿಂದ ಬಿ.ಜೆ.ಪಿ. ಬೆಂಬಲದಿಂದ ಸರಕಾರ ರಚಿಸಿದ್ದರೆ, ರಾಜಸ್ಥಾನದಲ್ಲಿ ಬಿ.ಜೆ.ಪಿ.ಗೆ ಸರಕಾರ ರಚಿಸಲು ಬಿಟ್ಟು ತಾನು ಹೊರಗಿನಿಂದ ಬೆಂಬಲಿಸಿದ್ದರೆ ಚೆನ್ನಾಗಿತ್ತು.

ಅಲ್ಪ ಸಂಖ್ಯಾತರಲ್ಲಿ ಶಂಕೆ

ಈ ಎರಡು ರಾಜ್ಯಗಳಲ್ಲಿ ಸಂಯುಕ್ತ ಸರಕಾರ ಅಲ್ಪ ಸಂಖ್ಯಾತರಲ್ಲಿ ಶಂಕೆಯ ಹುಟ್ಟಿಸುವುದು ಖಂಡಿತ. ವಿಶ್ವ ಹಿಂದೂ ಪರಿಷತ್ತಿನ ಶಿಲಾನ್ಯಾಸದಿಂದ ಚುನಾವಣಾ ಪ್ರಚಾರದ ಹೊಸ ಯೋಜನೆ. ಅದಕ್ಕೆ ಬಿ.ಜೆ.ಪಿ. ಬೆಂಬಲದಿಂದಾಗಿ ಇದಕ್ಕೆ ಇನ್ನಷ್ಟು ಮಹತ್ವ ಬಂದಿದೆ. ಹದಗೆಡುತ್ತಿರುವ ಕಾಶ್ಮೀರ ಪರಿಸ್ಥಿತಿ ಮತ್ತು ಪ್ರಭುತ್ವ ಅಧಿಕಾರ ಪಡೆದು ಪಟ್ಟದ ಬಿ.ಜೆ.ಪಿ. ಕಡೆ ಅಲ್ಪ ಸಂಖ್ಯಾತರನ್ನು ಪುನರಾಲೋಚನೆಗೆ ಹಚ್ಚುವುದೂ ಖಂಡಿತ. ಚುನಾವಣೆಯ ಫಲಿತಾಂಶಗಳು ಪ್ರಕಟವಾದ ನಂತರ ಮೊದಲ ಬಾರಿಗೆ ಬಿ.ಜೆ.ಪಿ. ಹಾಗೂ ಅದರ ಹಿಂದಿನ ಅವತಾರ ಜನಸಂಘದ ಬಗ್ಗೆ ವಾಸ್ತವಿಕತೆಯನ್ನು ಪ್ರತಿಪಾದಿಸಿದೆ ಎಂಬ ಆರ್.ಎಸ್.ಎಸ್. ಮುಖವಾಣಿ "ಆರ್ಗನೈಸರ್" ಮೂಲಕ [illegible] ತೋರಿಸಿಕೊಡುತ್ತದೆ.

ಮಹಾರಾಷ್ಟ್ರ, ಒರಿಸ್ಸಾ, ಬಿಟ್ಟು ಬೇರೆ ಜನತಾದಳದೊಂದಿಗೆ ಹೊಂದಾಣಿಕೆ [illegible] ದ್ದರೂ ಕಳೆದ ಬಾರಿ ಎರಡನೇ ಸ್ಥಾನ ಬಂದಲ್ಲಿ [illegible] ಹೊಂದಾಣಿಕೆಯಾಗಿದ್ದರೂ [illegible]

(ಪುಟ ೮ ನೋಡಿ)

ಜಮ್ಮು ಕಾಶ್ಮೀರ ಕುರಿತು ಸರ್ವಪಕ್ಷ ಸಭೆಯ
ಮಹತ್ವಪೂರ್ಣ ಮನವಿ


ಕಾಶ್ಮೀರ ಸಮಸ್ಯೆಯ ಬಗ್ಗೆ, ದೇಶದ ಎಲ್ಲಾ ರಾಜಕೀಯ ಪಕ್ಷಗಳು ಒಂದು ರಾಷ್ಟ್ರೀಯ ಸಮ್ಮತಿ ರೂಪಿಸಬೇಕೆಂದು ನಾವು ಆರಂಭದಿಂದಲೂ ಹೇಳುತ್ತಾ ಬಂದಿದ್ದೇ. ಈಗ ದೇಶದ ಪ್ರಮುಖ ರಾಜಕೀಯ ಶಕ್ತಿಗಳಿಗೆ ಸನ್ನಿವೇಶದ ಗಂಭೀರತೆಯನ್ನು, ಪ್ರತ್ಯೇಕತಾವಾದಿ ಶಕ್ತಿಗಳ ಚಟುವಟಿಕೆಗಳಿಂದ ರಾಷ್ಟ್ರೀಯ ಐಕ್ಯತೆಗೆ ಬಂದಿರುವ ಬೆದರಿಕೆಯನ್ನು ಎದುರಿಸಲು ಎಲ್ಲಾ ಬಲಗಳನ್ನು ಕ್ರೋಢೀಕರಿಸುವ ಅಗತ್ಯವನ್ನು ಮನಗಂಡಿರುವುದು ಸಂತಸದ ಸಂಗತಿ. ಗಂಭೀರ ಭಿನ್ನಾಭಿಪ್ರಾಯಗಳಿದ್ದರೂ ಸಂದರ್ಭ ಬಂದಾಗ ದೇಶದ ರಾಜಕೀಯ ಪಕ್ಷಗಳು ದೇಶದ ಐಕ್ಯತೆ, ಸಮಗ್ರತೆ ಕಾಪಾಡಲು ಧಾವಿಸಬಲ್ಲವು ಎಂಬುದನ್ನು ಮಾರ್ಚ್ ೭ ರ ಸರ್ವ ಪಕ್ಷ ಸಭೆ ಮತ್ತು ಅದು ಹೊರಡಿಸಿರುವ ಮನವಿ ತೋರಿಸಿಕೊಟ್ಟಿದೆ.

ಈ ಮನವಿ ಒಂದು ರಾಷ್ಟ್ರೀಯ ಸಹಮತ ಪರಿಸ್ಥಿತಿಯ ಗಂಭೀರತೆಯನ್ನು ಅದು ಎತ್ತಿತೋರಿಸಿದೆ. ರಾಜ್ಯದ ಸೂಕ್ಷ್ಮ ಪರಿಸ್ಥಿತಿ, ಬುಡಮೇಲುಗಾರರಿಗೆ ತರಬೇತಿ ನೀಡಿ ಅವರನ್ನು ಕಣಿವೆಗೆ ನುಗ್ಗಿಸಿ ದೇಶವನ್ನು ಅಸ್ಥಿರಗೊಳಿಸುವ ಪಾಕಿಸ್ತಾನಿ ಆಳರಸರ ಪ್ರಯತ್ನಗಳನ್ನು ಅದು ಹೇಳುತ್ತದೆ. ನಮ್ಮ ದೇಶದ ಐಕ್ಯತೆ, ಸಮಗ್ರತೆಯ ವಿರುದ್ಧ ಯಾವುದೇ ಪ್ರಯತ್ನವನ್ನು ವಿಫಲಗೊಳಿಸುವ ಭಾರತೀಯ ಜನತೆ ಒಗ್ಗಟ್ಟಾಗಿ ನಿಲ್ಲುತ್ತಾರೆಂಬ ದೃಢ ನಿರ್ಧಾರವನ್ನು ಅದು ವ್ಯಕ್ತಪಡಿಸಿದೆ.

ಜಮ್ಮು ಕಾಶ್ಮೀರದ ಜನತೆ ಸ್ವಾತಂತ್ರ್ಯ ಆಂದೋಲನ ಕಾಲದಲ್ಲಿ ವಹಿಸಿದ ಭವ್ಯ ಪಾತ್ರ, ದೇಶದ ಇತರಭಾಗಗಳ ಜನಗಳೊಂದಿಗೆ ಬೆಸೆದ ಶಕ್ತಿಯುತ ಸಂಬಂಧ, ಅವರ ಧಾರ್ಮಿಕ ಸ್ವಂತಿಕೆಗಳನ್ನು ಸಂಪೂರ್ಣ ರಕ್ಷಣೆಗೆ ತಮ್ಮ ಆಕಾಂಕ್ಷೆಗಳ ಪೂರ್ಣ ಅಭಿವ್ಯಕ್ತಿಗೆ ನೀಡಿದ ಭರವಸೆಯನ್ನು ಈ ಮನವಿ ಮೆಚ್ಚಿಕೊಂಡಿವೆ. ಈ ಎಲ್ಲಾ ಭರವಸೆಗಳಿಗೆ ಭಾರತದ ಎಲ್ಲಾ ರಾಜಕೀಯ ಪಕ್ಷಗಳು ಬದ್ಧವಾಗಿವೆ ಎಂದು ಈ ಮನವಿ ಹೇಳುತ್ತಾ ಭಾರತೀಯ ಜನತೆಯ ಐಕ್ಯತೆಯನ್ನು ಛಿದ್ರಗೊಳಿಸುವ ಪ್ರಯತ್ನ ಎಲ್ಲಿಂದಲೇ ಬರಲಿ ಅದನ್ನು ಒಂದಾಗಿ ಎದುರಿಸುವ ದೃಢ ನಿರ್ಣಯವನ್ನು ಪುನರುಚ್ಚರಿಸಿದೆ.

ಪುಟ ೮ ನೋಡಿ

ಸ್ವತಂತ್ರ ನಮೀಬಿಯಾದ ಉದಯ



ಬಿಳಿಯ ವಸಾಹತು ಶಾಹಿಗಳ ದಶಕಗಳ ಕಾನೂನು ಬಾಹಿರವಾದ, ವಿಶ್ವದ ಜನಾಭಿಪ್ರಾಯವನ್ನು ಸತತವಾಗಿ ಅವಹೇಳನ ಮಾಡಿದ ಆಳ್ವಿಕೆಯಿಂದ ನಮೀಬಿಯಾ ಮಾರ್ಚ್ ೨೦-೨೧ ರ ಮಧ್ಯರಾತ್ರಿ ಸ್ವತಂತ್ರವಾಗಲಿದೆ. ಮೂರು ದಶಕಗಳ ಕಾಲ ವಿಮೋಚನಾ ಹೋರಾಟದ ಮುಂಚೂಣಿಯಲ್ಲಿದ್ದ ದಕ್ಷಿಣ ಪಶ್ಚಿಮ ಆಫ್ರಿಕಾ ಜನತಾ ಸಂಘಟನೆ ಸ್ವಾಪೋದ ಮುಂದಾಳು ಸಾಮ್ ನುಜೋಮಾ ಸ್ವತಂತ್ರ ನಮೀಬಿಯಾದ ಮೊದಲ ಅಧ್ಯಕ್ಷರಾಗಿ ಪ್ರತಿಜ್ಞೆ ಸ್ವೀಕರಿಸಿದ್ದಾರೆ.

ಅಳಿದುಳಿದ ವಸಾಹತುಶಾಹಿಯ ಇನ್ನೊಂದು ಕೋಟೆ ಉರುಳುತ್ತಿರುವ, ನಮೀಬಿಯಾದಲ್ಲಿ ಶೋಷಣೆಯಿಲ್ಲದ, ಸಮಾನತೆಯ ಪ್ರಜಾಪ್ರಭುತ್ವ ಸಮಾಜ ಕಟ್ಟುವಲ್ಲಿ, ಒಂದು ಹೊಸ ಘಟ್ಟ ಆರಂಭ ಮಾಡಲಿರುವ ಈ ಸಂದರ್ಭದಲ್ಲಿ, ಸ್ವಾಪೋದ ಧೀರ ಕಾರ್ಯಕರ್ತರಿಗೆ ನಮೀಬಿಯಾದ ಹೋರಾಟ ಶೀಲ ಜನತೆಗೆ ಹಾರ್ದಿಕ ಶುಭಾಶಯಗಳು.

ಎಲ್ಲ ಕಡೆ ಪುರಸಭಾ ಚುನಾವಣೆಗಳು ಅನೇಕ ಪ್ರಶ್ನೆಗಳನ್ನು ಎಬ್ಬಿಸಿದೆ. ರಾಯಚೂರಿನ ಸಂಗಾತಿಯೊಬ್ಬರು ಅಲ್ಲಿಯ ಪುರಸಭೆಯ ಸ್ವರೂಪವನ್ನು, ಅದರ ವರ್ಗ ಹಿತಗಳನ್ನು ನಮ್ಮ ಕಣ್ಣ ಮುಂದೆ ಬಿಡಿಸಿಟ್ಟದ್ದಾರೆ. ಪ್ರತಿ ಊರಿನ ಪುರಸಭೆ, ನಗರಸಭೆ, ನಗರ ಪಾಲಿಕೆಗಳಲ್ಲಿಯೂ ಉತ್ಪಾದನಾ ಸಂಪನ್ಮೂಲಗಳಾದ ಭೂಮಿ, ನೀರು ಇವುಗಳ ಮೇಲೆ ಇದೇ ವರ್ಗ ಹಿಡಿತವನ್ನು ಸ್ಪಷ್ಟವಾಗಿ ಕಾಣಬಹುದು. ಇಂತಹ ಲೇಖನಗಳನೇಕವನ್ನು "ಐಕ್ಯರಂಗ ಕಾತುರದಿಂದ ನಿರೀಕ್ಷಿಸುತ್ತದೆ.

ಕೊಳೆತು ನಾರುತ್ತಿರುವ ರಾಯಚೂರು ಪುರಸಭೆ

ಜಿಲ್ಲಾ ಕೇಂದ್ರವಾದ ರಾಯಚೂರಿನ ಪುರಸಭೆ ಸತತ 11 ವರ್ಷ ಕಾಂಗ್ರೆ ಭ್ರಷ್ಟ ಕುಳಗಳ ಕೈಗೆ ಸಿಕ್ಕು ನುಗ್ಗುನುಸಿಯಾಗಿ ಕರುಣಾಜನಕ ಸ್ಥಿತಿ ತಲುಪಿದೆ. ಮಾಜಿ ಚೇರ್ ಮನ್‌ಗಳಾದ ಸುಭಾಣಿ ಮತ್ತು ಅಂಜನೇಯಲುಗಳ ದುರಾಡಳಿತದಲ್ಲಿ ಭ್ರಷ್ಟಾಚಾರ ಪುರಸಭೆಯ ಮೂಲೆ - ಮೂಲೆಗಳಲ್ಲೂ ತಾಂಡವವಾಡಿದೆ. ವಿವಿಧ ಕೆಲಸಗಳಿಗೆ ಲಂಚದ ರೇಟ್‌ಗಳು ನಿಗದಿಯಾಗಿದ್ದು ಅದೃಶ್ಯ ಬೋರ್ಡ್ ಹಾಕಲ್ಪಟ್ಟಿದೆ. ಇಲ್ಲಿ ಯಾವುದೇ ಫೈಲ್‌ಗಳು ಕಳೆದುಹೋಗಬೇಕೆಂದರೆ ಕಳೆದುಹೋಗಿಬಿಡುತ್ತವೆ: ಸೃಷ್ಟಿಯಾಗಬೇಕೆಂದರೆ ಸೃಷ್ಟಿಯಾಗುತ್ತವೆ! ಬಂಡವಾಳಶಾಹಿ ಜಮೀನ್ದಾರಿ ವ್ಯವಸ್ಥೆ ಪುರಸಭೆಯಲ್ಲಿ ಆಡಳಿತ ನಿರ್ವಹಣೆ ಯಲ್ಲೂ ಹೇಗೆ ತನ್ನ ನೀಚಗುಣವನ್ನು ತೋರುತ್ತೆನ್ನುವುದನ್ನು ರಾಯಚೂರು ಪುರಸಭೆಯ ಹಗರಣಗಳ ಮೂಲಕ ತಿಳಿದುಕೊಳ್ಳಬಹುದಾಗಿದೆ.

ಒಂದೆಡೆ ಹತ್ತಾರು ವರ್ಷಗಳಿಂದ ಗೇಣು ಜಾಗಕ್ಕಾಗಿ ಹೋರಾಡುತ್ತಿರುವ ಸಾವಿರಾರು ಕೊಳಚೆ ನಿವಾಸಿಗಳು. ಮತ್ತೊಂದೆಡೆ ನಗರ ಸಭೆಯ ಮತ್ತು ಆರ್ಕಿಯಾಲಜಿ ಇಲಾಖೆಯ ಜಮೀನನ್ನೆಲ್ಲಾ ಕಬಳಿಸುವ ಬಂಡವಾಳಿಗರು ಮತ್ತು ಬೃಹತ್ ವ್ಯಾಪಾರಸ್ಥರು.

ಮೂರು ತಿಂಗಳ ಹಿಂದಷ್ಟೇ ಮುನ್ನೂರುವಾಡಿ ಶಾಲೆ ಹತ್ತಿರದ ಬಡ ಹರಿಜನರ ಗುಡಿಸಲುಗಳನ್ನು ಈಗ ಅಧ್ಯಕ್ಷರಾಗಹೊರಟಿರುವ ಪಾಪರೆಡ್ಡಿಯವರು ಕೀಳಿಸಲು ಸಿದ್ಧರಾಗಿದ್ದಾರೆ. ಈಗಾಗಲೇ ಅಲ್ಲಿ ಸಾಕಷ್ಟು ಜಾಗವನು ಮಾರಿಕೊಂಡಿದ್ದಾಗಿದೆ. ಆದರೂ ದುರಾಸೆಯಿಂದ ಈ ಬಡವರ ಗುಡಿಸಲುಗಳ ಎತ್ತಂಗಡಿ ಮಾಡುವ ಯತ್ನ.

ಎತ್ತಂಗಡಿ ಪ್ರತಿಭಟಿಸಿ ಡಿ.ವೈ.ಎಫ್.ಐ. ನಗರ ಘಟಕ ಆ ಕುಟುಂಬಗಳನ್ನು ಹೋರಾಟ ಕ್ಕಿಳಿಸಿದೆ. ಸಧ್ಯ ಅವರಿಗೆ ರಕ್ಷಣೇ ಪೋಲೀಸರದ್ದಲ್ಲ. ಡಿ.ವೈ.ಎಫ್.ಐ.ದು

ಮಾಜಿ ಅಧ್ಯಕ್ಷರುಗಳ ಪಟ್ಟ ಶಿಷ್ಯ ಮುನೀರ್ ಅಹ್ಮದ್ ಎನ್ನುವ ಕಮೀಷನರ್ ಭ್ರಷ್ಟಾಚಾರಕ್ಕೆ ಪರ್ಯಾಯ ಹೆಸರೆಂದು ಪ್ರಸಿದ್ಧಿ ಪಡೆದ ಮನುಷ್ಯ.. ಹಾಡುಹಗಲೆ, ಲಂಚ ತೆಗೆದುಕೊಳ್ಳುವಾಗ ಇಂಟೆಲಿಜೆನ್ಸಿಯವರು ಹಿಡಿದಾಗ ಎದೆಗುಂದದೆ - ಕುಲುಕಲು ನಗುತ್ತ ಬೆಂಗಳೂರಿಗೆ ಹೋಗಿ ಒಂದು ವಾರದೊಳಗೇ ತನ್ನ ಕಮೀಷನರ್ ಖುರ್ಚಿಯ ಮೇಲೆ ಅಟ್ಟಹಾಸದಿಂದ ಕೂತ! ನಂತರ ಗುಲ್ಬರ್ಗಾದ ಕಾರ್ಪೋರೇಷನ್ ಕಮೀಷನರ್ ಎಂದು ಭಡ್ತಿ ತೆಗೆದುಕೊಂಡು ವರ್ಗವಾಗಿ ಹೋದ!

ಸುಭಾಣಿಯವರು ಆರ್ಕಿಯಾಲಜಿ ಇಲಾಖೆಗೆ ಸೇರಿದ ಐತಿಹಾಸಿಕ ಸ್ಥಳಗಳನ್ನು ಅತಿಕ್ರಮಿಸಿಕೊಂಡು ಬೃಹತ್ ಕಾಂಪ್ಲೆಕ್ಸ್‌ಗಳನ್ನು ನಿರ್ಮಿಸಿಕೊಂಡಿದ್ದಾರೆ. ತಮಗೆ ಬೇಕಾದ ಸಂಸ್ಥೆಗಳಿಗೆ ಉದ್ಯಾನವನಗಳನ್ನು ದಾನವಾಗಿ ಕೊಟ್ಟಿದ್ದಾರೆ. ಬಡಜನರಿಗೆ ನೀಡಬೇಕಿದ್ದ ನಿವೇಶನಗಳನ್ನು ಕೋಟ್ಯಾಧೀಶ ಮಾರವಾಡಿಗಳಿಗೆ 2-3 ಸಾವಿರ ರೂಪಾಯಿಗಳಿಗೆ ಮಾರಿಕೊಂಡಿದ್ದಾರೆ. ಪುರಸಭೆಯ ಆಸ್ತಿಯೆಂದರೆ ತಮ್ಮ ಅಪ್ಪ ಮುತ್ತಪ್ಪರು ಗಳಿಸಿಟ್ಟ ಆಸ್ತಿಯೇನೋ ಎಂದು ತಿಳಿದು ನಡೆದುಕೊಂಡಿದ್ದಾರೆ ಪಾಪ!

ಸುಭಾಣಿ ಅಂಜನೇಯಲು ಪಾಪರೆಡ್ಡಿ ಈ ತ್ರಿಮೂರ್ತಿಗಳ ದೇಹಗಳಷ್ಟೇ ಬೇರೆ. ಜಾಲ ಕೂಟ ಕುತಂತ್ರಗಳೆಲ್ಲ ಒಂದೇ. ಸರದಿ ಪ್ರಕಾರ ಮುನಿಸಿಪಾಲಿಟಿಯನ್ನು ಆಳುವ ವಿಚಾರ ಇವರದು. ಸುಭಾಣಿ ಅಂಜನೇಯಲುಗಳ ಸರದಿ ಮುಗಿದು ಈಗ ಪಾಪರೆಡ್ಡಿಯವರ ಪಾಳಿ ಬಂದಿದೆ. ಈ ತಮ್ಮ ಉತ್ತರಾಧಿಕಾರಿಯನ್ನು ಶತಾಯಗತಾಯ ಛೇರ್ ಮನ್ ಮಾಡ್ಲುವ ಪಣತೊಟ್ಟು ಚುನಾವಣೆ ಕಣಕ್ಕೆ ಸುಭಾಣಿಯವರ ಗ್ಯಾಂಗ್ ಧುಮುಕಿದೆ.

ಇಂಥ ಪರಿಸ್ಥಿತಿಯಲ್ಲಿ ಸಮಸ್ತ ನಾಗರಿಕರು ಬಹಳ ಜಾಗರೂಕತೆಯಿಂದ ತೀರ್ಮಾನಿಸಬೇಕಿದೆ. ಕಾಂಗ್ರೆಸ್‌ನ ದುಷ್ಟ ಕೂಟ ಹೇಗೆ ಪುರಸಭೆಯನ್ನು ಕೊಳ್ಳೆಹೊಡೆದಿದೆಯೆಂಬುದನ್ನು ತಿಳಿದುಕೊಳ್ಳಬೇಕಿದೆ.

ಇಡೀ ನಗರವನ್ನು ಮುಖ್ಯವಾಗಿ ಮೂರು ಸಮಸ್ಯೆಗಳು ಬಾಧಿಸುತ್ತವೆ.

1) ನೀರು 2) ತೆರಿಗೆ 3) ಮಲಿನತೆ.

ಪ್ರತಿಷ್ಠಿತ ಕಾಲೋನಿ ನಿಜಲಿಂಗಪ್ಪ ಕಾಲೋನಿಯಲ್ಲಿಯೇ ನಲ್ಲಿ ನೀರಲ್ಲಿ ಚರಂಡಿ ನೀರು ಮಿಶ್ರವಾಗಿ ಬರುತ್ತಿದೆ. ಜವಾಹರನಗರ, ವಾಸವಿ ನಗರ, ಸಾವಿತ್ರಿ ಕಾಲೋನಿ, ಎನ್.ಜಿ.ಓ. ಕಾಲೋನಿಗಳಲ್ಲಿ ನೀರಿನ ತೀವ್ರ ಅಭಾವ ಉಂಟಾಗಿದೆ. ಇಲ್ಲಿನ ಜನ "ನೀರಿಲ್ಲವೆಂದು ಅಳಬೇಕೆಂದರೂ ಕಣ್ಣಲ್ಲಿ ಕೂಡಾ ನೀರಿಲ್ಲದಾಗಿದೆ" ಎನ್ನುತ್ತಾರೆ.

ಈಗ್ಗೆ ನಾಲ್ಕು ವರ್ಷಗಳ ಹಿಂದೆ ಶಾಸ್ತ್ರಿ ನಗರ, ನೀರ ಬಾವಿ ಕುಂಟಾ, ಕಾಲಾ ತಲಾಬ್ ಮುಂತಾದ ಕೊಳಚೆ ಪ್ರದೇಶದ ನಿವಾಸಿಗಳು ಕುಡಿಯುವ ನೀರಿಗಾಗಿ ಹೋರಾಟಕ್ಕಿಳಿದಾಗ ಕೊಳಚೆಯೇತರ ಪ್ರದೇಶದ ಜನ ನಿಶ್ಚಿಂತವಾಗಿದ್ದರು. ಇಂದು ಇವರೇ ಕೊಳಚೆ ನಿವಾಸಿಗಳ ರೀತಿಯಲ್ಲಿ ಹೋರಾಟದ ಹಾದಿ ಹಿಡಿದಿರುವುದು ಸ್ವಾಗತಾರ್ಹ ವಿಷಯ.

ಜನಕ್ಕೆ ಕುಡಿಯಲೂ ನೀರಿಲ್ಲದಾಗ ಪುರಸಭೆ ಇಂಡಸ್ಟಿಗಳಿಗೆ ಕಳ್ಳತನದಿಂದ ಕಡಿಮೆ ಬೆಲೆಗೆ ನೀರು ಮಾರಿಕೊಂಡದ್ದಿದೆ. ಅದರ ವಿವರ ಮುಂದೆ ಬರುತ್ತದೆ.

ತೆರಿಗೆ ವಿಷಯಕ್ಕೆ ಸಂಬಂಧಿಸಿ ಹೇಳಬೇಕೆಂದರೆ ಸ್ವಂತಕ್ಕೆ ವಾಸಿಸಲು ಕಟ್ಟಿಕೊಂಡ ಮನೆಗಳಿಗೆ ಸಾವಿರಗಟ್ಟಲೆ ತೆರಿಗೆ ಹಾಕಿ ಬೃಹತ್ ಹೋಟೆಲ್ ಮತ್ತು ವ್ಯಾಪಾರೀ ಮಳಿಗೆಗಳಿಗೆ ತೀರಾ ಸಾಂಕೇತಿಕ ತೆರಿಗೆ ಹಾಕಲಾಗಿದೆ.

ಪುರಸಭೆಗಳು ತೆರಿಗೆ ವಿಧಿಸಲು ಒಂದು ಮಾನದಂಡವಿದೆ. ಒಂದು ನಿರ್ದಿಷ್ಟ ಕಟ್ಟಡದ ಬಾಡಿಗೆ 1 ವರ್ಷಕ್ಕೆ ಎಷ್ಟೆಂದು ಅಂದಾಜು ಮಾಡಿ ಆ ಮೊತ್ತದ ಮೇಲೆ ಶೇ. 10 ರವರೆಗೆ ತೆರಿಗೆ ವಿಧಿಸಬಹುದು ಎಂದಿದೆ. ಆದರೆ ಈ ಪುರಸಭೆಯ ಪುಢಾರಿಗಳಿಗೆ ಆ ಯಾವ ಮಾನದಂಡವೂ ಬೇಕಿಲ್ಲ. ಇವರಿಗೆ ಲಂಚದ್ದೊಂದೇ ಮಾನದಂಡ! ಸಂಬಂಧಿಸಿದ ಅಧಿಕಾರಿಗಳು, ಕಮೀಷನರ್‌ಗಳು, ಚೇರ್‌ಮನ್ ಎಲ್ಲ ಸೇರಿ ಸಿಕ್ಕಂತೆ ಲಂಚ ತಿಂದು ಪುರಸಭೆಯ ಬೊಕ್ಕಸಕ್ಕೆ ದ್ರೋಹ ಬಗೆದಿದ್ದಿದೆ. ಈಗ ತೆರಿಗೆ ಮೂಲಕ ಬರುವ 18-20 ಆದಾಯ ಲಕ್ಷ ಮಾತ್ರ. ಇದನ್ನೇ ಸರಿಯಾಗಿ ನಿಗದಿಗೊಳಿಸಿದರೆ ಕೋಟಿಗೂ ಮಿಕ್ಕಿ ಬರುತ್ತದೆಂದು ಒಂದು ಅಂದಾಜು.

ಜಿಲ್ಲಾಧಿಕಾರಿಯವರು ತೆರಿಗೆ ಪುನರಂದಾಜು ಮಾಡಲು ಹಚ್ಚಿಸಿ ಈಗಿದ್ದುದಕ್ಕಿಂತ 3-4 ಪಟ್ಟು ಎಲ್ಲ ಕಟ್ಟಡಗಳಿಗೆ ಸಾರಾಸಗಟು ಹೆಚ್ಚಿಗೆ ಮಾಡಿಸಿದರು. ಸಹಜವಾಗೇ ಜನರೆಲ್ಲ ತೀವ್ರವಾಗಿ ಪ್ರತಿಭಟಿಸಿದರು. ತೆರಿಗೆಗಳನ್ನಷ್ಟೇ ಪತ್ತೆ ಹಚ್ಚಿ ಅಂತಹವರ ಬೃಹತ್ ಕಟ್ಟಡ ಬಂಗಲೆಗಳಿಗೆ ಹೆಚ್ಚು ಮಾಡಿದ್ದರೆ ಜಾಣತನದ ಕೆಲಸವಾಗಿರುತ್ತಿತ್ತು. ಈಗ ಆ ತೆರಿಗೆಗಳ್ಳರು ಸಾಮಾನ್ಯರೊಂದಿಗೆ ಧ್ವನಿಗೂಡಿಸಿ "ನಮಗೂ ತೆರಿಗೆ ಹೆಚ್ಚಾಯಿತು" ಎನ್ನುತ್ತಿದ್ದಾರೆ! ಮುಂಬರುವ ಕೌನ್ಸಿಲ್ ಈ ಕೆಲಸವನ್ನು ಸರಿಯಾದ ರೀತಿಯಲ್ಲಿ ನಿರ್ವಹಿಸಿ ಜನಸಾಮಾನ್ಯರಿಗೇ ಕಡಿಮೆ ತೆರಿಗೆ ಹೆಚ್ಚಿನ ಸೌಲಭ್ಯಗಳನ್ನು ಒದಗಿಸಬೇಕಾಗಿದೆ.

ತೆರಿಗೆಯಲ್ಲಿ ನಡೆಯುವ ತಾರತಮ್ಯವನ್ನು ಈ ಕೆಳಗಿನ ವಿವರಣೆಗಳಿಂದ ತಿಳಿದುಕೊಳ್ಳಬಹುದು.

ಸ್ಟೇಷನ್ ರೋಡ್‌ನಲ್ಲಿರುವ ಬೃಹತ್ 'ಉಮಾ' ಕಾಂಪ್ಲೆಕ್ಸ್‌ನ ಆದಾಯ-ತೆರಿಗೆ ವಿವರಗಳು ಈ ರೀತಿ ಇವೆ.

1)	ಡಬಲ್ ರೂಮ್‌ಗಳು ಪ್ರತಿ ದಿನ ಅಂದಾಜು ರೂ 60/-ರ ಬಾಡಿಗೆಯಂತೆ 1 ತಿಂಗಳಿಗೆ	45,000=00
2)	12 ಅಂಗಡಿಗಳು ತಿಂಗಳಿಗೆ ರೂ. 300/-ರಂತೆ	3,6000-00
3)	ಶಾಖಾಹಾರಿ ರೆಸ್ಟಾರೆಂಟ್ ತಿಂಗಳಿಗೆ	2000-00
4)	ಮಾಂಸಾಹಾರಿ ರೆಸ್ಟಾರೆಂಟ್ ತಿಂಗಳಿಗೆ	2000-00
5)	1 ಆಫೀಸ್ ಕಾಂಪ್ಲೆಕ್ಸ್ ತಿಂಗಳಿಗಿ	'1,500-00
	ಒಟ್ಟು ರೂ.	54,100-00

ಈ ಮೊತ್ತ 1 ವರ್ಷಕ್ಕೆ ರೂ. 6,49,200 ಆಗುತ್ತದೆ. ಇದರ ಮೇಲೆ ಶೇ. 10 ಎಂದರೆ ರೂ. 64,920 ಸಧ್ಯ ಇದಕ್ಕೆ ವಿಧಿಸಿರುವ ತೆರಿಗೆ ಕೇವಲ ರೂ. 5,000 ಈಗ ಇನ್ನೊಂದು ಬೃಹತ್ ಹೋಟೆಲಿನ ವಿವರಗಳನ್ನು ನೋಡಬಹುದು.

ಹೋಟೆಲ್ ಎಸ್.ಎಲ್.ವಿ. ಟೂರಿಸ್ಟ್ ಹೋಮ್ ಇದನ್ನು ಪ್ರತಿ ತಿಂಗಳಿಗೆ ರೂ. 40,000 ದಂತೆ ಲೀಜ್ ಕೊಡಲಾಗಿದೆ. ಇದು ವರ್ಷಕ್ಕೆ ರೂ. 4,80,000 ಆಗುತ್ತದೆ. ಇದಕ್ಕೆ ಶೇ. 10 ತೆರಿಗೆ ವಿಧಿಸಿದರೆ ರೂ. 48,000 ಆಗುತ್ತದೆ. ಆದರೆ ಸಧ್ಯ ಕೇವಲ ರೂ. 11,050 ಮಾತ್ರ ವಿಧಿಸಲಾಗಿದೆ!

ಇದೇ ರೀತಿಯಲ್ಲಿ ಸುಭಾಣಿ ಕಾಂಪ್ಲೆಕ್ಸ್ ನೃಪತುಂಗ ಹೋಟೆಲ್, ಪ್ರಿಯಾ ಹೋಟೆಲ್ ಅಮರ ಖೇಡ್ ಕಾಂಪ್ಲೆಕ್ಸ್, ಎಸ್.ಆರ್.ಎಸ್ ಟೂರಿಸ್ಟ್ ಹೋಮ್ ಮುಂತಾದ ಪ್ರಮುಖ ಕಟ್ಟಡಗಳಿಗೆ ಶಾಸ್ತ್ರಕ್ಕೆ ತೆರಿಗೆ ವಿಧಿಸಿದೆ ಈ ರಾಯಚೂರು ಪುರಸಭೆ!

ಮಾಲಿನ್ಯದ ಬಗ್ಗೆ ವಿವರಣೆಯ ಅಗತ್ಯವೇ ಇಲ್ಲ. ಬೀದಿಗಳಲ್ಲಿ ಅಡ್ಡಾಡುವ ಯಾರೂ ಮೂಗು ಮುಚ್ಚದೆ ಅಡ್ಡಾಡುವ ಧೈರ್ಯ ಮಾಡುವಂತಿಲ್ಲ. ಕೊಳಚೆ ನಿರ್ಮೂಲನಾ ಮಂಡಳಿ ಇಲ್ಲಿನ ಕೆಲ ಪ್ರದೇಶಗಳನ್ನು ಕೊಳಚೆ ಎಂದು ಘೋಷಿಸಿದೆ. ನಾಗರಿಕರೆಲ್ಲ ಸೇರಿ ಇಡೀ ನಗರವನ್ನೇ ಕೊಳಚೆ ಪ್ರದೇಶವೆಂದು ಸಾರಲು ಒತ್ತಾಯಿಸಿ ಹೋರಾಟ ಮಾಡಿದರೆ ಅದರಲ್ಲಿ ತಪ್ಪೇನೂ ಇಲ್ಲ.

ಈ ಮುಂದೆ ಅಂಜನೇಯಲು ಅವರ ಭ್ರಷ್ಟಾಚಾರದ ಸಾಧನೆಗಳ ಪಟ್ಟಿ ನೀಡಲಾಗಿದೆ.

ಅಧ್ಯಕ್ಷರಾದ ಮೇಲೆ ಬೇರೆ ಯಾವ ವ್ಯಾಪಾರ-ವ್ಯವಹಾರಗಳ ಆದಾಯದ ಮೂಲವಿಲ್ಲದೆಯೇ ಅಂದಾಜು ರೂ. 4,50,000 ಬೆಲೆ ಬಾಳುವ ಬಂಗಲೆ ಕಟ್ಟಿಸಿಕೊಂಡಿದ್ದಾರೆ.

ಹರಿಜನರಿಗಾಗಿ ಖರ್ಚುಮಾಡಬೇಕೆಂದಿರುವ ಶೇಕಡ 18 ಬಜೆಟ್ ಹಣದಲ್ಲಿ ತಮ್ಮ ಮಗ ಡೈರೆಕ್ಟರ್ ಆಗಿರುವ ಮತ್ತು ಸ್ವತಃ ತಾವೇ ಸದಸ್ಯರಾಗಿರುವ "ಬಾಪೂಜಿ ಸಹಕಾರಿ ಸಂಘಕ್ಕೆ ರೂ. 10,000 ಕ್ಯಾಪಿಟಲ್ ಅಮೌಂಟ್ ಸ್ಯಾಂಕ್ಷನ್ ಮಾಡಿದ್ದಾರೆ.

ಎಸ್.ಆರ್.ಎಸ್. ಟೂರಿಸ್ಟ್ ಹೋಟೆಲ್‌ಗೆ 120 X 30 ಜಾಗೆಯನ್ನು ಲಂಚ ಪಡೆದು ಕಡಿಮೆ ದರಕ್ಕೆ ಮಾರಿಕೊಂಡಿದ್ದಾರೆ.

ಶಂಕರ್ ಜಿದಾತಾರ್ ಎನ್ನುವ ಕೋಲ್, ಕಂಟ್ರಾಕ್ಟರ್‌ಗೆ 5 ಲಕ್ಷ ರೂ. ಬೆಲೆ ಬಾಳುವ 2 ಎಕರೆ 10 ಗಂಟೆ (ಸರ್ವೆ ನಂ. 1221) ಜಮೀನನ್ನು ಏನೂ ಬೆಲೆ ಬಾಳದ

ಪುಟ 6 ಕ್ಕೆ

ಐನೂರು ರೂಪಾಯಿಯವೆ

ಪಕ್ಷದ ಪ್ರಭಾತ್ ಪತ್ರಿಕೆಗೆಂದು ನಿಧಿ ಸಂಗ್ರಹಿಸಲು ಕಾಂ. ಎ.ಕೆ.ಜಿ.ಯವರು ಸಿಲೋನ್, ಬರ್ಮಾ, ಮುಂತಾದ ದೇಶಗಳಿಗೆ ಹೋಗಿಬಂದ ಸಂದರ್ಭವನ್ನು ಕಾಂ. ಇ.ಎಂ.ಎಸ್.ರವರು ಸ್ಮರಿಸಿಕೊಂಡಿದ್ದಾರೆ. ನಿಧಿ ಸಂಗ್ರಹಣೆ ಒಂದು ರಾಜಕೀಯ ಪ್ರಚಾರದ ವಿಧಾನವನ್ನಾಗಿಸಿದ ಅನುಭವ ಕೇಳಿದ ಕಾಂ. ಪಿ.ಸಿ. ಜೋಶಿ ಮತ್ತಿತರೆ ಸಂಗಾತಿಗಳಿಗೆ ಸ್ಫೂರ್ತಿ ನೀಡಿತು.

ಎ.ಕೆ.ಜಿ. ನಿಧಿ ಸಂಗ್ರಹಣೆ ಕಾರ್ಯವನ್ನು ಗಂಭೀರವಾಗಿ ಪರಿಗಣಿಸುತ್ತಿದ್ದರು. ಹೋದ ಕಡೆಯಲ್ಲೆಲ್ಲಾ ಒಂದು ನಿರ್ದಿಷ್ಟ ಯೋಜನೆಯಿರಿಸಿಕೊಂಡೇ ಹೊಗುತ್ತಿದ್ದರು. ಒಮ್ಮೆ ಬಾಂಬೆಯಿಂದ ಹಿಂತಿರುಗುವಾಗ ರೂ. ೫೦೦/-ಗಳನ್ನು ಪತ್ರಿಕೆಗಾಗಿ ಸಂಗ್ರಹಿಸಲಾಗಿದೆಯೆಂದು ಕಾಂ. ಜೋಷಿ ಮತ್ತು ಕಾಂ. ಅಧಿಕಾರಿಯವರಿಗೆ ಹೇಳಿದರು. ಅವರು ಆಶ್ಚರ್ಯದಿಂದ ಅದು ಹೇಗೆಂದರು? ಕೆಲಸದ ನಡುವೆ ಬಿಡುವು ಮಾಡಿಕೊಂಡು ಮಲೆಯಾಳಿಗಳಿಂದ ಸಂಗ್ರಹಿಸಿದುದನ್ನು ಕೇಳಿದ ಕಾಂ. ಜಿ. ಅಧಿಕಾರಿಯವರು ಆಗಾಗ ಐದು ನೂರು ರೂಪಾಯಿಯವನೆಂದು ತಮಾಷೆ ಮಾಡುತ್ತಿದ್ದರು.

ಎ.ಕೆ.ಜಿ. ನಿಧಿ ಸಂಗ್ರಹಿಸುವುದು ಮಾತ್ರವಲ್ಲ ನಿಧಿ ನೀಡುವುದರಲ್ಲಿ ಅವರದು ವಿಶೇಷ ಸಾಮರ್ಥ್ಯ. ಒಮ್ಮೆ ಅವರು ಆಸ್ಪತ್ರೆಯಲ್ಲಿರುವಾಗ ಕಯ್ಯೂರು ವೀರರ ಸ್ಮಾರಕಕ್ಕೆ ಧನ ಸಹಾಯ ನೀಡಬೇಕೆಂಬ ಮನವಿಯನ್ನು ಪತ್ರಿಕೆಯಲ್ಲಿ ಓದಿದರು. ಕೂಡಲೇ ರೂ. ೨೫/-ಗಳನ್ನು ಕಳುಹಿಸಿದರು. ಜೊತೆಗೆ ಪತ್ರವೊಂದನ್ನು ಬರೆದು ಆಗಸ್ಟ್‌ನಲ್ಲಿ ಪಾರ್ಲಿಮೆಂಟ್ ಸೇರುತ್ತಿರುವುದಾಗಿಯೂ ಆ ಸಂದರ್ಭಕ್ಕೆ ರಶೀದಿ ಪುಸ್ತಕ ಮತ್ತು ಕರಪತ್ರಗಳನ್ನು ಕಳಿಸಿದಲ್ಲಿ ಇನ್ನೂ ಹೆಚ್ಚಿಗೆ ಸಂಗ್ರಹಿಸಿ ಕೊಡಲಾಗುವುದೆಂದು ತಿಳಿಸಿದ್ದರು. ಈ ಥರದ ಜವಾಬ್ದಾರಿ ಸ್ವತಃ ತೆಗೆದುಕೊಳ್ಳುವುದು ಅವರ ಸ್ವಭಾವವಾಗಿತ್ತು. ೧೯೩೯ ರಲ್ಲಿ ಕಮ್ಯುನಿಸ್ಟ್ ಪಕ್ಷ ಮೂರು ಲಕ್ಷ ರೂ. ಗಳ ನಿಧಿ ಸಂಗ್ರಹಕ್ಕೆ ಕರೆ ಕೊಟ್ಟಾಗ ಕಣ್ಣಾನೂರಿನ ಜಿಲ್ಲಾ ಸಮಿತಿಗೆ ಕಾಂ. ಎ.ಕೆ.ಜಿ.ಯವರು ರೂ. ೫೧-೦೦ಗಳನ್ನೂ ತಕ್ಷಣವೇ ಕಳಿಸಿಕೊಟ್ಟರು.

ಮಾಹೆ ವಿಮೋಚನಾ ಹೋರಾಟ (೧೯೫೪)ದಲ್ಲಿ ಚೆರುಕಲ್ಲಾಹಿಲ್ ಗೋಲಿಬಾರು ನಡೆದು ಕಾಂ. ಎಂ. ಅಚ್ಯುತನ್, ಕಾಂ. ಅನಂತನ್ ಎಂಬ ಸಂಗಾತಿಗಳು ಹುತಾತ್ಮರಾದರು. ಈ ಸಮಯದಲ್ಲಿ ಕಾಂ. ಎ.ಕೆ.ಜಿ. ಹೊರ ರಾಜ್ಯದಲ್ಲಿದ್ದರು. ಸುದ್ದಿ ತಿಳಿದ ಅವರು ಕೂಡಲೇ ಶ್ರದ್ಧಾಂಜಲಿ ಸಂದೇಶ ಕಳಿಸಿದರು. ಕೇರಳಕ್ಕೆ ಹಿಂತಿರುಗಿದ ಬಳಿಕ ಹುತಾತ್ಮ ಸಂಗಾತಿಗಳ ಮನೆಗಳಿಗೆ ತೆರಳಿದರು. ಬಳಿಕ ಸ್ಮಾರಕ ನಿರ್ಮಿಸಲು ಸಮಿತಿಗೆ ರೂ. ೧೦-೦೦ ಗಳನ್ನು ನೀಡಿದರು.

ಕ್ಯಾಲಿಕಟ್ ಜಿಲ್ಲೆಯಲ್ಲಿ ಒಬ್ಬ ಕಾರ್ಯಕರ್ತರಾಗಿದ್ದ ಕೆ. ವಿಜಯ ರಾಘವನ್ ಎಂಬ ಸಂಗಾತಿ ಅಸ್ವಸ್ಥತೆಯಿಂದ ಆಸ್ಪತ್ರೆ ಸೇರಿದ್ದರು. ಸರಿಯಾಗಿ ಊಟ-ವಿಶ್ರಾಂತಿ ಸಿಗದೇ ಕಾರ್ಮಿಕ ರಂಗದಲ್ಲಿ ಅವಿರತವಾಗಿ ದುಡಿದ ಪರಿಣಾಮ ಇದಾಗಿತ್ತು. ಕಾಂ. ಎ.ಕೆ.ಜಿ. ಅವರನ್ನು ಭೇಟಿಯಾಗಿ ಹತ್ತು ರೂ. ಗಳನ್ನು ನೀಡಿದರಲ್ಲದೇ ಪಕ್ಷ ಭೇದ ವೆಣಿಸದೇ ಸಹಾಯ ನೀಡಬೇಕೆಂದು ಪತ್ರಿಕಾ ಹೇಳಿಕೆಯಲ್ಲಿ ಮನವಿ ಮಾಡಿದರು. ನಿಧಿ ಸಂಗ್ರಹಿಸುವ ಮತ್ತು ವೈಯಕ್ತಿಕವಾಗಿ ನೀಡುವ ಪರಿಪಾಠ

ಇತಿಹಾಸದ ಪುಟಗಳಿಂದ

ಎ.ಕೆ.ಜಿ. ಯವರದು.

'ಮುಂಚೆಯೇ ಪರಿಶೀಲಿಸಬೇಕಿತ್ತು'

೧೯೬೧ ರಲ್ಲಿ ರೈತ ಚಳುವಳಿ ಬಿರುಸಾಗಿ ನಡೆದಿತ್ತು. ಎಲ್ಲೆಲ್ಲೂ ಪಿಕೆಟಿಂಗ್ ನಡೆಯುತ್ತಿತ್ತು. ಪೋಲೀಸರು ಜನರನ್ನು ಬಂಧಿಸಿ ನಂತರ ಬಿಡುಗಡೆ ಮಾಡುತ್ತಿದ್ದರು. ಬರಬರುತ್ತಾ ಈ ಧೋರಣೆ ಬದಲಾಯಿಸಿ ಜೈಲಿಗೆ ತಳ್ಳತೊಡಗಿದರು.

ಕೊಚ್ಚಿಯಲ್ಲಿ ನಡೆಯುತ್ತಿದ್ದ ಚಳುವಳಿಯಲ್ಲಿ ಭಾಗವಹಿಸುತ್ತಿದ್ದ ಒಬ್ಬ ಸಂಗಾತಿ 'ಹಾರ್ಬರ್ ಗಾಂಧಿ' ಪಿಕೆಟಿಂಗ್‌ನಲ್ಲಿ ಭಾಗಿಯಾದ್ದರಿಂದ ಎರಡು ವಾರಗಳ ಜೈಲುವಾಸ ನೀಡಲಾಯಿತು. ಎರಡನೇ ಬಾರಿಗೂ ಇದನ್ನೆ ಅನುಸರಿಸಲಾಯಿತು.

ಹಾರ್ಬರ್ ಗಾಂಧಿ ಕೊಚ್ಚಿನ್ ಪೋರ್ಟ್‌ನಲ್ಲಿ ತಾತ್ಕಾಲಿಕ ನೌಕರರಾಗಿದ್ದರು. ಮೊದಲನೆ ಬಾರಿ ಜೈಲಿಗೆ ತಳ್ಳಿದಾಗಲೇ ಅವರ ರಜೆ ಅವಧಿ ಮುಗಿದು ಹೋಯಿತು. ಎರಡನೆ ಬಾರಿಗೆ ರಜೆ ವಿಸ್ತರಣೆಯ ಸಾಧ್ಯತೆಯೂ ಇರಲಿಲ್ಲ. ಅರ್ಜಿಯನ್ನು ಜೈಲಿನಿಂದ ಕಳುಹಿಸುವುದೆಂದರೆ ಕೆಲಸ ಶಾಶ್ವತ ಕಳೆದುಕೊಂಡಂತೆ. ಅಲ್ಪ ಸಂಬಳವನ್ನೇ ಇಡೀ ಕುಟುಂಬ ಅವಲಂಬಿಸಿದೆ. ಕಾಂ. ಎ.ಕೆ.ಜಿ.ಯವರು ಜೈಲಿನಲ್ಲಿದ್ದರು. ಕೂಡಲೇ ತುರ್ತು ಪತ್ರ ಬರೆದು ಅಂಚೆಗೆ ರವಾನಿಸುವ ವ್ಯವಸ್ಥೆ ಮಾಡಿದರು. ಪಿಕೆಟಿಂಗ್ ನಡೆಸುವಾಗ ಸ್ವಯಂ ಸೇವಕರನ್ನು ಆಯ್ಕೆ ಮಾಡುವಾಗ ಈ ಅಂಶಗಳನ್ನು ಪರಿಗಣಿಸಬೇಕಿತ್ತೆಂದು ಕಾಂ. ಎ.ಕೆ.ಜಿ. ತಿಳಿಸಿದರು. ಎರಡು ದಿನಗಳ ಬಳಿಕ ಹಾರ್ಬರ್‌ಗಾಂಧಿಯವರು ಜಾಮೀನಿನ ಮೇಲೆ ಬಿಡುಗಡೆಯಾದರು.

- ರಾಜನ್-ಗುರುಶಾಂತ್

ಕಾಸರಗೊಡಿನ ಬಗ್ಗೆ

ಎಸ್. ಆರ್. ಆರಾಧ್ಯ

ವೀರೇಂದ್ರ ಪಾಟೀಲ್ "ಅಪರಿಮಿತ" ಆಸಕ್ತಿ !!

ಇತ್ತೀಚೆಗೆ ಮಾರ್ಚ್ ೩ ಮತ್ತು ೪ ರಂದು ಕಾಸರಗೋಡಿನಲ್ಲಿ ಸಾಹಿತ್ಯ ಸಮ್ಮೇಳನವೊಂದನ್ನು ಏರ್ಪಡಿಸಲಾಗಿತ್ತು. ಹುಬ್ಬಳ್ಳಿ ಸಾಹಿತ್ಯ ಪರಿಷತ್ತಿನ ಸಮ್ಮೇಳನ ಹಾಗೂ ಬೆಂಗಳೂರಿನ ಪರ್ಯಾಯ ಸಾಹಿತ್ಯ ಸಮ್ಮೇಳನಗಳ ಬೆನ್ನಲ್ಲೇ ಜರುಗಿದ ಕಾಸರಗೋಡು ಸಮ್ಮೇಳನ ಮತ್ತೊಂದು ರೀತಿಯಲ್ಲಿ ವಿವಾದಾತ್ಮಕ ವೆನಿಸಿದೆ. ಹುಬ್ಬಳ್ಳಿಯಲ್ಲಿ ಭರ್ಜರಿ ಭೋಜನ ಉಣಬಡಿಸಿದ ಪಂಡಿತೋತ್ತಮರನ್ನು ತಣಿಸಿದ ಧರ್ಮಸ್ಥಳದ ವೀರೇಂದ್ರ ಹೆಗ್ಗಡೆಯವರೇ ಈಸಮ್ಮೇಳನವನ್ನು ಉದ್ಘಾಟಿಸಿರುವುದು ವೈಶಿಷ್ಟ್ಯ ಪೂರ್ಣವಾಗಿದೆ.

ಕ್ರಿಯಾ ಸಮಿತಿ ಪ್ರತಿಭಟನೆ:

ಕನ್ನಡ ಸಾಹಿತ್ಯ ಸಮ್ಮೇಳನವೆಂದು ಹೆಸರಿಸುವ ಬದಲು 'ಕನ್ನಡಿಗರ' ಸಾಹಿತ್ಯ ಸಮ್ಮೇಳನವೆಂದು ಕರೆದಿರುವುದೇ ಕನ್ನಡ ಸಾಹಿತ್ಯದ ಬಗ್ಗೆ ಆಸಕ್ತಿ ಹೊಂದಿರುವ ಕಾಸರಗೊಡಿನ ಕನ್ನಡೇತರರನ್ನು ಸಮ್ಮೇಳನವು ದೂರವಿಟ್ಟಿತ್ತು. ಇನ್ನೊಂದೆಡೆ 'ಕನ್ನಡ ಕ್ರಿಯಾ ಸಮಿತಿ'ಗೆ ಸೇರಿದ ಕೆಲವು ಕನ್ನಡಿಗರೇ ಈ ಸಮ್ಮೇಳನ 'ಸಾಹಿತ್ಯೇತರ' ಉದ್ದೇಶಗಳನ್ನು ಹೊಂದಿದೆಯೆಂದು ಬಹಿರಂಗವಾಗಿ ಪ್ರತಿಭಟಿಸಿದರು. ಕಾಸರಗೊಡಿನ ಅನೇಕ ಸಾಹಿತ್ಯ ಸಾಂಸ್ಕೃತಿಕ ಸಂಸ್ಥೆಗಳನ್ನು ಸಮ್ಮೇಳನದಲ್ಲಿ ಸೇರಿಸಿಕೊಂಡಿಲ್ಲ; ಕರ್ನಾಟಕ ಸರ್ಕಾರದಿಂದ ೭.೫ ಲಕ್ಷರೂ ಸಹಾಯಧನ ಪಡೆದು ನಿರ್ಮಿಸಲಾದ 'ಲಲಿತ ಕಲಾಸದನ'ದಲ್ಲಿ ದುಬಾರಿ ಬಾಡಿಗೆ ವಿಧಿಸಲಾಗುತ್ತಿದೆ. ಮುಂತಾಗಿ ಆಕ್ಷೇಪವೆತ್ತಿದ ಕ್ರಿಯಾ ಸಮಿತಿ ಕಾರ್ಯಕರ್ತರು ಸಮ್ಮೇಳನದ ಸಭಾಂಗಣದಿಂದ ಹೊರ ನಡೆದು ನಗರದಲ್ಲಿ ಪಂಜಿನ ಮೆರವಣಿಗೆ ನಡೆಸಿದರು. 'ಧಿಕ್ಕಾರ' ಘೋಷಣೆಗಳು, ಪ್ರತಿಭಟನೆ ಬ್ಯಾನರ್‌ಗಳನ್ನು ಕಾಣಬಹುದಾಗಿತ್ತು.

ಗಡಿ ರಾಜಕೀಯದತ್ತತಿರುವು:

ಸಮ್ಮೇಳನದ ಅಧ್ಯಕ್ಷ ಪೀಠದಿಂದ ಮಾತನಾಡಿದ ಪ್ರೊ|| ಕು.ಶಿ. ಹರಿದಾಸ್ ಭಟ್‌ರವರು ಕನ್ನಡ ಸಾಹಿತ್ಯದ ಬೆಳವಣಿಗೆಗೆ ಕಾಸರಗೊಡಿನ ಬರಹಗಾರರ ಕೊಡುಗೆಯನ್ನು ಪ್ರಶಂಸಿದರು. ಕನ್ನಡ ಮಲಯಾಳಂ ಭಾಷೆಗಳ ಕೃತಿಗಳ ಪರಸ್ಪರ ತರ್ಜುಮೆ ಕಾರ್ಯ ಮತ್ತಷ್ಟು ಮುಂದುವರಿಯಬೇಕೆಂದೂ ಅದರಲ್ಲೂ ಕನ್ನಡ ಸಾಹಿತ್ಯವನ್ನು ಮಲಯಾಳಂ ಭಾಷೆಗೆ ಹೆಚ್ಚೆಚ್ಚು ಅನುವಾದಿಸಬೇಕೆಂದು ಒತ್ತಿಹೇಳಿದರು. ತುಳು ಭಾಷೆ ಸಂಸ್ಕೃತಿಯ ವಿಶೇಷ ಸ್ಥಾನವನ್ನು ಬಣ್ಣಿಸಿದರು.

ಕಾಸರಗೋಡು ಕರ್ನಾಟಕಕ್ಕೆ ಸೇರಬೇಕೆಂದು ತೀವ್ರವಾಗಿ ಒತ್ತಾಯಿಸಿದರು. ವೀರೇಂದ್ರ ಹೆಗ್ಗಡೆಯವರು ಸಹ ಇದೇ ರಾಗವನ್ನು ಹಾಡಿದರು. ಕೊನೆಯ ದಿನದಂದು ಜರುಗಿದ ಬಹಿರಂಗ ಅಧಿವೇಶನದಲ್ಲಿ ಅತಿಥಿಯಾಗಿ ಆಗಮಿಸಿದ್ದ ಕರ್ನಾಟಕದ ಮುಖ್ಯಮಂತ್ರಿ ವೀರೇಂದ್ರ ಪಾಟೀಲರು ಮಹಾಜನ ವರದಿ ಜಾರಿಯಾಗಬೇಕೆಂದೂ ಹಾಗೂ ಕಾಸರಗೊಡು ಕರ್ನಾಟಕಕ್ಕೆ ಸೇರಲೇಬೇಕೆಂದು ಅರ್ಭಟಿಸಿದರು. ಹುಬ್ಬಳ್ಳಿಯ ಸಾಹಿತ್ಯ ಸಮ್ಮೇಳನಕ್ಕೆ ಕುಂಟು ನೆಪವೊಡ್ಡಿ ಗೈರು ಹಾಜರಾಗಿದ್ದ ಪಾಟೀಲರು ಕಾಸರಗೊಡಿನ ನೆಲದಲ್ಲಿ ತಮ್ಮ ಕನ್ನಡ ಪ್ರೇಮವನ್ನು ಪ್ರದರ್ಶಿಸಿದರು. ಸಂದರ್ಭಸಾಧಕತನದ ಪರಮಾವಧಿಗಷ್ಟೆ ಗಡಿ ಪ್ರಶ್ನೆಗಳಿಗೆ ಸಂಬಂಧಿಸಿದಂತೆ ಆಳುವ ವರ್ಗಗಳ ರಾಜಕೀಯ ಪಕ್ಷಗಳು ಯಾವ ರೀತಿ ಸಂದರ್ಭಸಾಧಕ ನೀತಿಯನ್ನು ಅನುಸರಿಸುತ್ತಾ ಬಂದಿವೆಯೆಂಬುದಕ್ಕೆ ಇಲ್ಲಿ ಕೆಲವು ಉದಾಹರಣೆಗಳನ್ನು ನೀಡಬಹುದಾಗಿದೆ. ಒಂದೊಮ್ಮೆ ಗೂಂಡೂರಾಯರು ಕೇರಳದಲ್ಲಿ ಇ.ಕೆ. ನಾಯನಾರ್‌ರವರನೇತೃತ್ವದ ಎಲ್.ಡಿ.ಎಫ್. ಸರ್ಕಾರ ಅಸ್ತಿತ್ವದಲ್ಲಿದ್ದಾಗ ಕಾಸರಗೊಡಿನ ಗಡಿಪ್ರಶ್ನೆಯನ್ನು ಕೆಣಕಿದ್ದರು. ಆದರು ಅಲ್ಲಿ ಕಾಂಗ್ರೆಸ ಕರುಣಾಕರನ್ ಸರ್ಕಾರ ಅಧಿಕಾರಕ್ಕೆ ಬಂದಾಗ ತೆಪ್ಪಗಾದರು. ಇದೀಗ ಎಲ್.ಡಿ.ಎಫ್. ಸರ್ಕಾರ ಅಧಿಕಾರಕ್ಕೆ ಬಂದನಂತರ ಪುನಃ ವೀರೇಂದ್ರ ಪಾಟೀಲರು ಗಾಳಿ ಹಾಕಲಾರಂಭಿಸಿದ್ದಾರೆ. ಜನತಾದಳ ಸರ್ಕಾರವಿದ್ದಾಗಲೂ ಒಂದೆಡೆ ರಾಮಕೃಷ್ಣಹೆಗಡೆಯವರು ಬೆಳಗಾಂ ಗಡಿ ವಿವಾದದಲ್ಲಿ ಭಾವಾವೇಶವನ್ನು ಪ್ರದರ್ಶಿಸಿದ್ದರು. ಇನ್ನೊಂದೆಡೆ ಜನತಾದಳದ ಮಹಾರಾಷ್ಟ್ರ ಘಟಕದ ನಾಯಕರೇ ಗಡಿ ಪ್ರದೇಶದಲ್ಲಿ ಚಳುವಳಿ ಹೂಡಿದ್ದರು. ಎ.ಕೆ. ಸುಬ್ಬಯ್ಯನವರು ಬಿ.ಜೆ.ಪಿ. ಯ ಅಪ್ರತಿಮ ನಾಯಕರಾಗಿದ್ದಾಗ ಕರ್ನಾಟಕ ವಿಧಾನಸಭೆಯಲ್ಲಿ ಗೋಕಾಕ್‌ವರದಿಯನ್ನು ಸಂಪೂರ್ಣವಾಗಿ ಜಾರಿಗೆ ತರ ಬೇಕೆಂದು ಒತ್ತಾಯಿಸುತ್ತಿದ್ದಾಗಲೇ ಮಹಾರಾಷ್ಟ್ರ ವಿಧಾನಸಭೆಯಲ್ಲಿ ಬಿ.ಜೆ.ಪಿ. ಪಕ್ಷದ ನಾಯಕರೊಬ್ಬರು ಗೋಕಾಕ್ ವರದಿಯನ್ನು ಖಂಡಿಸಿ ನಿರ್ಣಯವೊಂದನ್ನು ಮಂಡಿಸಿದ್ದರು. ಇದರಿಂದ ಆಳುವ ವರ್ಗಗಳ ರಾಜಕೀಯ ಪಕ್ಷಗಳು ತಮ್ಮ ವೈಫಲ್ಯಗಳನ್ನು ಮುಚ್ಚಿಕೊಳ್ಳಲು ಹಾಗೂ ಜನತೆಯ ಗಮನವನ್ನು ಮೂಲಭೂತ ಸಮಸ್ಯೆಗಳಿಂದ [illegible] ಭಾಷೆ ಗಡಿ ಮುಂತಾದ ಸಮಸ್ಯೆಗಳನ್ನು ದುರುಪಯೋಗಪಡಿಸಿಕೊಂಡು ಬಂದಿರುವುದು ಸ್ಪಷ್ಟವಾಗುತ್ತದೆ.

ಆದ್ದರಿಂದ ಕ್ಷುಲ್ಲಕ ರಾಜಕಾರಣದ ಕುತಂತ್ರಗಳ ಬಗ್ಗೆ ಸದಾ ಎಚ್ಚರಿಕೆಯಿಂದಿರಬೇಕಾಗಿದೆ. ಕಾಸರಗೋಡು ಜಿಲ್ಲೆಯ ಕನ್ನಡ ಭಾಷಾ ಅಲ್ಪಸಂಖ್ಯಾತರ ಹಿತಕ್ಕಾಗಿ ಕೇರಳದಲ್ಲಿ ಅಧಿಕಾರದಲ್ಲಿರುವ ವಾಮಪ್ರಜಾಸತ್ತಾತ್ಮಕ ರಂಗ ಸರ್ಕಾರ ಈಗಾಗಲೇ ಕೆಲವು ಪ್ರಶಂಸಾರ್ಹ [illegible] ಗಳನ್ನು ಕೈಗೊಂಡಿದೆ. ಕನ್ನಡ [illegible] ಮತ್ತು ಸಂಸ್ಕೃತಿಯನ್ನು ಅಭಿ[illegible] ಪಡಿಸುವತ್ತ ಹಾಗೂ ಗಡಿನಾಡ ಕನ್ನಡಿಗರ ನೈಜ ಸಮಸ್ಯೆಗಳಬಗ್ಗೆ ಕೇರಳ ಮತ್ತು ಕರ್ನಾಟಕ ರಾಜ್ಯ ಸರ್ಕಾರಗಳ ಗಮನ ಸೆಳೆಯುವತ್ತ ಕಾಸರಗೋಡು ಸಮ್ಮೇಳನ ಚರ್ಚಿಸಿದ್ದರೆ ಹೆಚ್ಚು ಉಪಯುಕ್ತವಾಗಬಹುದಿತ್ತು.

ದೇಶದಲ್ಲೆಡೆಯಲ್ಲಿ ವಿಚ್ಛಿದ್ರಕಾರಿ ಭಾಷಾಂಧತೆಯು ತೀವ್ರ ಬೆಳವಣಿಗೆಯಾಗುತ್ತಿರುವಾಗ ಗಡಿ ಸಮಸ್ಯೆಯನ್ನು [illegible] ಪದೇ ಎತ್ತುವುದು ಜನರ [illegible] ಮಾರಕವಾಗುವುದಲ್ಲದೆ ಜನ ಜೀವನದ ತುರ್ತು ಸಮಸ್ಯೆಗಳಿಂದ ಬೇರೆ ಕಡೆ [illegible] ಯುವುದೇ ಮುಖ್ಯಕಾರಣವಾಗಿದೆ. [illegible] ರಿಂದ ನಮ್ಮ ಪಕ್ಷ ಗಡಿಸಮಸ್ಯೆಗಳನ್ನು ಕೆಣಕಬಾರದೆಂದುಯಥಾಸ್ಥಿತಿ ಮುಂದುವರೆಯಬೇಕೆಂದು ಅಭಿಪ್ರಾಯಪಡುತ್ತದೆ. ಇದೇ ಮಾತನ್ನು ಕೇರಳದ ಮುಖ್ಯಮಂತ್ರಿ ಕಾಂ ಇ.ಕೆ. ನಾಯನಾರ್ ಬೆಂಗಳೂರಿನಲ್ಲಿ ಪುನರುಚ್ಚರಿಸಿದ್ದರು ಎಂಬುದನ್ನು [illegible] ಸ್ಮರಿಸಬಹುದು.

ಕೆಲಸ ಕಡಿತದಿಂದ ಉಪವಾಸ ಬೀಳುತ್ತಿರುವ ಬೀಡಿ ಕಾರ್ಮಿಕರ ಧರಣಿ ಸತ್ಯಾಗ್ರಹ

ಸರಕಾರ ಕೂಡಲೇ ಮಧ್ಯ ಪ್ರವೇಶಿಸಬೇಕೆಂದು ಸಿ.ಪಿ.ಐ. (ಎಂ) ಆಗ್ರಹ

ಕಳೆದ ನಾಲ್ಕುತಿಂಗಳುಗಳಿಂದ ಸುಮಾರು ೩ ಲಕ್ಷಕ್ಕೂ ಮಿಕ್ಕಿ ದುಡಿಯುತ್ತಿರುವ ಬೀಡಿ ಕಾರ್ಮಿಕರು ವಾರಕ್ಕೆ ಎರಡು ದಿವಸದಷ್ಟು ಮಾತ್ರ ಕೆಲಸ ಪಡೆಯುತ್ತಿದ್ದು ಮಾಲಕರು ಈ ರೀತಿ ಕೆಲಸ ಕಡಿತ ಮಾಡಿದುದರಿಂದ ಉಪವಾಸ ಬೀಳು ವಂತಾಗಿದೆ. ಜಿಲ್ಲೆಯಲ್ಲಿ ಬೀಡಿ ಒಂದು ಪ್ರಮುಖ ಕೈಗಾರಿಕೆಯಾಗಿದ್ದು, ಇದರಲ್ಲಿ ದುಡಿಯುವ ಲಕ್ಷಾಂತರ ಬೀಡಿ ಕಾರ್ಮಿಕರಿಗೆ ಕೆಲಸವಿಲ್ಲದುದರಿಂದ ಜಿಲ್ಲೆಯ ಆರ್ಥಿಕ ಸ್ಥಿತಿ ಕುಸಿಯು ವಂತಾಗಿದೆ.

ಬೀಡಿ ಕಾರ್ಮಿಕರಿಗೆ ಸರಕಾರ ನಿಗದಿ ಮಾಡಿದ ಕನಿಷ್ಠ ವೇತನದಲ್ಲಿ ಬೀಡಿ ಮಾಲಕರು ದಿನ ಒಂದಕ್ಕೆ ಕನಿಷ್ಟ ೮೦೦ ಬೀಡಿಯ ಎಲೆ ತುಂಬಾಕು ಕೊಡಬೇಕು. ಇಲ್ಲವೇ ಇದಕ್ಕೆ ಸಮನಾದ ವೇತನವನ್ನು ಕೊಡಬೇಕು. ಆದರೆ ಬೀಡಿ ಮಾಲಕರು ಕಾಯಿದೆಯನ್ನು ಉಲ್ಲಂಘಿಸಿ ವಾರ ಪೂರ್ತಿ ಕೆಲಸವನ್ನೂ ಕೊಡುವುದಿಲ್ಲ. ಯಾವುದೇ ಪರಿಹಾರವನ್ನೂ ಕೊಡುವುದಿಲ್ಲ ಎಂಬ ಹಠ ಮಾರಿತನದಿಂದ ಕಳೆದ ನಾಲ್ಕು ತಿಂಗಳುಗಳಿಂದಲೂ ಕಾರ್ಮಿಕರನ್ನು ಸಂಕಷ್ಟಕೀಡು ಮಾಡಿದ್ದಾರೆ. ಪರಿಸ್ಥಿತಿ ಇಷ್ಟು ಗಂಭೀರವಾಗಿರುವಾಗ ಸರಕಾರವಾದರೂ ಏನೂ ಕ್ರಮ ವಹಿಸದೆ ದೀರ್ಘ ಮೌನ ತಾಳಿದೆ. ಸರಕಾರ ತನ್ನ ಜವಾಬ್ದಾರಿಯನ್ನು ಮರೆತು ಈ ರೀತಿ ಸುಮ್ಮನಿರುವುದು ವಿಶಾಲವಾಗಿ ಹರಡಿರುವ ಬೀಡಿ ಕಾರ್ಮಿಕರ ಸಮುದಾಯವನ್ನು ತೀರಾ ಕಡೆಗಣಿಸಿದಂತಿದೆ.

ಆದರೂ ಕಾರ್ಮಿಕರು ಈಗ ಎಚ್ಚೆತ್ತಿದ್ದಾರೆ. ಹಸಿವೆಯಿಂದ ಉಪವಾಸ ಬಿದ್ದು ಸಾಯುವುದಕ್ಕಿಂತ ತಮ್ಮ ಬದುಕಿಗಾಗಿ, ಸರಕಾರವೇ ಮಾಡಿದ ಕಾಯಿದೆಯನ್ನು ಜಾರಿಗೊಳಿಸುವಂತೆ ಒತ್ತಾಯಿಸಲಿಕ್ಕಾಗಿ ಹೋರಾಟದ ಹಾದಿಯನ್ನು ಹಿಡಿಯಬೇಕಾಗಿದೆ. ಸರಕಾರಕ್ಕೂ ಮಾಲಕರಿಗೂ ಅನೇಕ ರೀತಿಯ ಒತ್ತಾಯ ಮನವಿಗಳನ್ನು ಅರ್ಪಿಸಲಾಯಿತು. ಆದರೂ ಯಾವುದೇ ಪರಿಹಾರ ಸಿಗದಂತಹ ಪರಿಸ್ಥಿತಿಯಲ್ಲಿ ಸಿಐಟಿಯು ನೇತೃತ್ವದ ಬೀಡಿ ಕಾರ್ಮಿಕ ಸಂಘಟನೆಗಳು ಇದೀಗ ಹೋರಾಟದ ಹಾದಿಯನ್ನು ಹಿಡಿದಿದ್ದಾರೆ. ಕಳೆದ ತಾ: ೧-೩-೯೦ ರಂದು ಮಾಲಕರ ಕಛೇರಿಯ ಮುಂದೆ ಬೃಹತ್ ಪ್ರತಿಭಟನಾ ಪ್ರದರ್ಶನ ನಡೆಸಲಾಯಿತು. ತಾ: ೩-೩-೯೦ ರಂದು ಜಿಲ್ಲಾಧಿಕಾರಿಯವರ ಕಛೇರಿ ಇದಿರು ಸಾಮೂಹಿಕ ಧರಣಿ ಸತ್ಯಾಗ್ರಹ ನಡೆಸಲಾಗುತ್ತಿದೆ. ಆದುದರಿಂದ ಲಕ್ಷಾಂತರ ಸಂಖ್ಯೆಯಲ್ಲಿ ಬೀಡಿ ಕಟ್ಟುತ್ತಿರುವ ಬೀಡಿ ಕಾರ್ಮಿಕರ ಹಾಗೂ ಅವರ ಕುಟುಂಬಗಳ ಸಂಕಷ್ಟವನ್ನರಿತು ನ್ಯಾಯಕ್ಕಾಗಿ ಉಪವಾಸ ಬೀಳುವುದಕ್ಕಿದರಾಗಿ ನಡೆಸುತ್ತಿರುವ ಈ ಹೋರಾಟಕ್ಕೆ ಸಂಘಟಿತ ಕಾರ್ಮಿಕ ವರ್ಗ ಮತ್ತು ಸಾರ್ವಜನಿಕರು ಸರ್ವ ರೀತಿಯ ಸಹಕಾರ ನೀಡಬೇಕೆಂದೂ, ಸರಕಾರವೂ ಕೂಡಲೇ ಮಧ್ಯ ಪ್ರವೇಶಿಸಿ ಬೀಡಿ ಕಾರ್ಮಿಕರಿಗೆ ನ್ಯಾಯ ಒದಗಿಸಬೇಕೆಂದೂ ಸಿ.ಪಿ.ಐ. (ಎಂ) ದ.ಕ. ಜಿಲ್ಲಾ ಸಮಿತಿ ಒತ್ತಾಯಿಸುತ್ತದೆ.ಮಾಲಕರೂ, ಸರಕಾರವೂ ತುರ್ತಾಗಿ ಬೀಡಿ ಕಾರ್ಮಿಕರಿಗೆ ನ್ಯಾಯ ಒದಗಿಸದಿದ್ದರೆ, ಉಪವಾಸ ಬೀಳುತ್ತಿರುವ ಬೀಡಿ ಕಾರ್ಮಿಕರ ನ್ಯಾಯಕ್ಕಾಗಿ ಜಿಲ್ಲಾದ್ಯಂತವಾಗಿ ತೀವ್ರ ರೀತಿಯ ಹೋರಾಟ ನಡೆಸಬೇಕಾದೀತೆಂದು ಎಚ್ಚರಿಸಿ ನೀಡಿದ ಪತ್ರಿಕಾ ಹೇಳಿಕೆಯಲ್ಲಿ ಜಿಲ್ಲಾ ಸಮಿತಿ ಕಾರ್ಯದರ್ಶಿ ಶ್ರೀ ಕೆ. ಆರ್. ಶ್ರೀಯಾನ್ ತಿಳಿಸಿದ್ದಾರೆ.

ಬಂಟ್ವಾಳದಲ್ಲಿ ಪ್ರತಿಭಟನಾ ಧರಣಿ

ಮಾಲಕರ ಕೆಲಸ ಕಡಿತ ನೀತಿಯಿಂದ ಬೀಡಿ ಕಾರ್ಮಿಕರು ಉಪವಾಸ ಬೀಳಬೇಕಾದ ಹಿನ್ನೆಲೆಯಲ್ಲಿ, ಬಂಟ್ವಾಳ ತಾಲೂಕು ಕಛೇರಿಯ ಮುಂದೆ ಸಿ.ಐ.ಟಿ.ಯು. ವಿಗೆ ಸೇರಿರುವ ಬೀಡಿ ಕಾರ್ಮಿಕ ಸಂಘಗಳ ನೇತೃತ್ವದಲ್ಲಿ ಸುಮಾರು ೫೦೦ ಮಂದಿ ಧರಣಿ ಸತ್ಯಾಗ್ರಹ ನಡೆಸಿದರು.

ಧರಣಿ ಸತ್ಯಾಗ್ರಹಿಗಳ ಪರವಾಗಿ ನಿಯೋಗವೊಂದು ತಹಶೀಲ್ದಾರ್‌ರ ಮುಖಾಂತರ ರಾಜ್ಯದ ಮುಖ್ಯ ಮಂತ್ರಿಗೆ ಮನವಿಯೊಂದನ್ನು ಸಲ್ಲಿಸಿ ಬೀಡಿ ಕೈಗಾರಿಕೆಯಲ್ಲಿ ದುಡಿಯುತ್ತಿರುವ ಕಾರ್ಮಿಕರಿಗೆ ವಾರದ ೬ ದಿನಗಳಲ್ಲೂ ಕೆಲಸ ಕೊಡಬೇಕೆಂದು ಕೆಲಸವಿಲ್ಲದ ದಿನಗಳಲ್ಲಿ ಕಾನೂನು ಪ್ರಕಾರದ ಪರಿಹಾರವನ್ನಾದರೂ ನೀಡುವಂತೆ ಬೀಡಿ ಮಾಲೀಕರ ಮೇಲೆ ಒತ್ತಡ ಹೇರಲು ಸರಕಾರ ಮಧ್ಯ ಪ್ರವೇಶ ಮಾಡಬೇಕೆಂದು ಕೇಳಿಕೊಳ್ಳಲಾಗಿದೆ.

ಧರಣಿ ಸತ್ಯಾಗ್ರಹಿಗಳನ್ನು ಉದ್ದೇಶಿಸಿ ಮಾತಾಡಿದ ಸಿಐಟಿಯು. ವಿನ ಮುಖಂಡ ಶ್ರೀ ಬಿ.ವಾಸು ಗಟ್ಟಿ, ದ.ಕ. ಜಿಲ್ಲಾ ಬೀಡಿ ಫೆಡರೇಷನ್‌ನ ಕಾರ್ಯದರ್ಶಿ ಶ್ರೀ ಯು.ಜಿ. ಲೋಕಯ್ಯ ಮೊದಲಾದವರು ಮಾತಾಡಿ ಬೀಡಿ ಕಾರ್ಮಿಕರು ತಮ್ಮ ಸಂಘಟಿತ ಹೋರಾಟದ ಫಲವಾಗಿ ಸಂಪಾದಿಸಿದ ಕೆಲವು ಸವಲತ್ತುಗಳನ್ನು ಹಕ್ಕು ಭಾದ್ಯತೆಗಳನ್ನು ರಕ್ಷಿಸಿಕೊಳ್ಳಲು ಹೋರಾಡಲು ಮುಂದಾಗಬೇಕೆಂದು ಕರೆ ನೀಡಿದರು.

ಧರಣದ ನಾಯಕತ್ವವನ್ನು ಶ್ರೀ ಬಿ. ಸಂಜೀವ ಬಂಗೇರ, ಶ್ರೀ ಬಿ.ಸೋಮಯ್ಯ ಬಂಗೇರ, ಶ್ರೀ ಬಿ.ನಾರಾಯಣ, ಚಂದ್ರ ನಾಯ್ಕ, ಶ್ರೀ ಕೆ. ಚೆನ್ನಪ್ಪ ಬಂಗೇರ ಶ್ರೀಮತಿ ಗಿರಿಜ, ರಾಜೀವಿ, ರಾಧ ಮೊದಲಾದವರು ವಹಿಸಿದರು.

ನೇಕಾರ ಕಾರ್ಮಿಕರಿಂದ ಮುಖ್ಯಮಂತ್ರಿಗಳಿಗೆ ಮನವಿ

ನೇಕಾರ ಕಾರ್ಮಿಕರನ್ನು ಸಹಕಾರಿ ಸಂಘಗಳಿಂದ ಮನಬಂದಂತೆ ಹೊರದೂಡುವುದು ಮತ್ತು ಮಿತಿ ಮೀರಿದ ಭ್ರಷ್ಟಾಚಾರಗಳಿಂದ ನೇಕಾರರಿಗೆ ಆಗುತ್ತಿರುವ ತೊಂದರೆಗಳನ್ನು ಸೇರಿಸಿ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ನೇಯ್ಗೆ ಕೆಲಸಗಾರರ ಪರವಾಗಿ ಸಲ್ಲಿಸಲಾದ ಹಲವಾರು ಕೇಳಿಕೆಗಳ ಕುರಿತು ನಿಗಮದ ಆಡಳಿತವೂ ಮೌನ ವಹಿಸಿರುವುದರ ಬಗ್ಗೆ ಗಮನ ಸೆಳೆಯಲು ನಿಗಮದ ಉಡುಪಿ ವಿಭಾಗದ ಅಧಿಕಾರಿಗಳ ಅಮಾನತಿನಿಂದಾಗಿ ಉದ್ಭವವಾಗಿರುವ ಪರಿಸ್ಥಿತಿಯನ್ನು ಇತ್ತೀಚೆಗೆ ಉಡುಪಿಗೆ ಭೇಟಿ ನೀಡಿದ ಕರ್ನಾಟಕ ರಾಜ್ಯ ಸರಕಾರದ ಮುಖ್ಯಮಂತ್ರಿಗಳವರಿಗೆ ಹಾಗೂ ಆರೋಗ್ಯ ಮತ್ತು ಸಹಕಾರಿ ಸಚಿವೆ ಶ್ರೀಮತಿ ಮನೋರಮಾ ಮಧ್ವರಾಜರವರಿಗೆ ಮನವಿ ಸಲ್ಲಿಸಲಾಯಿತು.

ಈ ಮನವಿಯಲ್ಲಿ ನೂಲು, ಕಚ್ಚಾ ಸಾಮಗ್ರಿಗಳು, ಬಣ್ಣದ ನೂಲು ಸರಬರಾಜು ಸರಕಾರಿ ಸವಲತ್ತುಗಳನ್ನು ಒದಗಿಸುವುದು ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ಉಡುಪಿ ಶಾಖೆಯನ್ನು ಮುಚ್ಚಿಸಲು ನಡೆಸಲಾದ ಪಿತೂರಿಗಳನ್ನು ಬಯಲಿಗೆಳೆದು ನಿಗಮದ ಆಡಳಿತದಲ್ಲಿರುವ ಅವ್ಯವಸ್ಥೆಗಳನ್ನು ಸರಿಪಡಿಸುವಂತೆ ಕೋರಲಾಗಿತ್ತು.

ಸಿ.ಐ.ಟಿ.ಯು., ಎ.ಐ.ಟಿ.ಯು.ಸಿ. ದ.ಕ. ಜಿಲ್ಲಾ ನೇಕಾರರ ರಕ್ಷಣಾ ಸಮಿತಿಗಳು ಜಂಟಿಯಾಗಿ ಉಡುಪಿ ನಗರದ ಬೀದಿಗಳಲ್ಲಿ ನೂರಾರು ಮಂದಿ ನೇಯ್ಗೆ ಕೆಲಸಗಾರರು ಮೆರವಣಿಗೆ ನಡೆಸಿ ನಂತರ ನಿಯೋಗದ ಮೂಲಕ ಮನವಿ ಸಲ್ಲಿಸಲಾಯಿತು.

ಕುಂದಾಪುರದಲ್ಲಿ ವಿವಿಧ ಸಂಘಟನೆಗಳಿಂದ ವಿಜಯೋತ್ಸವ

ಸಾವಿರಾರು ಮೈಲುಗಳ ದೂರದಲ್ಲಿ ನೆಲ್ಸನ್ ಮಂಡೇಲಾರ ಬಿಡುಗಡೆಯ ಸಂತಸದಲ್ಲಿ ಕುಂದಾಪುರ ಪ್ರಜಾಪ್ರಭುತ್ವವಾದಿ ಜನ ಸಮೂಹಗಳು ಪಾಲ್ಗೊಂಡಿವೆ. ಫೆಬ್ರುವರಿ 25 ರಂದು ಎಸ್.ಎಫ್.ಐ., ಡಿ.ವೈ.ಐ. ಮಹಿಳಾ ಸಂಘಟನೆ ಮತ್ತು 'ಸಮುದಾಯ' ಸಂಘಟನೆಯ ಆಶ್ರಯದಲ್ಲಿ ತಾಲ್ಲೂಕು ಅಭಿವೃದ್ಧಿ ಮಂಡಳಿ ಸಭಾಂಗಣದಲ್ಲಿ ವಿಜಯೋತ್ಸವ ಸಭೆ ನಡೆಸಲಾಯಿತು.

"ಮಂಗಾರು" ದಿನಪತ್ರಿಕೆಯ ಉಪ ಸಂಪಾದಕ ವಿಶ್ವ ಕುಂದಾಪುರ ಅವರು ಮುಖ್ಯ ಭಾಷಣ ಮಾಡುತ್ತಾ ಆಫ್ರಿಕಾದ ಜನತೆ ಮೂರುವರೆ ಶತಮಾನಗಳಿಂದ ವಸಾಹತು ಶಾಹಿಗಳು ಮತ್ತು ಬಿಳಿಯ ಜನಾಂಗವಾದಿಗಳ ವಿರುದ್ಧ ಮೂಲ ನಿವಾಸಿಗಳು ನಡೆಸಿದ ಹೋರಾಟದ ಚಿತ್ರಣವನ್ನು, ನೆಲ್ಸನ್ ಮಂಡೇಲಾರ ಜೀವನ ಚಿತ್ರಣವನ್ನು ನೀಡಿದರು.

[illegible] ಬೈಂದೂರು ಕ್ಷೇತ್ರದ ಶಾಸಕ [illegible] ಆಚಾರ್ ದಕ್ಷಿಣ ಆಫ್ರಿಕಾದ ಜನತೆ ಸಂಪೂರ್ಣ ವಿಜಯ ಸಾಧಿಸುವಂತಾಗಲಿ ಎಂದು ಹಾರೈಸಿದರು. ನಗರದ ವಕೀಲ [illegible] ಶಿರಿಯಾದ ಮುದ್ದಣ ಶೆಟ್ಟಿಯವರು [illegible] ಬಿಡುಗಡೆ ಬಗ್ಗೆ ತಮ್ಮ ಸಂತೋಷ ವ್ಯಕ್ತಪಡಿಸಿದರು.

ಡಿ.ವೈ.ಎಫ್.ಐ ತಾಲ್ಲೂಕು ಕಾರ್ಯದರ್ಶಿ ಕೆ.ನಾರಾಯಣ [illegible] ಎಸ್.ಎಫ್.ಐ. ಜಿಲ್ಲಾಧ್ಯಕ್ಷ ವಿ. [illegible] ಶೇಖರ್, ಸಮುದಾಯ ತಾಲ್ಲೂಕು ಖಜಾಂಚಿ ಕೆ.ಎಂ.ಬಾಲಕೃಷ್ಣ, ಮಹಿಳಾ ಸಂಘಟನೆಯ ತಾಲ್ಲೂಕು [illegible] ಎಸ್. ಆರ್. ಲೀಲಾವತಿ [illegible] ಸಂಘಟನೆಗಳು ದಕ್ಷಿಣ ಆಫ್ರಿಕಾ ಜನತೆಯ ಹೋರಾಟಗಳಿಗೆ ವ್ಯಕ್ತಪಡಿಸುತ್ತಾ ಬಂದಿರುವ ಸೌಹಾರ್ದತೆಯನ್ನು [illegible] ಸಿದರು.

'ಸಮುದಾಯ'ದ [illegible] ಸಂಚಾಲಕ ಜೆ.ವಿ. ಕಾರಂತ ಅಧ್ಯಕ್ಷತೆ ವಹಿಸಿದ್ದರು. ಡಿ.ವೈ.ಎಫ್.ಐ. ತಾಲ್ಲೂಕು ಸಮಿತಿ ಅಧ್ಯಕ್ಷ ವೆಂಕಟೇಶ [illegible] ಸ್ವಾಗತಿಸಿದರು. ರಾಧಾಕೃಷ್ಣ [illegible] 'ಅಭಿನಂದನೆ ನೆಲ್ಸನ್' ಹಾಡಿದರು. [illegible] ಪ್ರಕಾಶ್ ವಂದಿಸಿದರು.

ರಾಷ್ಟ್ರೀಯ ರಂಗ' ಸರ್ಕಾರ ಇಂದು ಕೇಂದ್ರದಲ್ಲಿ ಆಡಳಿತ ನಡೆಸುತ್ತಾ ಬಂದು ನೂರು ದಿನಗಳಾದವು. ರಾಷ್ಟ್ರೀಯರಂಗದ ಆರ್ಥಿಕ ಧೋರಣೆಯನ್ನು ಸ್ಪಷ್ಟವಾಗಿ ರೂಪಿಸಬೇಕಾದ ಬಜೆಟ್ ಅಧಿವೇಶನವೂ ಆರಂಭವಾಗಿದೆ. ರೈಲ್ವೆ ಬಜೆಟ್ ಮತ್ತು ಒಟ್ಟು ಬಜೆಟ್‌ಗಳು ದೇಶದ ಮುಂದೆ ಇಂದು ಬೃಹದಾಕಾರವಾಗಿ ಬೆಳೆದಿರುವ ಸಮಸ್ಯೆಗಳನ್ನು ಖೋತಾ ಬಜೆಟ್ ವಿದೇಶಿ ಸಾಲದ ಬೃಹತ್ ಹೊರೆ, ವಿದೇಶಿ ವಿನಿಮಯದ ಕೊರತೆಗಳನ್ನು ರಾಷ್ಟ್ರೀಯ ರಂಗ ಸರ್ಕಾರ ಹೇಗೆ ಎದುರಿಸಲಿದೆ ಎಂಬುದನ್ನು ಬಿಚ್ಚಿಡಲಿವೆ. ಅದರ ಜೊತೆಗೆ ಗ್ರಾಮೀಣ ಭಾರತ ಅಭಿವೃದ್ಧಿಗಾಗಿ ಅಧದಷ್ಟು ಯೋಜನಾವೆಚ್ಚವನ್ನು ಮೀಸಲಿರಿಸುತ್ತೇವೆನ್ನುವ ಇವರ ಚುನಾವಣಾ ಭರವಸೆಯೂ ಕಾರ್ಯಗತವಾಗಬೇಕಾದರೆ ರಾಜೀವ್ ಗಾಂಧಿಯವರ ಹೊಸ ಆರ್ಥಿಕ ನೀತಿಯನ್ನು ಹೊಸ ಶಿಕ್ಷಣ ನೀತಿ, ಹೊಸ ಜವಳಿ ನೀತಿಗಳನ್ನು ಕೈ ಬಿಡಬೇಕಾದ ಒತ್ತಾಯ ಕ್ಕೊಳಗಾಗುತ್ತದೆ.

ಇದೇ ಸಂದರ್ಭದಲ್ಲಿಯೇ ೮ ನೇ ಪಂಚವಾರ್ಷಿಕ ಯೋಜನೆಯ ರೂಪುರೇಖೆಗಳು ನಿರ್ಧಾರವಾಗಬೇಕಾಗಿದೆ. ಈ ಸಂಧರ್ಭದಲ್ಲಿ ೮ ನೇ ಯೋಜನೆಯ ಬಗ್ಗೆ ಭಾರತದಲ್ಲಿ ಯೋಜನೆಗಳು ರೂಪುಗೊಳ್ಳುತ್ತಿರುವ ಜಾರಿಗೊಳ್ಳುತ್ತಿರುವ ರೀತಿಯ ಬಗ್ಗೆ ಚರ್ಚೆ ನಡೆಯಬೇಕಾಗಿದೆ.

ದಾರಿ ಯಾವುದಯ್ಯಾ ದೇಶದ ಅಭಿವೃದ್ಧಿಗೆ ?

ನಮ್ಮ ಸಾಮಾಜಿಕ - ಆರ್ಥಿಕ ಚೌಕಟ್ಟು ವಿಧಿಸುವ ಮಿತಿಗಳ ನಡುವೆಯೂ ಯೋಜನಾ ಪ್ರಕ್ರಿಯೆಯಲ್ಲಿ ಒಂದು ಪರ್ಯಾಯ ದೃಷ್ಟಿ ಕೋನ - ಜನರ ನೋವುಗಳನ್ನು ಕಡಿಮೆ ಮಾಡಬಲ್ಲ ವಿಕೇಂದ್ರೀಕರಣ ಸಮಾನತೆಯನ್ನು ಉಂಟುಮಾಡಬಲ್ಲಂತಹ ಸಾಧ್ಯತೆಯನ್ನು ಮನಗಾಣಿಸುವುದೇ ಈ ಲೇಖನದ ಉದ್ದೇಶ. ಇಂತಹ ಸಾಧ್ಯತೆಯ ಅರಿವು ಪಸರಿಸಿದಾಗ ಸಾರ್ಥಕವಾದೀತು.

ಇಂತಹ ಪರ್ಯಾಯ ದೃಷ್ಟಿಕೋನದ ಬಗ್ಗೆ ಮಾತನಾಡುವಾಗ ಈಗಿನ ದೃಷ್ಟಿ ಕೋನದಲ್ಲಿರುವ ನ್ಯೂನತೆಗಳನ್ನು, ದೋಷಗಳನ್ನು ಈ ಸಿಕ್ಕು ಸಿಕ್ಕಾದ ವಿಚಾರ ಧಾರೆಯ ಎಳೆಗಳನ್ನು ಬಿಡಿಸಿ ನೋಡುವುದು ಅವಶ್ಯಕ. ರಾಷ್ಟ್ರೀಯ ಮಟ್ಟದಲ್ಲಿ ಈ ದೃಷ್ಟಿಕೋನದ ವೈಫಲ್ಯಗಳನ್ನು ಅರಿಯುವಲ್ಲಿ ಅದು ನೀಡಿರುವ ದುಷ್ಫಲಗಳ ಜ್ಞಾನ ಸಹಾಯ ಮಾಡುತ್ತದೆ. ಸ್ಥೂಲವಾಗಿ ಅವುಗಳನ್ನು ಈ ಕೆಳಗಿನಂತೆ ನಮೂದಿಸಬಹುದು.

(ಅ) ನಿರುದ್ಯೋಗ,ಬಡತನ - ಮತ್ತು ಜನರ ಅಲ್ಪ ಖರೀದಿ ಸಾಮರ್ಥ್ಯ

(ಬ) ಹಣದುಬ್ಬರ

(ಕ) ಖೋತಾ ಬಜೆಟ್ಟುಗಳಿಂದ ತುಂಬಿರುವ ಹಣಕಾಸಿನ ಅಸಮತೋಲನ

(ಡ) ಬಾಕಿಯಿರುವ ಸಾಲಗಳ ಮರುಪಾವತಿಯ ಸಮಸ್ಯೆ ಮತ್ತು ವಿದೇಶಿ ಸಾಲದ ಹೊರೆ

(ಇ) ಕೇಂದ್ರ - ರಾಜ್ಯ ಸಂಬಂಧಗಳಲ್ಲಿ ಅತಿ - ಕೇಂದ್ರೀಕರಣ ಮತ್ತು

(ಪ) ಜನರಿಗಾಗಿ ಎಂದು ರಚಿಸಲಾಗುವ ಯೋಜನೆಯನ್ನು ತಯಾರಿಸುವ ರೂಪಿಸುವ ಕೆಲಸದಿಂದ ಪೂರ್ಣ ಹೊರತಾಗಿ ಉಳಿದಿರುವ ಶ್ರೀ ಸಾಮಾನ್ಯ.

ಈ ಹಿಂದಿನ ಯೋಜನೆಗಳು ನಮ್ಮಲ್ಲಿನ ಆರ್ಥಿಕ ಅಸಮಾನತೆಗಳನ್ನು ತೊಡೆದು ಹಾಕುವ ಯಾವುದೇ ಗಂಭೀರ ಪ್ರಯತ್ನ ಮಾಡಲಿಲ್ಲ. ಸಂಪತ್ತಿನ ಅಂದರೆ ಮುಖ್ಯವಾಗಿ ಕೃಷಿಯಲ್ಲಿ ಭೂಮಿ ಮತ್ತು ಉದ್ಯಮದಲ್ಲಿ, ಬಂಡವಾಳದ ಅಸಮಾನತೆ ಯೋಜನೆಗಳ ಹೊಡೆತಕ್ಕೆ ಗುರಿಯಾಗಿರಲಿಲ್ಲ. ಇಂದಿಗೂ ನಮ್ಮ ನೆಲದ ವಾಸ್ತವವೆಂದರೆ ಶೇಕಡಾ ೨೯ ರಷ್ಟು ಮಾತ್ರ ಕೃಷಿ ಭೂಮಿ ಬಡ ಮತ್ತು ಅತಿ ಬಡ ರೈತರಿಗೆ ಸೇರಿದ್ದರೆ, ಉಳಿದ ಶೇಕಡಾ ೭೧ ರಷ್ಟು ಭೂಮಿ ಭೂಮಾಲಿಕ ಅಥವಾ ದೊಡ್ಡ ರೈತರ ಒಡೆತನದಲ್ಲಿ ಉಳಿದಿದೆ.

ಇದರ ಪರಿಣಾಮವಾಗಿ ನಮ್ಮ ಬಹುತೇಕ ಯೋಜನೆಗಳು ದೊಡ್ಡ ರೈತ ಭೂಮಾಲಿಕರ ಹಿತಾಸಕ್ತಿಯನ್ನು ಮಾತ್ರ ಗಮನಕ್ಕೆ ತೆಗೆದುಕೊಳ್ಳಬಲ್ಲ ಯೋಜನೆಗಳಾಗಿ ಬಿಡುತ್ತವೆ. ಇದರಂತೆಯೇ ಉದ್ದಿಮೆಗಳ ಕ್ಷೇತ್ರದಲ್ಲಿ ದೊಡ್ಡ ಉದ್ದಿಮೆದಾರರ ಹಿತಾಸಕ್ತಿಗಳನ್ನು ಯೋಜನೆಗಳು ರಕ್ಷಿಸುತ್ತದೆ. ತತ್ಪರಿಣಾಮವಾಗಿ ಸಮಾಜದ ಈ ವರ್ಗದ ಜನರ ಹಿತಗಳಿಗನುಗುಣವಾಗುವ ತಂತ್ರಜ್ಞಾನಗಳನ್ನು ಮಾತ್ರ ಯೋಜನೆಗಳಲ್ಲಿ ಅಳವಡಿಸಿಕೊಳ್ಳಲಾಗುತ್ತದೆ. ಕೈಯಲ್ಲಿ ನಿರುದ್ಯೋಗ, ಬಡತನ ಜನಸಾಮಾನ್ಯರು ತಮಗೆ ಬೇಕಾಗುವ ವಸ್ತುಗಳನ್ನು ಕೊಳ್ಳುವ ಶಕ್ತಿಯಿಲ್ಲದೆ ಪರಿತಪಿಸುವುದನ್ನು ಇವುಗಳಿಂದಲೇ ಉಂಟಾಗುತ್ತದೆ.

ದೇಶದ ಆಂತರಿಕ ಹಣಕಾಸಿನ ಬಿಕ್ಕಟ್ಟು ಸಹ ಬಡಜನತೆಯನ್ನು ಹಿಂಡುತ್ತವೆ. ಪರೋಕ್ಷ ತೆರಿಗೆಗಳೇ ಯಾವಾಗಲೂ ಹೆಚ್ಚಿದ್ದು ನೇರ ತೆರಿಗೆಗಳು ಕಡಿಮೆ ಇರುತ್ತದೆಂಬ ಒಂದೇ ವಿಷಯ ಈ ಸತ್ಯವನ್ನು ಸ್ಪಷ್ಟಗೊಳಿಸುತ್ತವೆ. ೧೯೬೦-೬೧ ರಲ್ಲಿ ಶೇಕಡಾ ೬೧ ರಷ್ಟು ತೆರಿಗೆ ಆದಾಯ, ಶೇಕಡಾ ೮೫ ಕ್ಕೆ ಏರಿದೆ. ಆದರೆ ಸಮಾಜದ ಮೇಲ್ವರ್ಗದ ಮೇಲೆ ನೇರ ತೆರಿಗೆ ವಿಧಿಸುವ ಯಾವುದೇ ಪ್ರಯತ್ನ ನಡದಿಲ್ಲ. ಇಂತಹ ಅಸಮರ್ಪಕ ತೆರಿಗೆ ವಸೂಲಾತಿಯನ್ನು ಸರಿತೂಗಿಸಲು ಖೋತಾ ಬಜೆಟ್‌ಗಳನ್ನು ಮಂಡಿಸಲಾಗುತ್ತಿದೆ.

ಈ ಕ್ರಮಗಳು ಮತ್ತು ಆಡಳಿತಾತ್ಮಕ ಬೆಲೆ ಹೆಚ್ಚಳ ಮತ್ತು ಬೆಲೆಗಳನ್ನು ಹತೋಟಿಯಲ್ಲಿಡುವ ಪ್ರಯತ್ನ ಮಾಡುವಲ್ಲಿ ಕೇಂದ್ರ ಸರ್ಕಾರ ರಾಜಕೀಯ ದೃಢತೆಯನ್ನು ತೋರದಿರುವುದು ಹಣದುಬ್ಬರಕ್ಕೆ ಇನ್ನಷ್ಟು ಕುಮ್ಮಕ್ಕು ನೀಡುತ್ತದೆ. ಇದರ ದುಷ್ಪರಿಣಾಮಗಳು ನಮ್ಮ ಇಡೀ ಆರ್ಥಿಕತೆಯ ಮೇಲೆ ಉಂಟಾಗುತ್ತದೆ.

ದಿನ ಬಳಕೆಯ ವಸ್ತುಗಳ ಉದ್ಯಮದಲ್ಲಿ ಒಂದು ಕಡೆ ಬೆಳವಣಿಗೆಯನ್ನು ಕಾಣುತ್ತೇವೆ. ಆದರೆ ಅದು ಅಲ್ಪಸಂಖ್ಯಾತ ದೊಡ್ಡ ಉದ್ದಿಮೆ ದಾರರಿಗೆ ಮಾತ್ರ ಹೆಚ್ಚಿನ ಲಾಭ ನೀಡುವಲ್ಲಿ ಸಫಲವಾಗುತ್ತದೆ. ಇನ್ನೊಂದು ಕಡೆ ಜನತೆಯ ಖರೀದಿಯ ಸಾಮರ್ಥ್ಯ ಕುಂದಿರುವುದರಿಂದ ಔದ್ಯಮಿಕ ವಸ್ತುಗಳ ಬೆಲೆ ಕಡಿಮೆಯಾಗುತ್ತಿರುತ್ತದೆ. ಈ ಸ್ಥಗಿತತೆ ಸಹಜವಾಗಿಯೇ ನಿರುದ್ಯೋಗವನ್ನು ಹೆಚ್ಚಿಸುತ್ತದೆ. ಔದ್ಯಮಿಕ ರೋಗ ಗ್ರಸ್ಥತೆಯೂ ಹೆಚ್ಚುತ್ತದೆ. ೧೯೮೦ ದಲ್ಲಿ ಬರೀ ೨೪ಸಾವಿರ ರೋಗಗ್ರಸ್ತ ಉದ್ದಿಮೆಗಳಿದ್ದರೆ ಅದು ಇಂದು ೧.೭ ಲಕ್ಷದ ಷಕ್ಕೆ ಏರಿದೆ.

ಮತ್ತೊಂದು ಕಡೆಗೆ ದಿನಬಳಕೆ ವಸ್ತುಗಳ ಉದ್ಯಮಗಳ ಆರ್ಥಿಕ - ಬಂಡವಾಳ ಉತ್ಪಾದನಾ ವಿಧಾನಗಳನ್ನು ಅಳವಡಿಸಿಕೊಳ್ಳುವುದರಿಂದ ಮತ್ತು ಆರ್ಥಿಕ ಆಮದಿನಿಂದ ನಿರುದ್ಯೋಗದ ಸಮಸ್ಯೆಯನ್ನು ಹೆಚ್ಚಿಸುತ್ತಿದೆ. ತತ್ಪರಿಣಾಮವಾಗಿ ಉಂಟಾದ ಖರೀದಿ ಸಾಮರ್ಥ್ಯಹೀನತೆ ಆಂತರಿಕ ಮಾರುಕಟ್ಟೆಯನ್ನು ಸೀಮಿತಗೊಳಿಸುತ್ತದೆ.

ಹೀಗೆ ಕುಗ್ಗಿದ ಆಂತರಿಕ ಮಾರುಕಟ್ಟೆಯ ಸಮಸ್ಯೆಯನ್ನು ಸಡಿಲಗೊಳಿಸುವ ಪ್ರಯತ್ನದಲ್ಲಿ ನಮ್ಮ ರಫ್ತನ್ನು ಹೆಚ್ಚಿಸಬೇಕು ಎಂಬ ವಿವೇಚನಾರಹಿತ ವಿಚಾರ ಕಾರ್ಯರೂಪಕ್ಕೆ ಬಂತು. ಇದನ್ನು ಸಾಧಿಸಲು ಉತ್ಪಾದನೆಯ ಗುಣಮಟ್ಟವನ್ನು ಉತ್ತಮಪಡಿಸುವುದು ಅನಿವಾರ್ಯವಾಯಿತು. ಅಸಮಾನತೆಯನ್ನು ನೀಗಿಸುವಲ್ಲಿ ಆಧುನಿಕ ತಂತ್ರಜ್ಞಾನವನ್ನು ಆಮದು ಮಾಡಿಕೊಳ್ಳಬೇಕಾಯಿತು. ಇಂತಹ ರಫ್ತು ಹೆಚ್ಚಿನ ರೀತಿಯಲ್ಲಿ ಬೆಳೆಯಲಿಲ್ಲ. ಅಷ್ಟೇ ಅಲ್ಲಿ ಆಮದೇ ಒಂದು ಹೊರೆಯಾಗಿ ತಲೆಏರಿ ಕುಳಿತಿತು. ಈಗ ಸಾಲಬಾಕಿಯ ಮರುಪಾವತಿಯ ಸಮಸ್ಯೆ ತೀವ್ರವಾಯಿತು. ಈ ಸಮಸ್ಯೆಯ ತಾಪ ಶಮನ ಮಾಡಲು ವಿದೇಶಿ ಸಾಲದ ಮೊರೆ ಹೋಗಬೇಕಾಯಿತು. ೧೯೮೮- ೮೯ ರ ಹೊತ್ತಿಗೆ ವಿದೇಶಿ ಸಾಲದ ಹೊರೆ ೭೩೮೩೧ ಕೋಟಿ ರೂಪಾಯಿಗಳೆಂದರೆ ಅದರ ತೀವ್ರತೆಯ ಅರಿವಾದೀತು. ಅದು ನಂತರದ ತಿಂಗಳುಗಳಲ್ಲಿ ಇದಕ್ಕೂ ಹೆಚ್ಚಿರಬಹುದು. ವಿದೇಶಿ ಸಾಲ ಮತ್ತು ಸೇವಾ ಶುಲ್ಕದ ಮರುಪಾವತಿಯೇ ಇಂದು ನಮಗೆ ದೊಡ್ಡ ಹೊರೆಯಾಗಿದೆ. ಇದು ಕೆಲಾಪು ಅಪಾಯದ ಗೆರೆಯನ್ನು ಆಗಲೇ ವುದರಲ್ಲಿದೆ.

ಯೋಜನಾ ದೃಷ್ಟಿಕೋನದಲ್ಲಿ, ನಾವು ಗಮನಿಸಬೇಕಾದ್ದು ಅತಿ ಕೇಂದ್ರೀಕರಣದತ್ತ ವಾಲುವಿಕೆ. ವಿಶಾಲ ಜನ ಸಮೂಹದ ಆಶಯಗಳಿಂದ ದೂರವಿದ್ದು ಅಸಮಾನತೆಯನ್ನು ಹುಟ್ಟು ಹಾಕುವ ವಿಧಾನಕ್ಕೆ ಅದು ಅಡಿಯಾಳು.

ಕೇಂದ್ರ - ರಾಜ್ಯ ಸಂಬಂಧವೂ ಸಹ ಈ ದೃಷ್ಟಿಕೋನದ ಹಿಡಿತಕ್ಕೆ ಸಿಕ್ಕಿ ನಲುಗುತ್ತದೆ. ಕೇಂದ್ರ ಸರ್ಕಾರದ ಅಧಿಕಾರ ಮತ್ತು ಹಣದ ವಿಕೇಂದ್ರೀಕರಣ ಆಗುತ್ತಿದೆ. ಇಡೀ ರಾಷ್ಟ್ರದಲ್ಲಿನ ತೆರಿಗೆ ಆದಾಯದ ಎರಡನೇ ಮೂರಂಶವನ್ನು ಕೇಂದ್ರ ತನ್ನ ಹಿಡಿತಕ್ಕೆ ತೆಗೆದುಕೊಂಡು ಬರೀ ಒಂದನೇ ಮೂರಂಶವನ್ನು ಮಾತ್ರ ರಾಜ್ಯಗಳಿಗೆ ನೀಡುವ ಪರಿಸ್ಥಿತಿ ಉಂಟಾಗಿದೆ.

ಇಂತಹ ಅಸಮಾನತೆಗಳನ್ನು ತೊಡೆದು ಹಾಕಲು ಸರ್ಕಾರಿಯಾ ಆಯೋಗ ಮಾಡಿರುವ ಶಿಫಾರಸ್ಸುಗಳನ್ನು ಸಹ ಕಾರ್ಯರೂಪಕ್ಕೆ ತರುವುದು . ಇಂದಿಗೂ ಸಾಧ್ಯವಾಗಿಲ್ಲ. ಅಷ್ಟೇ ಅಲ್ಲ ಅನಂತರದ ಅವಧಿಯಲ್ಲಿ ಕೇಂದ್ರ ಸರ್ಕಾರ ಸಂಪತ್ತುಗಳು ವಿಕೇಂದ್ರೀಕರಣದಲ್ಲಿ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿದೆ. ಇದರಲ್ಲೆಲ್ಲಾ ಮುಖ್ಯವಾದದ್ದು ಕೇಂದ್ರ ಸರ್ಕಾರ ಅವಶ್ಯ ಸಾಮಗ್ರಿಗಳ ಬೆಲೆಯನ್ನು ಆಡಳಿತಾತ್ಮಕವಾಗಿ ಏರಿಸಿದ್ದು. ಇದಕ್ಕೆ ಬದಲು ತೆರಿಗೆಗಳ ಹೊಂದಾಣಿಕೆ ಮಾಡಬಹುದಿತ್ತು. ಆದರೆ ಈ ದಾರಿ ಹಿಡಿದರೆ ರಾಜ್ಯಗಳಿಗೆ ಶೇಕಡಾ ೪೫ ರಷ್ಟು ಪಾಲನ್ನು ನೀಡಬೇಕಾಗುತ್ತಿತ್ತು.

ಪರ್ಯಾಯ ದೃಷ್ಟಿಕೋನ

ಈ ಸಮಸ್ಯೆಗಳ ಪರಿಹಾರದತ್ತ ಪ್ರಯತ್ನ ನಡೆಸಿದರೆ ಒಂದು ಪರ್ಯಾಯ ದೃಷ್ಟಿಕೋನವೇ ಮೂಡುತ್ತದೆ. ಇಂತಹ ಯಾವುದೇ ಪ್ರಯತ್ನ ಸಂಪತ್ತಿನ ಸಮಾನ ವಿತರಣೆಯನ್ನು ಸಾಧಿಸಬೇಕಾಗುತ್ತದೆ.

ಕೃಷಿಯೇ ಪ್ರಧಾನ ಉದ್ಯೋಗವಾಗಿರುವ ನಮ್ಮ ದೇಶದಲ್ಲಿ ಅದು ಕೃಷಿಯಿಂದಲೇ ಪ್ರಾರಂಭವಾಗುತ್ತದೆ. ಕೃಷಿ ಭೂಮಿಯ ಹಂಚುವಿಕೆ ನಡೆಯಬೇಕಾಗುತ್ತದೆ ಈಗಿರುವಂತೆ ಬಹುತೇಕ ನೆಲವನ್ನು ದೊಡ್ಡ ಜಮೀನುದಾರರು ಹೊಂದಿರುವ ಪರಿಸ್ಥಿತಿ ಬದಲಾಗಿ ದುಡಿಯುವ ಬಡ ರೈತ ಕೂಲಿಕಾರರಿಗೆ ಅ ಒಡೆತನ ಬರಬೇಕು. ಭೂ ಸುಧಾರಣೆ ಬರೀ ರಾಜಕೀಯ ಆಡಂಬರದ ವಿಷಯ ಮಾತ್ರವಾಗಬಾರದು. ಭೂ ಸುಧಾರಣೆ ಜೊತೆಗೆ ಇಂತಹ ಸುಧಾರಣೆಗೆ ತಕ್ಕುದಾದ ತಂತ್ರಜ್ಞಾನವನ್ನು ಬಳಸುವಂತಾಗಬೇಕು ಹೆಚ್ಚು ಜನಕ್ಕೆ ಉದ್ಯೋಗ ದೊರೆಯಬೇಕು. ಸ್ಥಳೀಯ ಸಂಪನ್ಮೂಲಗಳ ಪರಿಣಾಮಕಾರಿ ಬಳಕೆಯೂ ಆಗಬೇಕು. ಈ ಬದಲಾವಣೆಗಳು ವಾಸ್ತವವಾದಾಗ ಜನರ ಕೊಳ್ಳುವ ಸಾಮರ್ಥ್ಯ ಹೆಚ್ಚುತ್ತದೆ. ಈ ಸಾಮರ್ಥ್ಯ ಹೆಚ್ಚಿನ ಪ್ರಗತಿಗೆ ಅವಕಾಶ ಮಾಡಿಕೊಡುತ್ತದೆ.

ಭೂ ಸುಧಾರಣೆಯ ನಂತರದಲ್ಲಿ ಅತ್ಯಂತ ಮಹತ್ವದ್ದು ನೀರಾವರಿ. ಕೃಷಿ ಉತ್ಪಾದನೆ ಹೆಚ್ಚಬೇಕಾದರೆ ನೀರಾವರಿ ಇರುವುದು ಅವಶ್ಯಕ. ಎಲ್ಲ ನೀರಾವರಿ ಯೋಜನೆಗಳನ್ನು ವೇಗವಾಗಿ ಮುಗಿಸುವುದರ ಜೊತೆಗೆ ಕಾಲುವೆಗಳನ್ನು ಸರಿಪಡಿಸಿ ನೀರು ಪೋಲಾಗುವುದನ್ನು ತಡೆಯಬೇಕು. ಸಣ್ಣ ನೀರಾವರಿಗೂ ಸಹ ಹೆಚ್ಚಿನ ಮಹತ್ವನೀಡಬೇಕು. ಕೇಂದ್ರ ಪ್ರಾಯೋಜಿತ ಸಣ್ಣ ನೀರಾವರಿ ಯೋಜನೆಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡುವಂತಾದರೆ ಅದು ರಾಷ್ಟ್ರೀಯ ಸಂಪತ್ತಿನ ಅಭಿವೃದ್ಧಿಯನ್ನು ತೀವ್ರಗೊಳಿಸುತ್ತದೆ.

ನೀರಾವರಿ ಸಾಧ್ಯವಾದರೆ ಮೇವಿನ ಬೆಳೆಗಳಿಗೆ ಮಹತ್ವ ನೀಡಬಹುದು. ಮೇವಿನ ಬೆಳೆಗಳನ್ನು ಹುಲುಸಾಗಿ ಬೆಳೆದರೆ ಜಾನುವಾರು ಸಾಗಣಿಕೆ ಲಾಭದಾಯಕವಾಗುತ್ತದೆ. ನಮ್ಮ ವಿವಿಧ ಅವಶ್ಯಕತೆಗಳೂ ಈ ಮೂಲಕ ಪೂರೈಸಲ್ಪಡುತ್ತವೆ. ಹೀಗೆ ಕೃಷಿ ಮತ್ತು ತತ್ಸಂಬಂಧಿತ ಕ್ಷೇತ್ರಗಳ ಆರ್ಥಿಕಾಭಿವೃದ್ಧಿ ಸಾಧ್ಯವಾಗುತ್ತದೆ.

ಔದ್ಯಮಿಕ ರಂಗಕ್ಕೆ ಬಂದರೆ ಉದ್ಯೋಗ ವೃದ್ಧಿಸುವ ಗುಣದಿಂದಾಗಿ ಸಣ್ಣ ಕೈಗಾರಿಕೆಗಳು ಬಹು ಮುಖ್ಯವಾಗುತ್ತದೆ ಸ್ಥಳೀಯ ಸಂಪನ್ಮೂಲಗಳ ಬಳಕೆಯಿಂದಲೇ ಉದ್ಯೋಗದ ಹೆಚ್ಚಳವೂ ಸಾಧ್ಯವಾಗುತ್ತದೆ. ಸಣ್ಣ ಕೈಗಾರಿಕೆಗಳು ಪರಸ್ಪರ ಪೂರಕವಾಗಬೇಕು ಆದರೆ ದೊಡ್ಡ ಕೈಗಾರಿಕೆಗಳಿಗೆ ಕೇಂದ್ರ ಸರ್ಕಾರದ ಬಂಡವಾಳ ಹೂಡುವಿಕೆ ಅವಶ್ಯಕವಾಗುತ್ತದೆ.

ಕೃಷಿ ಮತ್ತು ಉದ್ಯಮಗಳ ಬೆಳವಣಿಗೆಗೆ ತಕ್ಕಂತೆ ಅವಶ್ಯಕವಾದ ಮಾರುಕಟ್ಟೆ ಮತ್ತು ಸಾಗಾಣಿಕೆಯ ವ್ಯವಸ್ಥೆಯನ್ನು ಮುತುವರ್ಜಿ ವಹಿಸಿ ಮಾಡಬೇಕಾಗುತ್ತದೆ.

ಈ ಪರ್ಯಾಯ ವ್ಯವಸ್ಥೆಯಲ್ಲಿ ಕೃಷಿ ಮತ್ತು ಕೈಗಾರಿಕಾ ಬೆಳವಣಿಗೆಗೆ ಗಮನ ಕೊಡುವುದರ ಜೊತೆಗೆ ಸೂಕ್ತ ತಂತ್ರಜ್ಞಾನದ ಆಯ್ಕೆಯ ಸಮ್ಮಿತಗೊಂಡಿದೆ. ಹೆಚ್ಚು ಕೈಗಳಿಗೆ ಕೆಲಸ ನೀಡುವ ತಂತ್ರಜ್ಞಾನದತ್ತ ಮತ್ತು ಸಣ್ಣ ಪ್ರಮಾಣದ ಬಂಡವಾಳ ಹೂಡಿಕೆಯತ್ತ ಹೆಚ್ಚಿನ ಗಮನ ನೀಡಬೇಕು. ಒಂದೇ ಸಾರಿಗೆ ಉದ್ಯೋಗ ಸೃಷ್ಟಿಸುವುದೇ ನಮ್ಮ ಗುರಿಯಲ್ಲ. ಆದರೆ ಆ ಉದ್ಯೋಗ ಹೆಚ್ಚು ಉತ್ಪಾದಕವಾಗಬೇಕು. ಈ ಬೆಳವಣಿಗೆ ಹೆಚ್ಚಿನ ಉಧ್ಯೋಗ ಸೃಷ್ಟಿ ಮತ್ತು ಹೆಚ್ಚಿನ ಬೆಳವಣಿಗೆಗೆ ಅವಕಾಶ ಮಾಡಿಕೊಡಬೇಕು.

ಸಾಮಾಜಿಕ ಸ್ವತ್ತುಗಳ ನಿರ್ಮಾಣ ಈ ಉದ್ಯೋಗಗಳಿಂದ ಸಾಧ್ಯವಾಗಬೇಕು. ಕೂಲಿಗಾಗಿ ಕಾಳು ನೀಡುವ ಪದ್ಧತಿಯನ್ನು ಬೆಳೆಸುವತ್ತ ಒತ್ತು ನೀಡಬೇಕು. ಕೂಲಿಗಾಗಿ ಕಾಳಿನ ಜೊತೆಗೆ ಬಟ್ಟೆಯನ್ನು ಸಹ ನೀಡಬಹುದು. ಈ ಬಟ್ಟೆಯನ್ನು ಕೈಮಗ್ಗಗಳಿಂದ ಪಡೆಯಬಹುದು. ಸ್ವಯಂ ಉದ್ಯೋಗ ಯೋಜನೆಗಳು ಸಮಗ್ರ ಗ್ರಾಮೀಣಾಭಿವೃದ್ಧಿಯ ಮಾದರಿಯಲ್ಲಿರಬಹುದು. ಆದರೆ, ಅದನ್ನು ಪಟ್ಟಣ ಪ್ರದೇಶಗಳಿಗೂ ಹಬ್ಬಿಸುವಂತಾಗಬೇಕು. ಅದರ ವ್ಯಾಪ್ತಿಯನ್ನು ಇನ್ನೂ ವಿಸ್ತಾರಗೊಳಿಸಬೇಕು.

ರಾಷ್ಟ್ರೀಯ ಮಟ್ಟದಲ್ಲಿ ರೋಗಗ್ರಸ್ತ ಉದ್ಯಮಗಳ ಪುನರುಜ್ಜೀವನ ಮತ್ತು ಮುಚ್ಚಿರುವ ಉದ್ಯಮ ಕೈಗಾರಿಕೆಗಳ ತೆರೆಯುವಿಕೆಯನ್ನು ಸಾಧಿಸಬೇಕು. ಇಂತಹ ಒಂದು ಪ್ರಯತ್ನದಲ್ಲಿ ಸಹಕಾರಿ ಮತ್ತು ಇತರೆ, ಬ್ಯಾಂಕುಗಳು ಮತ್ತು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿವಿಧ ಇಲಾಖೆಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಬಹುದು.

ಹಣದುಬ್ಬರದ ತೀವ್ರತೆ ಜನರನ್ನು ತಟ್ಟದಂತೆ ತಡೆಯಲು ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಬಲಗೊಳಿಸಬೇಕು. ರಾಷ್ಟ್ರೀಯ ವ್ಯಾಪ್ತ ಹೊಂದಿರುವ ಈ ವ್ಯವಸ್ಥೆ ೧೪ ಅವಶ್ಯವನ್ನು ವಿತರಿಸುವಂತಾಗಬೇಕು. ಅವೆಂದರೆ ೧. ಧಾನ್ಯಗಳು (ಅಕ್ಕಿ, ಗೋದಿ ಇತ್ಯಾದಿ) ೨. ಸಕ್ಕರೆ ೩. ಅಡಿಗೆಗೆ ಬಳಸುವ ಎಣ್ಣೆ, ೪. ಬಟ್ಟೆ ಒಗೆಯುವ ಸಾಮಾನು ೫. ಸ್ನಾನದ ಸಾಬೂನು ೬.ಬಿಸ್ಕತ್ತುಗಳು ೭. ಸಾಂಬಾರ ಜಿನಸುಗಳು ೮. ಆಯೋಡಿಕೃತ ಉಪ್ಪು ೯. ತುಪ್ಪ ೧೦.ಮೇಣ ೧೧. ಬೆಂಕಿ ಕಡ್ಡಿ ೧೨. ಬಟ್ಟೆ ೧೩. ಜನತಾ ಪಂಚೆ ಮತ್ತು ಸೀರೆಗಳು ೧೪. ನೋಟ್‌ಪುಸ್ತಕಗಳು.

ಶಿಕ್ಷಣ ಮತ್ತು ಆರೋಗ್ಯದತ್ತ ವಿಶೇಷ ಗಮನ ನೀಡಬೇಕು. ಪ್ರಾಥಮಿಕ ಹಂತದ ಶಿಕ್ಷಣ ಕಡ್ಡಾಯವಾಗಬೇಕು. ಮಕ್ಕಳು ಶಾಲೆ ಬಿಡುವುದನ್ನು ತಡೆಗಟ್ಟಲು ಮಧ್ಯಾಹ್ನದ ಊಟದ ವ್ಯವಸ್ಥೆಯಂತಹ ಕಾರ್ಯಕ್ರಮಗಳನ್ನು ಜಾರಿಗೆ ತರಬೇಕು.

ನಮ್ಮ ಬಹುತೇಕ ಕಾಯಿಲೆಗಳು ಸತ್ವಪೂರ್ಣ ಆಹಾರದ ಕೊರತೆಯಿಂದಾಗಿ ಬರತಕ್ಕವುಗಳು.ಇವುಗಳನ್ನು ತಡೆಗಟ್ಟಲು ಜನರಿಗೆ ಸತ್ವಪೂರ್ಣ ಆಹಾರ ಸಾಕಷ್ಟು ಪ್ರಮಾಣದಲ್ಲಿ ಕಡಿಮೆ ಬೆಲೆಯಲ್ಲಿ ಸಿಗುವಂತಾಗಬೇಕು. ಇದಲ್ಲದೆ ರೋಗಗಳನ್ನು ತಡೆಗಟ್ಟುವಂತಹ ಔಷಧ ಮತ್ತು ವಿಧಾನಗಳ ಬಳಕೆಯನ್ನು ಪ್ರೋತ್ಸಾಹಿಸಬೇಕು.

ಕೃಷಿ ಸುಧಾರಣೆ ನೀರಾವರಿ, ಆರೋಗ್ಯ ಉದ್ಯಮಗಳು ಇತ್ಯಾದಿಗಳನ್ನು ಬೆಳಸಲು ಸಂಪನ್ಮೂಲಗಳ ಬಳಕ್ಕೆ ಹೆಚ್ಚಾಗುತ್ತದೆ. ಆದರೆ ಇವುಸಮಾಜದ ಮೇಲೆ ಉಂಟು ಮಾಡುವ ಲಾಭದಾಯಕ ಪರಿಣಾಮಗಳನ್ನು ಗಮನದಲ್ಲಿಟ್ಟುಕೊಂಡರೆ ಅವುಗಳ ಮಹತ್ವದ ಅರಿವಾಗುತ್ತದೆ. ಹೆಚ್ಚಿನ ತೆರಿಗೆಗಳ ಹೊರೆ ಹೊಡುವ ಬಡ ಜನರ ಹಿತಕ್ಕಾಗಿ ಇದು ಬಳಸಲ್ಪಡುವುದರಿಂದ

ಭಾರತ ಜನರನ್ನು ಬೆತ್ತಲೆ ಮಾಡಿ ಲಂಡನ್, ನ್ಯೂ
ಸುಂದರ ಫ್ಯಾಷನ್ ವಸ್ತ್ರಗಳನ್ನು ಒದಗಿಸುವ, ಭ
ವಾರಗಟ್ಟಲೆ ಉಪವಾಸ ಹಾಕಿ ಪಾಶ್ಚಿಮಾತ್ಯ 'ದ
ಜ್ಯೂಸ್‌ಗಳನ್ನು ಸರಬರಾಜು ಮಾಡುವ ಆರ್ಥಿಕ ನೀ
ಪೂರ್ಣ ಉದ್ಯೋಗ ನೀಡಿ, ಅವರ ಕೈ ತುಂಬಾ ಹ
ಬಟ್ಟೆ, ಬರೆ, ವಸತಿ ಒದಗಿಸುವ ಕೈಗಾರಿಕಾ ನ
ಯೋಜನೆಗಳ ನಿರೂಪಕರ, ಬಡ್ಜೆಟ್‌ಗಳ ತಯಾರಕ
ಸರ್ಕಾರದ ನೇತಾರರ ಮುಂದಿರುವ ಯಕ್ಷ ಪ್ರಶ್ನೆ. ?

ಈ ಹೆಚ್ಚಿನ ಖರ್ಚು ಸಮರ್ಥನೀಯವಾಗುತ್ತದೆ. ಈ ಹೆಚ್ಚಿನ ವೆಚ್ಚವನ್ನು ಸರಿದೂಗಿಸಲು ರಕ್ಷಣಾ ವೆಚ್ಚವನ್ನು ಕಡಿಮೆ ಮಾಡಬಹುದು. ಹೆಚ್ಚಿನ ಆದಾಯವುಳ್ಳವರ ಮೇಲೆ ತೆರಿಗೆ ವಿಧಿಸುವುದರಿಂದಲೂ ಇದು ಸಾಧ್ಯ.

ವಿದೇಶೀ ಸಾಲದ ಸಮಸ್ಯೆ ಇಂದು ಬಹಳ ದೊಡ್ಡ ಸಮಸ್ಯೆ. ಆದರೆ ಈ ಪರ್ಯಾಯ ಯೋಜನೆಯನ್ನು ಅನುಷ್ಠಾನಗೊಳಿಸಿದರೆ ಅದು ನಮ್ಮ ಸ್ವಾವಲಂಬನೆಯನ್ನು ಹೆಚ್ಚಿಸುತ್ತದೆ. ಹೆಚ್ಚಿದ ಸ್ವಾವಲಂಬನೆ ತಂತ್ರಜ್ಞಾನದ ಆಮದಿನಂತಹ ದುಂದು ವೆಚ್ಚವನ್ನು ತಡೆಗಟ್ಟಿ ವಿದೇಶೀ ಸಾಲದ ಹೊರೆಯನ್ನು ಕಡಿಮೆ ಮಾಡುತ್ತದೆ.

ಕೇಂದ್ರ ರಾಜ್ಯ ಸಂಬಂಧ ಇನ್ನೊಂದು ಬಹು ದೊಡ್ಡ ಸಮಸ್ಯೆ. ಆದರೆ ಈ ಪರ್ಯಾಯ ದೃಷ್ಟಿಕೋನವನ್ನು ಅಳವಡಿಸಿಕೊಂಡರೆ ಕೇಂದ್ರ ಮತ್ತು ರಾಜ್ಯಗಳ ಸಂಬಂಧ ಸಮರಸ್ಯಪೂರ್ಣವಾಗಲು ಸಾಧ್ಯ. ಅಂತರ ರಾಜ್ಯ ಮಂಡಳಿಯೆಂದನ್ನು ಸ್ಥಾಪಿಸಿದರೆ ಅದು ಕೇಂದ್ರ ರಾಜ್ಯಗಳ ನಡುವಿನ ತೊಡಕುಗಳನ್ನು ಪರಿಹರಿಸಲು ಸಾಧ್ಯವಾಗುತ್ತದೆ.

ಈಗ ಕೇಂದ್ರದ ನೆರವಿನ ಈ ೭೦ ರಷ್ಟನ್ನು ಸಾಲವೆಂದೂ ಶೇ ೩೦ ರಷ್ಟನ್ನು ಸಹಾಯ ಧನವೆಂದೂ ನೀಡಲಾಗುತ್ತದೆ. ಸಾಲದ ಮೇಲಿನ ಬಡ್ಡಿಯ ಹೊರೆಯಿಂದಾಗಿ ರಾಜ್ಯಗಳ ಮರುಪಾವತಿಯ ಸಾಮರ್ಥ್ಯ ಕುಂದುತ್ತದೆ. ಆದ್ದರಿಂದ ಕೇಂದ್ರದ ನೆರವಿನ ಈ ರೀತಿಯನ್ನು ವಿಮರ್ಶಿಸಿ ಸೂಕ್ತ ಬದಲಾವಣೆಗಳನ್ನು ಮಾಡುವ ಅವಶ್ಯಕತೆಯಿದೆ.

ಬೇರೆ ಬೇರೆ ರಾಜ್ಯಗಳಲ್ಲೂ ಸಹ ವಿವಿಧ ವಾಣಿಜ್ಯ ಬ್ಯಾಂಕುಗಳ ಸಾಲ ಠೇವಣಿ ಅನುಪಾತದಲ್ಲಿ ಬಹಳ ವ್ಯತ್ಯಾಸ ಕಾಣಿಸುತ್ತದೆ. ಇದನ್ನು ಕೇಂದ್ರ ಸರ್ಕಾರ ಯೋಜನಾ ಆಯೋಗದ ಜೊತೆಗೆ ಚರ್ಚಿಸಿ ಸರಿಯಾದ ನಿರ್ಧಾರಗಳನ್ನು ತೆಗೆದುಕೊಳ್ಳುವಂತಾಗಬೇಕು.

ವಿಕೇಂದ್ರೀಕರಣ

ಹೀಗೆ ಯೋಜನಾ ಪ್ರಕ್ರಿಯೆ ಜನರ ಪರವಾಗಿ ತನ್ನ ಗುರಿಗಳನ್ನು ಬದಲಾಯಿಸಿಕೊಂಡರೆ ಜನರನ್ನು ಈ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳಲು ಸಾಧ್ಯ. ಹೀಗೆ ಜನರನ್ನ ತೊಡಗಿಸಿ ಕೊಳ್ಳುವುದೆಂದರೆ ಯೋಜನಾ ಪ್ರಕ್ರಿಯೆಯನ್ನ ಜನರ ದುಡಿತಕ್ಕೆ ತಕ್ಕಂತೆ ವಿಕೇಂದ್ರೀಕರಿಸಿದಂತಾಗುತ್ತದೆ. ಭೂ ಸುಧಾರಣೆಯಿಂದ ಪ್ರಾರಂಭಿಸಿ ಈ ಕ್ರಿಯೆಯನ್ನು ಗ್ರಾಮದ ಹಂತದಿಂದ ಕೇಂದ್ರದ ಹಂತದವರೆಗೆ ವ್ಯಾಪಿಸುವಂತೆ ಬೆಳೆಸಿದರೆ ಮಾತ್ರ ಯೋಜನಾ ಪ್ರಕ್ರಿಯೆ ಜನಜೀವನದ ಭಾಗವಾಗಿ ಅವರ ಜೀವನ ಮಟ್ಟವನ್ನು ಉತ್ತಮಗೊಳಿಸಲು ಸಾಧ್ಯ.

ಯೋಜನಾ ವಿಧಾನದಲ್ಲಿ ಪರ್ಯಾಯ ದೃಷ್ಟಿಕೋನ: ಪ. ಬಂಗಾಳದ ಅನುಭವ

ಯೋಜನಾ ವಿಧಾನದಲ್ಲಿನ ಈ ಪರ್ಯಾಯ ದೃಷ್ಟಿಕೋನವನ್ನು ಕಾರ್ಯರೂಪಕ್ಕೆ ತಂದ ರಾಜ್ಯ ಪಶ್ಚಿಮ ಬಂಗಾಳ. ಎಡರಂಗ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಇದು ಸಾಧ್ಯವಾಯಿತು. ಕಳೆದ ಹನ್ನೆರಡು ವರ್ಷಗಳ ಅನುಭವದ ಓರೆಗಲ್ಲಿಗೆ ಈ ಯೋಜನಾ ವಿಧಾನವನ್ನು ಶಿಕ್ಕಿ ನೋಡಲಾಗಿದೆ. ನ್ಯೂನತೆಗಳು ಕಂಡುಬಂದಾಗ ತಕ್ಷಣ ತಿದ್ದುಪಡಿ ಮಾಡಲಾಗಿದೆ. ಭೂ ಸುಧಾರಣೆಯನ್ನು ಕಾರ್ಯರೂಪಕ್ಕೆ ತಂದಿರುವುದರ ಪರಿಣಾಮವಾಗಿ ರಾಷ್ಟ್ರೀಯ ಮಟ್ಟದಲ್ಲಿ ಬರೀ ಶೇ ೨೯ ರಷ್ಟು ಭೂಮಿಯನ್ನು ಮಾತ್ರ ಹೊಂದಿರುವ ಸಣ್ಣ ಮತ್ತು ಅತಿ ಸಣ್ಣ ರೈತ ವರ್ಗ ಪ. ಬಂಗಾಳದಲ್ಲಿ ಶೇಕಡ ೬೦ ಕ್ಕೂ ಹೆಚ್ಚು ಭೂಮಿಯ ಒಡೆತನ ಹೊಂದಿದೆ. ದಾಖಲಾದ ಬರ್ಗಾದಾರರನ್ನು ಅಂದರೆ ಪಾಲು/ಗೇಣಿ ರೈತರು ಸೇರಿಸಿದರೆ ಇದು ಶೇ. ೭೫ ಕ್ಕೇರುತ್ತದೆ. ಬಡವ ಮತ್ತು ದುಡಿವ ರೈತನ ದೃಷ್ಟಿಕೋನ ಈ ಕಾರಣದಿಂದಲೇ ಇಲ್ಲಿನ ಯೋಜನಾ ವಿಧಾನಕ್ಕೆ ದಕ್ಕಿರುವುದು.

ಈ ವಸ್ತು ಸ್ಥಿತಿಯನ್ನು ಗಮನದಲ್ಲಿರಿಸಿ ಕೊಂಡು ತಂತ್ರಜ್ಞಾದ ಆಯ್ಕೆ ಮಾಡಲಾಗಿದೆ. ಉದಾಹರಣೆಗೆ ನೀರಾವರಿ ಯೋಜನೆಗಳಲ್ಲಿ ಸಣ್ಣನೀರಾವರಿ ಯೋಜನೆಗೆ ವಿಶೇಷ ಗಮನ ನೀಡಿ ಪ್ರತಿಯೊಬ್ಬ ರೈತನ ಭೂಮಿಗೂ ನೀರನ್ನು ಒದಗಿಸುವ ಪ್ರಯತ್ನ ಮಾಡಲಾಗಿದೆ. ಇಂತಹ ಹಲವಾರು ಕ್ರಮಗಳ ಪರಿಣಾಮವಾಗಿ ೧೯೭೭-೭೮ ರಲ್ಲಿ ೭೪ ಲಕ್ಷ ಟನ್ ಆಹಾರ ಧಾನ್ಯ ಬೆಳೆಯುತ್ತಿದ್ದ ಈ ರಾಜ್ಯ ೧೯೮೮-೮೯ ರಲ್ಲಿ ಈ ಉತ್ಪಾದನೆಯನ್ನು ೧೧೫ ಲಕ್ಷ ಟನ್‌ಗಳಿಗೇರಿಸಲು ಸಾಧ್ಯವಾಯಿತು. ಕೃಷಿ ಕೂಲಿಕಾರರ ಸರಾಸರಿ ಸಂಬಳ ಆ ದಿನವೊಂದಕ್ಕೆ ಅಂದಿನ ರೂ.೩.೬೦ರಿಂದ ಇತ್ತೀಚಿನ ವರ್ಷಗಳಲ್ಲಿ ರೂ.೧೭ಕ್ಕೂ ಹೆಚ್ಚಿದೆ.

ಗೃಹ ಮತ್ತು ಸಣ್ಣ ಕೈಗಾರಿಕೆಗಳು

ಕೃಷಿ ಕ್ಷೇತ್ರದಲ್ಲಿನ ಈ ಬೆಳವಣಿಗೆಯಿಂದಾಗಿ ಗೃಹ ಮತ್ತು ಸಣ್ಣ ಕೈಗಾರಿಕೆಗಳ ಪ್ರಮಾಣ ಗಣನೀಯವಾಗಿ ಹೆಚ್ಚಿದೆ. ಇಂತಹ ಸಣ್ಣ ಘಟಕಗಳ ಸಂಖ್ಯೆ ೧೯೭೬-೭೭ ರಲ್ಲಿ ಒಂದು ಲಕ್ಷದಷ್ಟಿದ್ದದ್ದು ಇಂದು ೨.೯೦ ಲಕ್ಷಕ್ಕೇರಿದೆ. ಕೈಮಗ್ಗಗಳ ಉತ್ಪಾದನೆ ಗಣನೀಯವಾಗಿ ಹೆಚ್ಚಿದೆ ೧೯೭೭-೭೭ ರಲ್ಲಿನ ೨೦೦ ಲಕ್ಷ ಮೀಟರಿನಿಂದ ಅದು ೩೯೯ ದಶಲಕ್ಷ ಮೀಟರುಗಳಿಗೇರಿದೆ.

ದೊಡ್ಡ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳ ಉತ್ಪಾದನೆ ಸತತವಾಗಿ ಏರುತ್ತಿದೆ. ಈ ಕ್ಷೇತ್ರದಲ್ಲಿ ಕೇಂದ್ರದ ಅಸಹಕಾರೀ ಧೋರಣೆವಿದ್ದಾಗ್ಯೂ ಇದು ಸಾಧ್ಯವಾಗಿರುವುದು ಒಂದು ಸಾಧನೆಯೇ ಸರಿ.

ಹಲ್ದಿಯಾ ಪೆಟ್ರೊ ಕೆಮಿಕಲ್ಸ್ ಸಂಕೀರ್ಣಕ್ಕೆ ಹಲವು ವರ್ಷಗಳಿಂದ ಪ್ರಯತ್ನ ನಡೆದಿದ್ದರೂ ಇತ್ತೀಚೆಗೆ ಮಾತ್ರ ಕೇಂದ್ರದ ಅನುಮತಿ ದೊರಕಿದೆ. ಈ ಸಂಕೀರ್ಣ ಸಂಬಂಧಿತ ಘಟಕಗಳು ಪ್ರಾರಂಭವಾದರೆ ಅವು ೧೫ ಲಕ್ಷ ಜನರಿಗೆ ಉದ್ಯೋಗ ನೀಡುತ್ತವೆ ಆದ್ದರಿಂದ ಇದು ಉಳಿದ ಹಲವು ಘಟಕಗಳಿಗೆ ಮಾತ್ರ ಔದ್ಯಮಿಕ ಸಂಕೀರ್ಣವಾಗಿ ಪರಿಣಮಿಸುತ್ತದೆ.

ಏಳನೇ ಯೋಜನೆಯ ನಾಲ್ಕು ವರ್ಷಗಳಲ್ಲಿ ಸುಮಾರು ಶೇ. ೯೭ ರಷ್ಟನ್ನು ಆಗಲೇ ಖರ್ಚು ಮಾಡಿದ್ದು ಇದರಲ್ಲಿ ಶೇ ೭೦ ರಷ್ಟನ್ನು ರಾಜ್ಯ ತನ್ನ ಸ್ವಂತ ಸಂಪನ್ಮೂಲಗಳನ್ನು ಕ್ರೋಢೀಕರಿಸಿಕೊಂಡು ಮಾಡಿದೆಂಬುದು ಗಮನಾರ್ಹ ೧೯೮೭-೮೮ ಮತ್ತು ೧೯೮೮-೮೯ ರಲ್ಲಿ ಶೂನ್ಯ ಖೋತಾ ಬಜೆಟ್‌ಗಳನ್ನು ಮಂಡಿಸಲಾಗಿದೆ. ಹಣಕಾಸಿನ ವ್ಯಯ ಮತ್ತು ಆದರ ಭೌತಿಕ ಬೆಳವಣಿಗೆ ತೃಪ್ತಿಕರವಾಗಿದೆ.

ಜನತೆಯ ಪಾತ್ರ

ಈ ಯೋಜನಾ ಕಾರ್ಯಕ್ರಮದಲ್ಲಿ ಕೆಳಗಿನಿಂದ ಮೇಲಿನವರೆಗೂ ಜನರು ಪಾಲ್ಗೊಳ್ಳುವಂತೆ ಮಾಡಲಾಗಿದೆ. ಗ್ರಾಮ ಪಂಚಾಯತಿಗಳ ಮೂಲಕ ಸಾಧಿಸಲಾಗಿರುವ ವಿಕೇಂದ್ರೀಕರಣ ಜನರ ಪಾತ್ರವನ್ನು ಹೆಚ್ಚಿಸಿದೆ. ಹದಿನಾರು ವರ್ಷಗಳ ಕಾಲ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆದಿರಲಿಲ್ಲ. ೧೯೭೮, ೧೯೮೩ ಮತ್ತು ೧೯೮೮ ರಲ್ಲಿ ಈ ಸಂಸ್ಥೆಗಳಿಗೆ ಚುನಾವಣೆ ನಡೆಸಲಾಯಿತು ಚುನಾವಣಾ ನಂತರದಲ್ಲಿ ಆರಿಸಿ ಬಂದವರ ವರ್ಗ ಹಿನ್ನೆಲೆಯ ಬಗ್ಗೆ ಮಾಹಿತಿ ಸಂಗ್ರಹಿಸಲಾಯಿತು. ಶೇ. ೮೫ ರಷ್ಟು ಜನ ಸಣ್ಣ ರೈತ ಅಥವಾ ಅದಕ್ಕೂ

ಪುಟ 8 ಕ್ಕೆ

...ಗಳ ಜನರಿಗೆ ಅತಿ
ಬಡ ಜನತೆಯನ್ನು
ಜಾಮ್, ಜೆಲ್ಲಿ,
ಭಾರತದ ಜನರಿಗೆ
ಅವರಿಗೆ ಬೇಕಾದ
ಕೆ? ಇದು ನಮ್ಮ
ರಾಷ್ಟ್ರೀಯ ರಂಗ

ಚುನಾವಣೆಗಳ ನಂತರ ನಿಕರಾಗುವಾ "ಸರಕಾರದ ಬದಲಾವಣೆ ಕ್ರಾಂತಿಯ ಅಂತ್ಯವಲ್ಲ"

ನಿಕರಾಗುವಾದಲ್ಲಿ ಹೋರಾಟ ಮುಂದುವರಿಯುತ್ತದೆ. ಎಲ್ಲಾ ರಂಗಗಳಲ್ಲಿ ಮುಂದುವರಿಯುತ್ತದೆ. ಈ ಹೋರಾಟದಲ್ಲಿ ಒಂದು ಮುಖ್ಯ ಅಂಶ ೧೯೮೭ ರಲ್ಲಿ ಪ್ರಜಾಸತ್ತಾತ್ಮಕವಾಗಿ ಅಂಗೀಕರಿಸಿದ ಸಂವಿಧಾನ. ಈ ಸಂವಿಧಾನದ ೯೩ನೇ ಕಲಮು ಪ್ರತಿಗಾಮಿಗಳೊಂದಿಗೆ ಹೋರಾಟದ ನಿರ್ಣಾಯಕ ರಂಗವಾಗಲಿದೆ.

ನಿಕರಾಗುವಾದ ಚುನಾವಣೆಗಳಲ್ಲಿ ಅಮೆರಿಕನ್ ಬೆಂಬಲಿತ ರಾಷ್ಟ್ರೀಯ ವಿರೋಧಿ ಸಂಘ (ಯುನೋ)ದ ಅಭ್ಯರ್ಥಿ ವಯೊಲೆಟಾ ಚಮೋರ್ರೋ ೫೫ ಶೇಕಡಾ ಮತ ಪಡೆದು ಗೆದ್ದಿದ್ದಾರೆ. ಡೇನಿಯಲ್ ಒರ್ಟೆಗಾರವರಿಗೆ ೪೨ ಶೇಕಡಾ ಮತ ದೊರೆಯಿತು. ರಾಷ್ಟ್ರೀಯ ಅಸೆಂಬ್ಲಿಯಲ್ಲಿನ ಸ್ಥಾನಗಳನ್ನು ಇದೇ ಪ್ರಮಾಣದಲ್ಲಿ ಹಂಚಲಾಗುವುದು. ಈ ಫಲಿತಾಂಶ ನಿಕರಾಗುವಾದ ಪ್ರಗತಿಪರ ಶಕ್ತಿಗಳಿಗೊಂದು ಅನಿರೀಕ್ಷಿತ ಹಿನ್ನಡೆ.

ಭ್ರಷ್ಟ ಸೊಮೋಝಾ ಸರ್ವಾಧಿಕಾರದ ವಿರುದ್ಧ ಕ್ರಾಂತಿಕಾರಿ ಹೋರಾಟದ ಮುಂಚೂಣಿಯಲ್ಲಿದ್ದ ಎಫ್.ಎಸ್.ಎಲ್.ಎನ್.ದ (ಸ್ಯಾಂಡಿನಿಸ್ಟಾ ಪಾರ್ಟಿ) ನೇತೃತ್ವದಲ್ಲಿ ೧೯೭೯ ರಲ್ಲಿ ಸೊಮೋಝಾನನ್ನು ಕಿತ್ತೆಸೆದದ್ದು ಅಮೆರಿಕನ್ ಸಾಮ್ರಾಜ್ಯಶಾಹಿಗೆ ಅನಿರೀಕ್ಷಿತವಾಗಿತ್ತು. ಆದ್ದರಿಂದ ಅದು ತಕ್ಷಣ ಕಾಂಟ್ರಾ ದಂಗೆಕೋರರ ಮೂಲಕ ಆಕ್ರಮಣ ಮತ್ತು ಜತೆಗೆ ಆರ್ಥಿಕ ಸಮರ ಆರಂಭಿಸಿತು. ಆದರೂ ನಿಕರಾಗುವಾವನ್ನು ಮಣಿಸುವುದು ಅಮೆರಿಕನ್ ಸಾಮ್ರಾಜ್ಯಶಾಹಿಗಾಗಲಿಲ್ಲ. ದೇಶದ ಮೇಲೆ ಹತೋಟಿ ಪಡೆಯುವುದು ಕಾಂಟ್ರಾ ದಂಗೆಕೋರರಿಗಾಗಲಿಲ್ಲ. ಕೊನೆಗೆ ಕಳೆದ ವರ್ಷ ರೋಸ್ಟಾರಿಕಾದ ಅಧ್ಯಕ್ಷರು ಹಾಗೂ ಐದು ಮಧ್ಯ ಅಮೆರಿಕಾ ದೇಶಗಳು ಆರಂಭಿಸಿದ ಶಾಂತಿ ಪ್ರಕ್ರಿಯೆಯ ಫಲವಾಗಿ ಕೊಸ್ಟಾ ಡೆಲ್‌ಸೊಲ್ ಘೋಷಣೆಗೆ ಐದು ಮಧ್ಯ ಅಮೆರಿಕಾ ದೇಶಗಳ ಅಧ್ಯಕ್ಷರು ಸಹಿ ಹಾಕಿದರು. ಇದರ ಪ್ರಕಾರ ಫೆಬ್ರುವರಿ ೨೫ ರಂದು ನಿಕರಾಗುವಾದ ಚುನಾವಣೆ ನಡೆಯಿತು.

ಈ ಚುನಾವಣೆ ಸಾಮಾನ್ಯ ಸನ್ನಿವೇಶದಲ್ಲಿ ನಡೆದ ಸಾಮಾನ್ಯ ಚುನಾವಣೆಯೇನೂ ಆಗಿರಲಿಲ್ಲ. ಈಗಲೂ ನೆರೆಯ ಹೊಂಡುರಾಸ್‌ನ ಗಡಿಯಲ್ಲಿ ೧೫ ಸಾವಿರ ಸಶಸ್ತ್ರ ಕಾಂಟ್ರಾಗಳು ಆಕ್ರಮಣಕ್ಕೆ ಸನ್ನದ್ಧರಾಗಿ ನಿಂತಿದ್ದಾರೆ. (ಚುನಾವಣೆಗಳಿಗೆ ಅಮೆರಿಕನ್ ಸಾಮ್ರಾಜ್ಯಶಾಹಿಗಳ ನೇರ, ಪರೋಕ್ಷ ಆರ್ಥಿಕ ಹಾಗೂ ಇತರ ನೆರವುಗಳ ಬಗ್ಗೆ ಕಳೆದ ಸಂಚಿಕೆಯಲ್ಲಿ ಓದಿದ್ದೀರಿ. ಒರ್ಟೆಗಾ ಘೋಷಿಸಿದ ಕ್ಷಮಾದಾನದಿಂದಾಗಿ ಹಿಂದಿರುಗಿದ ಮಾಜಿ ಕಾಂಟ್ರಾ ಮುಖಂಡರು, ಕ್ರಾಂತಿ ವಿರೋಧಿ ಮುಖಂಡರು ಯುನೋಗೆ ಕೆಲಸ ಮಾಡಿದರು. ಈ ಯುನೋ ೧೪ ಪಕ್ಷಗಳ ಒಂದು ಕೂಟ. ಇವುಗಳಲ್ಲಿ ಎಡ ಪಂಥೀಯ ಉದ್ದೇಶ ಹೇಳುವ ಕೆಲವು ಪಕ್ಷಗಳೂ ಇವೆ. ಅಮೆರಿಕಾದ ಸಂಪೂರ್ಣ ಬೆಂಬಲ ಈ ಕೂಟಕ್ಕಿತ್ತು.

ನಿರಂತರವಾಗಿ ಸಶಸ್ತ್ರ ಆಕ್ರಮಣ, ಆರ್ಥಿಕ ದಿಗ್ಬಂಧನ ಎದುರಿಸಬೇಕಾಗಿದ್ದ ಕ್ರಾಂತಿಕಾರಿ ಸರ್ಕಾರ ಒಂದೆಡೆ. ಇನ್ನೊಂದೆಡೆ ತಮ್ಮ ಕ್ರಾಂತಿ ವಿರೋಧಿ ಚಟುವಟಿಕೆಗಳು ಹಾಗೂ ತಮ್ಮ ವಿದೇಶೀ ಪೋಷಕರ ಬೆಂಬಲದಿಂದ ಸೃಷ್ಟಿಯಾದ ಕಠಿಣ ಪರಿಸ್ಥಿತಿಯ ಪೂರ್ಣ ಪ್ರಯೋಜನ ಪಡೆಯುತ್ತಿದ್ದ ಯುನೋ ಕೂಟ. ಇವೆರಡರ ನಡುವೆ ಚುನಾವಣೆ ನಡೆಯಬೇಕಾಗಿತ್ತು. ತಾನೇ ಸೃಷ್ಟಿಸಿದ ಗಂಭೀರ ಆರ್ಥಿಕ ಬಿಕ್ಕಟ್ಟನ್ನು ಯುನೋ ಕೂಟ ಯಶಸ್ವಿಯಾಗಿ ಸ್ಯಾಂಡಿನಿಸ್ಟಾ ಪಕ್ಷದ ವಿರುದ್ಧ ಬಳಸಿತು. ಮತದಾರರ ಒಂದು ವಿಭಾಗ ತಾವು ಅನುಭವಿಸಿದ ಆರ್ಥಿಕ ಸಂಕಷ್ಟಗಳಿಂದಾಗಿ ತಾತ್ಕಾಲಿಕವಾಗಿ ಯುನೋ ಮಾತುಗಳಿಗೆ ಮರುಳಾದರು.

ನಮಗೆ ತಿಳಿದಿರುವಂತೆ ಚುನಾವಣಾ ಬಹುಮತಗಳು ಒಂದು ಕ್ರಾಂತಿಕಾರಿ ಪಕ್ಷ ದುಡಿಯುವ ಜನಗಳ ನಡುವೆ ಪಡೆದಿರುವ ಭಾರೀ ಪ್ರಭಾವವನ್ನು ಸರಿಯಾಗಿ ಪ್ರತಿಫಲಿಸುವುದಿಲ್ಲ. ಈ ಚುನಾವಣಾ ಸಮರ ಸಾಮ್ರಾಜ್ಯಶಾಹಿ ಮತ್ತು ಆಂತರಿಕ ಪ್ರತಿಗಾಮಿಗಳು ಹೇರಿದ ವಾತಾವರಣದಲ್ಲಿ ನಡೆಯಿತು. ಇಂತಹ ಕಠಿಣ ಪರಿಸ್ಥಿತಿಯಲ್ಲಿ ಎಫ್.ಎಸ್.ಎಲ್.ಎನ್. ಗಳಿಸಿದ ೪೨ ಶೇಕಡಾ ಮತ ನಿಕರಾಗುವಾ ಸಮಾಜದ ಸಾಮ್ರಾಜ್ಯಶಾಹಿ ವಿರೋಧಿ ಹಾಗೂ ಸಾಮಾಜಿಕ ಪ್ರಜ್ಞೆಯುಳ್ಳ ವಿಭಾಗವನ್ನು ಪ್ರತಿನಿಧಿಸುತ್ತದೆ.

ಈ ಚುನಾವಣಾ ಫಲಿತಾಂಶಗಳೊಂದಿಗೆ ನಿಕರಾಗುವಾದ ರಾಜಕೀಯ ಹೋರಾಟದಲ್ಲಿ ಒಂದು ಹೊಸ ಘಟ್ಟ ಆರಂಭವಾಗಿದೆ. ೧೯೭೯ ರ ಕ್ರಾಂತಿಯ ಮೂಲಕ ಒಂದು ದಶಕದ ಸಾಧನೆಗಳನ್ನು ಸುಲಭವಾಗಿ ಬುಡಮೇಲು ಮಾಡಲು ಸಾಧ್ಯವಿಲ್ಲ.

ಒರ್ಟೆಗಾ ಹಾಗೂ ಸ್ಯಾಂಡಿನಿಸ್ಟಾ ಪಕ್ಷ ಸೋಲು ಒಪ್ಪಿಕೊಂಡಿವೆ. ಕ್ರಾಂತಿಕಾರಿ ಸಾಧನೆಗಳನ್ನು, ಶಾಂತಿಯನ್ನು ಕಾಪಾಡುವ ಪ್ರತಿಜ್ಞೆ ಅವರು ಮಾಡಿದ್ದಾರೆ. ಅದೇ ರೀತಿ ಅಂತರ್ಯುದ್ಧ ತಡೆಯುವ ಪ್ರತಿಜ್ಞೆಯನ್ನು ಮಾಡಿದ್ದಾರೆ.

ಪ್ರಕಾಶ್ ಕಾರತ್

ಈ ಚುನಾವಣಾ ಸೋಲು ಒಂದು ವಿಚಿತ್ರ ಸನ್ನಿವೇಶ ಸೃಷ್ಟಿಸಿದೆ. ಸ್ಯಾಂಡಿನಿಸ್ಟಾ ನೇತೃತ್ವದ ರಾಷ್ಟ್ರೀಯ ಸೇನೆ ಕ್ರಾಂತಿಯ ಚೈತನ್ಯದಲ್ಲಿ ಬೆಳೆದ ಸೇನೆ. ದೇಶದ ಸ್ವಾತಂತ್ರ್ಯ, ಸಾರ್ವಭೌಮತ್ವದ ರಕ್ಷಣೆಗೆ ಅದು ಬದ್ಧವಾಗಿದೆ. ಆಪ್ತ ರಾಜಕೀಯ ಅಧಿಕಾರ ದೇಶದ ಸ್ವಾತಂತ್ರ್ಯ, ಸಾರ್ವಭೌಮತ್ವಕ್ಕೇ ವಿರೋಧಿಸುವ ಅಮೆರಿಕಾದೊಂದಿಗೆ ಬೆಸೆದಿರುವವರ ಕೈಯಲ್ಲಿದೆ.

ಹೋರಾಟ ಮುಂದುವರಿಯುತ್ತದೆ. ಎಲ್ಲಾ ರಂಗಗಳಲ್ಲಿ ನಡೆಯುತ್ತದೆ. ಈ ಹೋರಾಟದಲ್ಲ ಒಂದು ಮುಖ್ಯ ಅಂಶ ೧೯೮೭ ರಲ್ಲಿ ಪ್ರಜಾಸತ್ತಾತ್ಮಕವಾಗಿ ಅಂಗೀಕರಿಸಿದ ಸಂವಿಧಾನ. ಕ್ರಾಂತಿಕಾರೀ ಹೋರಾಟದ ಫಲಗಳನ್ನೆಲ್ಲಾ ಕ್ರೋಢೀಕರಿಸಿದ ಸಂವಿಧಾನ ಇದು ನಿಕರಾಗುವಾದ ಸ್ವಾತಂತ್ರ್ಯ, ಪ್ರಜಾಪ್ರಭುತ್ವದ ಭದ್ರ ತಳಹದಿ.

ಈ ಸಂವಿಧಾನದ ೯೩ ನೇ ಕಲಮು ಹೇಳುತ್ತದೆ - "ಒಂದು ವಿದೇಶ ಅಥವಾ ಯಾವುದೇ ದೇಶದ ಬೆಂಬಲ ಪಡೆದ ಶಕ್ತಿಗಳ ಆಕ್ರಮಣ, ಬೆದರಿಕೆಗಳಿಂದ ದೇಶವನ್ನು ರಕ್ಷಿಸುವ, ಜನಗಳನ್ನು ಕಾಪಾಡಲು ಶಸ್ತ್ರ ಎತ್ತಿಕೊಳ್ಳುವ ಕರ್ತವ್ಯ ನಿಕರಾಗುವನ್ನರಿಗಿದೆ". ಕಾಂಟ್ರಾಗಳು ಹಾಗೂ ಗೆದ್ದಿರುವ ಯುನೋ ಕೂಟದ ಬಹು ಮಂದಿ ಪಾಲುದಾರರು ಆ ಆಕ್ರಮಣಕೋರರ ಬಾಣ್ತನಲ್ಲೇ ಬರುತ್ತಾರೆ. ಸಶಸ್ತ್ರ ಪಡೆಗಳು ದೇಶದ ರಕ್ಷಣೆಗೆ ಸಂವಿಧಾನದ ಪ್ರಕಾರ ಬದ್ಧವಾಗಿವೆ. ಈ ಸಂವಿಧಾನ ನಿಗದಿ ಮಾಡಿದ ಪಾತ್ರವನ್ನು, ತನ್ನ ಕ್ರಾಂತಿಕಾರಿ ಪಾತ್ರವನ್ನು ಸ್ಯಾಂಡಿನಿಸ್ಟಾ ಪಕ್ಷ ರಕ್ಷಿಸುವುದಾಗಿ ಘೋಷಿಸಿದೆ. ಇದು ಪ್ರತಿಗಾಮಿಗಳೊಂದಿಗೆ ಹೋರಾಟದ ಒಂದು ನಿರ್ಣಾಯಕ ರಂಗವಾಗಿದೆ.

ಬ್ಯಾಂಕುಗಳು, ವಿದೇಶ ವ್ಯಾಪಾರ, ಪ್ರಾಕೃತಿಕ ಸಂಪನ್ಮೂಲಗಳು ಮುಂತಾದ ರಾಷ್ಟ್ರೀಕೃತ ವಲಯಗಳ ರಕ್ಷಣೆಗೆ ಈ ಸಂವಿಧಾನದಲ್ಲಿ ಕಲಮುಗಳಿವೆ. ಆದ್ದರಿಂದ ಇವನ್ನು ಸುಲಭವಾಗಿ ರದ್ದು ಮಾಡುವುದು ಸಾಧ್ಯವಿಲ್ಲ. ಅಲ್ಲದೆ ಕಾರ್ಮಿಕ ವರ್ಗದ ಹಕ್ಕುಗಳ ಭರವಸೆ ನೀಡುವ ಸಂಹಿತೆಯನ್ನು ಬದಲಿಸುವುದೂ ದುಸ್ಸಾಧ್ಯ. ಸಂವಿಧಾನವನ್ನು ತಿದ್ದುಪಡಿ ಮಾಡಬೇಕಾದರೆ ರಾಷ್ಟ್ರೀಯ ಅಸೆಂಬ್ಲಿಯಲ್ಲಿ ೬೦% ಮತ ಬೇಕು. ಇಷ್ಟು ಯುನೋ ಕೂಟಕ್ಕಿಲ್ಲ. ಹೊಸ ಸಂವಿಧಾನ ಅಂಗೀಕರಿಸಬೇಕಾದರೆ ಎರಡನೇ ಮೂರು ಬಹುಮತ ಬೇಕು. ಆದರೆ ೪೨% ಸ್ಥಾನಗಳಿರುವ ಎಫ್.ಎಸ್.ಎಲ್.ಎನ್. ರಾಷ್ಟ್ರೀಯ ಅಸೆಂಬ್ಲಿಯ ಅತೀ ದೊಡ್ಡ ಪಕ್ಷ.

ಬೇರೆ ರೀತಿಯಲ್ಲಿ ಈ ಸಂವಿಧಾನವನ್ನು ಕಿತ್ತೆಸೆಯಲು ಪ್ರಯತ್ನಿಸಿದರೆ ಅದರರ್ಥ ಅಂತರ್ಯುದ್ಧ. ಈಗಿನ ಸಂದರ್ಭದಲ್ಲಿ ಇದು ಸಂವಿಧಾನ ಬಾಹಿರ. ಒಬ್ಬ ಸ್ಯಾಂಡಿನಿಸ್ಟಾ ಮುಂದಾಳು ಹೇಳಿರುವಂತೆ "ಚುನಾವಣೆಯ ಫಲಿತಾಂಶ ಸ್ವೀಕರಿಸುವುದಾದರೆ ಸಂವಿಧಾನವನ್ನು ಸ್ವೀಕರಿಸಬೇಕು.ಇದೇ ಪ್ರಜಾಪ್ರಭುತ್ವ."

ಸ್ಯಾಂಡಿನಿಸ್ಟಾ ಪಕ್ಷಕ್ಕೆ ಕಾರ್ಮಿಕರು, ರೈತರ ನಡುವೆ ಭದ್ರ ನೆಲೆಯಿದೆ. ಇತಿಹಾಸ ಪ್ರಸಿದ್ಧ ಸಾಮ್ರಾಜ್ಯಶಾಹಿ ವಿರೋಧಿ ಕ್ರಾಂತಿಕಾರಿ ಸ್ಯಾಂಡಿನೋರವರ ಕಾಲದಿಂದ ಬಂದ, ಸುದೀರ್ಘ ಸಾಮ್ರಾಜ್ಯಶಾಹಿ-ವಿರೋಧಿ ಹೋರಾಟಗಳ ದೀರ್ಘ ಪರಂಪರೆಯಿದೆ. ಈಗ ಕ್ರಾಂತಿಯ ಸಾಧನೆಗಳ ಆಧಾರದ ಮೇಲೆ ನಿಂತ ೪೦% ಬೆಂಬಲವಿದೆ.

ಅತ್ತ ಯುನೋ ಕೂಟ ಬಲ ಪಂಥೀಯ ಸಂಪ್ರದಾಯ ಶರಣರು, ಕಾಂಟ್ರಾಗಳಿಂದ ಹಿಡಿದು ಸಾಮಾಜಿಕ ಪ್ರಜಾವಾದಿಗಳು, ಎಡ ಪಂಥೀಯರೆನ್ನುವವರವರೆಗಿನ ಒಂದು ಅಸಮಂಜಸ ಕೂಟ. ಸ್ಯಾಂಡಿನಿಸ್ಟಾಗಳನ್ನು ಸೋಲಿಸುವುದಷ್ಟೇ ಅವರ ಏಕಮಾತ್ರ ಉದ್ದೇಶ. ಗಂಭೀರ ಆರ್ಥಿಕ ಪರಿಸ್ಥಿತಿ ಹಾಗೂ ಮೂಲಭೂತ ಧೋರಣೆಗಳ ಪ್ರಶ್ನೆಯ ಮೇಲೆ ಈ ಕೂಟದ ಹಗರಣ ಒಂದೊಂದಾಗಿ ಬಯಲಾಗುತ್ತದೆ. ಅಮೆರಿಕನ್ ಸಾಮ್ರಾಜ್ಯಶಾಹಿ ಖಂಡಿತವಾಗಿಯೂ ನಿಕರಾಗುವಾ ಕ್ರಾಂತಿಯನ್ನು ಬುಡಮೇಲು ಮಾಡಲು ರಾಜಕೀಯ, ಆರ್ಥಿಕ ಮಧ್ಯಪ್ರವೇಶವನ್ನು ಕ್ರಮೇಣ ಹೆಚ್ಚಿಸುತ್ತಾ ಹೋಗುತ್ತದೆ. ಈ ಸವಾಲನ್ನು ಎದುರಿಸಲು ಸ್ಯಾಂಡಿನಿಸ್ಟಾಗಳು ಹಾಗೂ ಇತರ ಪ್ರಗತಿಪರ ಶಕ್ತಿಗಳು ಸಿದ್ಧಗೊಳ್ಳುತ್ತಿವೆ. ಡೇನಿಯಲ್ ಒರ್ಟೆಗಾ ಚುನಾವಣಾ ನಂತರದ ಭಾಷಣದಲ್ಲಿ ಹೇಳಿದಂತೆ "ಸರಕಾರದ ಬದಲಾವಣೆ ಯಾವ ರೀತಿಯಲ್ಲೂ ಕ್ರಾಂತಿಯ ಅಂತ್ಯವಲ್ಲ".

ನಿಕರಾಗುವಾದ ಸಾಮ್ರಾಜ್ಯಶಾಹಿ ವಿರೋಧಿ ಶಕ್ತಿಗಳು ಒಂದು ಕಷ್ಟಕರ ಸನ್ನಿವೇಶ ಎದುರಿಸುತ್ತಿವೆ. ವಿಶೇಷವಾಗಿ ವಿಶ್ವಾದ್ಯಂತ ಎದ್ದೇಳುತ್ತಿರುವ ಒಂದು ಕಮ್ಯುನಿಸ್ಟ್ ವಿರೋಧಿ ಪ್ರವೃತ್ತಿಯಿಂದ ಪ್ರಭಾವಗೊಂಡಿರುವ ಅಂತಾರಾಷ್ಟ್ರೀಯ ಸನ್ನಿವೇಶದಲ್ಲಿ. ಕಳೆದ ಹಲವು ವರ್ಷಗಳಲ್ಲಿ ಸ್ಯಾಂಡಿನಿಸ್ಟಾ ಕ್ರಾಂತಿಯೊಂದಿಗೆ ಸೌಹಾರ್ದ ವ್ಯಕ್ತಪಡಿಸುವ ಒಂದು ಶಕ್ತಿ ಶಾಲಿ ಅಂತಾರಾಷ್ಟ್ರೀಯ ಆಂದೋಲನ ಬೆಳೆದು ಬಂದಿದೆ. ಮುಂಬರುವ ದಿನಗಳಲ್ಲಿ ನಿಕರಾಗುವಾದ ಕ್ರಾಂತಿಕಾರಿ ಶಕ್ತಿಗಳೊಂದಿಗೆ ಸೌಹಾರ್ದತೆಯನ್ನು ಇನ್ನಷ್ಟು ಬಲಗೊಳಿಸಬೇಕು, ತೀವ್ರಗೊಳಿಸಬೇಕು.

ಬುಡಮೇಲು ಮಾಡಲಾಗದ ಸಾಧನೆಗಳು

೧೯೭೮ರಲ್ಲಿ ೨೦೦೦ ಕುಟುಂಬಗಳು ೪೨% ಕೃಷಿಯೋಗ್ಯ ಭೂಮಿಯನ್ನು ಹಿಡಕೊಂಡಿದ್ದವು. ಭೂಸುಧಾರಣೆಗಳ ನಂತರ ೧೯೮೯ ರಲ್ಲಿ ದೊಡ್ಡ ಭೂಮಾಲಿಕರ ಬಳಿಯಿರುವ ಭೂಮಿ ಕೇವಲ ೯%. ೪೯ ಲಕ್ಷ ಎಕ್ರೆಗಳನ್ನು ೧.೨ ಲಕ್ಷ ಕುಟುಂಬಗಳಿಗೆ ಹಂಚಲಾಯಿತು. ಹತ್ತು ಲಕ್ಷ ಮಂದಿ ಅಕ್ಷರಸ್ಥರಾದರು. ಸೊಮೋಝಾನ ದಮನಕಾರೀ ನ್ಯಾಶನಲ್ ಗಾರ್ಡ್ಸ್‌ನ ಅಮಾನುಷ ಚಿತ್ರ ಹಿಂಸೆಗಳು ನಿಂತವು. ಮಹಿಳೆಯರಿಗೆ ಸಮಾನ ಹಕ್ಕು. ದೂರದ ಹಳ್ಳಿಗಳಿಗೂ ವೈದ್ಯಕೀಯ ಸೌಲಭ್ಯ. ಇವೆಲ್ಲಕ್ಕೂ ಮುಕುಟವಿಟ್ಟಂತೆ ೧೯೭೯ ರ ಕ್ರಾಂತಿಯಿಲ್ಲದಿದ್ದರೆ ೧೯೯೦ ರ ಚುನಾವಣೆಗಳು ನಡೆಯುತ್ತಿರಲಿಲ್ಲ.

STATEMENT ABOUT OWNER SHIP AND OTHER PARTICULARS ABOUT WEEKLY NEWSPAPER "AIKYARANGA" KANNADA

FORM IV

(SEE RULE 8)

1. Place of Publication	:	L-56, K.V. Temple Street Sultanpet, Bangalore 560 053.
2. Periodicity of its publication:	:	Weekly
3. Printe's Name	:	P. Ramachandra Rao
(Whether Citizen of India)	:	Yes
(If Foreigner, State the country of origin		
(Address)	:	L,56, K.V. Temple Street, Sultanpet, Bangalore 560 053
4. Publisher's Name	:	P. Ramachandra Rao
(Whether Citizen of India?)	:	Yews
(If foreigner, state the country of origin		
(Address)	:	L,56, K.V. Temple Street, Sultanpet, Bangalore 560 053
5. Editor's Name	:	P. Ramachandra Rao
(Whether Citizen of India?)	:	Yes
If foreigner, state the country of origin		
(Address)	:	L,56, K.V. Temple Street, Sultanpet, Bangalore 560 053
6. Name and Address of Individuals who own the	:	Karnataka State Committee Communist Party of India (Marxist)
Newpaper and partners of Share holders holding more than one percent of the total capital	:	L-56, K.V. Temple Street, Sultanpet, Bangalore 560 053.

I,P. Ramachandra Rao hereby declare that the particulars given above are true to the best of my knowledge and belief.

Date: 12 th March 1990.

Sd/-
P. Ramachandra Rao
Signature of publisher

ಬೆಂಗಳೂರಿನಲ್ಲಿ ಪ್ಯಾಲೆಸ್ತೀನ್ ಹೋರಾಟದ ವಾರ್ಷಿಕೋತ್ಸವ:

'ಇಂತೆಫದಾ' ಪ್ಯಾಲೆಸ್ತೀನ್ ಜನತೆಯ ಪ್ರತಿಭಟನೆ ಮಹಾಪೂರದ ಸಂಕೇತ. 'ಇಂತೆಫದಾ' ಎಂದರೆ ಸಾಮೂಹಿಕ ಉತ್ಕ್ರಾಂತಿ. ಈ ಪದ ಭೂಗೋಳದ ಮಧ್ಯ ಪೂರ್ವದ ರಾಜಕೀಯ ಹಿನ್ನೆಲೆಯನ್ನೇ ಬದಲಾಯಿಸತೊಡಗಿದೆ. ತಮ್ಮ ತಾಯ್ನಾಡನ್ನು ಹರಿದು ಹಂಚಿಕೊಂಡು ಕಬಳಿಸಿದ ಇಸ್ರೇಲ್ ಮತ್ತು ಅದರ ಕೂಟದ ವಿರುದ್ಧ ಪಾಲೆಸ್ತೀನಿಯರು ಹಲವಾರು ದಶಕಗಳಿಂದ ಸೆಣಸುತ್ತಾ ಬಂದಿದ್ದಾರೆ. ಆಧುನಿಕ ಶಸ್ತ್ರಸಜ್ಜಿತ ಇಸ್ರೇಲ್ ಮಿಲಿಟರಿಯೆದುರು ಬರೀ ಕಲ್ಲು, ಕವಣೆಗಳು, ಬಾಟಲಿಗಳನ್ನು ಹಿಡಿದು ಅಲ್ಲದೇ ನಿರಾಯುಧರಾಗಿ ಮಹಿಳೆಯರು, ಮಕ್ಕಳು ಹೀಗೆ ಎಲ್ಲರೂ ಮುಖಾಮುಖಿ ಹೋರಾಟಕ್ಕೆ ಇಳಿದಿದ್ದಾರೆ. ಹೇಳಲಸದಳವಾದ ಹೀನ ಕ್ರೌರ್ಯ, ದಬ್ಬಾಳಿಕೆಗಳು ಅವರ ಹೋರಾಟದ ಸ್ಫೂರ್ತಿಯನ್ನೂ ದಮನಿಸಲಾರದೇ ಹೋಗಿದೆ. ತಣಿಸಲಾರದ ಅವರ ಅದಮ್ಯ ಆಕಾಂಕ್ಷೆಯೆಂದರೆ ಪ್ಯಾಲೆಸ್ತೀನ್ ತಮ್ಮ ತಾಯ್ನಾಡು ಪೂರ್ಣರಚನೆಯಾಗಲೇಬೇಕು.

'ಪ್ಯಾಲೆಸ್ತೀನ್ ಲಿಬರೇಷನ್ ಆರ್ಗನೈಸೇಷನ್ ಐಥಿಲಿಫಿಓ ನೇತೃತ್ವದ ಈ ಕ್ರಾಂತಿಕಾರಿ ಹೋರಾಟ ಆರಂಭಗೊಂಡು ೨೫ ವರುಷಗಳಾಗುತ್ತಿವೆ. 'ಇಂತೆಫದಾ' ಭುಗಿಲೆದ್ದು ಎರಡು ವರುಷಗಳು (೯ ಡಿಸೆಂಬರ್ ೧೯೮೭) ತುಂಬುತ್ತಿದೆ. ಈ ನಡುವೆ ಕಳೆದ ವರುಷ ನವೆಂಬರ್ ೧೫ ರಂದು (೧೯೮೮) ಪ್ಯಾಲೆಸ್ತೀನ್ ಸ್ವಾತಂತ್ರ್ಯ ಘೋಷಿಸಲಾಗಿದೆ.

ಪ್ಯಾಲೆಸ್ತೀನ್ ದೇಶಕ್ಕೆ ಭಾರತವನ್ನೂ ಒಳಗೊಂಡು ೯೦ಕ್ಕೂ ಅಧಿಕ ರಾಷ್ಟ್ರಗಳು ಮಾನ್ಯತೆ ನೀಡಿವೆ. ಸಮಾಜವಾದೀ ದೇಶಗಳು ಮತ್ತು ಅಲಿಪ್ತ ರಾಷ್ಟ್ರಗಳು ಇಡೀ ಈ ಕ್ರಿಯೆಗಳಿಗೆ ಬೆಂಗಾವಲು.

ಪ್ಯಾಲೆಸ್ತೀನ್ ಕ್ರಾಂತಿಕಾರಿ ಹೋರಾಟದ ೨೫ ನೇ ವಾರ್ಷಿಕೋತ್ಸವ, ಸ್ವತಂತ್ರದ ಘೋಷಣೆ ಮತ್ತು 'ಇಂತೆಫದಾ' ವಾರ್ಷಿಕೋತ್ಸವಗಳನ್ನು 'ಜನರಲ್ ಯೂನಿಯನ್ ಆಫ್ ಪ್ಯಾಲೆಸ್ತೀನಿಯನ್ ಸ್ಟುಡೆಂಟ್ಸ್' ಸಂಘಟನೆಯ ಬೆಂಗಳೂರು ಶಾಖೆಯು ಇದೇ ಮಾರ್ಚ್ ೨ ರಂದು ನಗರದಲ್ಲಿ ಕಾರ್ಯಕ್ರಮ ಏರ್ಪಡಿಸಿತ್ತು.

ಮೊದಲು ಸೌಹಾರ್ದತೆ ವ್ಯಕ್ತಪಡಿಸುವ ಕಾರ್ಯಕ್ರಮ: ಸಿಪಿಐ(ಎಂ), ಸಿ.ಪಿ.ಐ., ಜನತಾದಳ, ಕಾಂಗ್ರೆಸ್(ಐ) ಮುಂತಾದ ಪಕ್ಷಗಳ ಮುಖಂಡರುಮಾತನಾಡಿದರು.

ಜನತಾದಳದ ಕೃಷ್ಣಅಯ್ಯರ್‌ರವರು 'ಪ್ಯಾಲೆಸ್ತೀನ್ ಜನತೆಯ ಹೋರಾಟ, ನ್ಯಾಯಸಮ್ಮತ ಹೋರಾಟದ ಶಕ್ತಿಗಳಿಗೆ ಜಯವಿದ್ದೇ ಇದೆ. ಭಾರತ ಸರ್ಕಾರ, ಜನತೆ ಸದಾ ಅವರ ಜೊತೆಗಿದ್ದಾರೆ' ಎಂದರು ನಂತರ ಮಾತನಾಡಿದ ಸಿ.ಪಿ.ಐ.ನ ಮುಖಂಡ ಕಾಂ: ಎಂ.ಎಸ್. ಕೃಷ್ಣನ್‌ರವರು ಪ್ಯಾಲೆಸ್ತೀನ್‌ನನ್ನು ಹರಿದು ಹಂಚಿಕೊಂಡ ಇಸ್ರೇಲ್ ಮತ್ತು ಅದರ ಸಾಮ್ರಾಜ್ಯಶಾಹಿ ಶಕ್ತಿಗಳು ಹೋರಾಟದೆದುರು ಮಣಿಯಲೇ ಬೇಕಾಗಿ ಬಂದಿದೆ. ಹೀನ ಕ್ರೌರ್ಯ ದಬ್ಬಾಳಿಕೆಯ ಪರಮಾವಧಿ ಮುಟ್ಟಿದಾಗ್ಯೂ ಜನರ ಹೋರಾಟ ಅವರ್ಣನೀಯ. ಪೂರ್ಣ ಪ್ರಮಾಣದ ಪಾಲೆಸ್ತೀನ್ ರಚನೆಯಾಗಿಯೇ ತೀರುತ್ತದೆ. ಇದಕ್ಕೆ ಭಾರತದ ದುಡಿಯುವ ಜನರ ಬೆಂಬಲ ಇದೆಯೆಂದರು.

ಸಿಪಿಐ(ಎಂ) ವತಿಯಿಂದ ರಾಜ್ಯಸಮಿತಿ ಸದಸ್ಯ ಕಾಂ: ಎಸ್. ಆರ್. ಆರಾಧ್ಯರವರು ಮಾತನಾಡಿ ಪ್ಯಾಲೆಸ್ಟೀನಿಯನ್ ಜನರ ಹೋರಾಟಕ್ಕೆ ಬೆಂಬಲಿಸಿದರು. 'ನೆಲ್ಸನ್ ಮಂಡೇಲಾ ರವರ ಬಿಡುಗಡೆ ರಾಷ್ಟ್ರೀಯ ವಿಮೋಚನಾ ಶಕ್ತಿಗಳಿಗೆ ಹೊಸ ಹುಮ್ಮಸ್ಸು ತಂದಿದೆ. ಸಾಮ್ರಾಜ್ಯಶಾಹೀ ಶಕ್ತಿಗಳು ಅದೆಷ್ಟೇ ಯತ್ನಿಸಿದರೂ ಕ್ರಾಂತಿಕಾರಿ ಶಕ್ತಿಗಳ ಬೆಳವಣಿಗೆಗಳನ್ನು ತಡೆಯಲು ಸಾಧ್ಯವಿಲ್ಲ. ಇಡೀ ಸಮಾಜವಾದೀ ಶಕ್ತಿಗಳು, ಅಲಿಪ್ತ ರಾಷ್ಟ್ರಗಳು ಪಾಲೆಸ್ಟೀನ್‌ಗೆ ಬೆಂಬಲಿಸುತ್ತಾ ಬಂದಿದೆ. ಪೂರ್ಣ ಪ್ಯಾಲೆಸ್ಟೀನ್ ರಚನೆ ಆಗಿಯೇ ತೀರುವುದೆಂದರು. ಜಾಗತಿಕ ಶಾಂತಿಗಾಗಿ ನಡೆಯುವ ಹೋರಾಟ ಬಹುಮುಖವಾಗಿದ್ದು ಸೋವಿಯತ್ ರಶಿಯಾದ ಮುಖ್ಯಪಾತ್ರವನ್ನು ಮರೆಯಲಾಗದು. ಹಿಂದಿನಿಂದಲೂ ಸೋವಿಯೆತ್ ದೇಶ ರಾಷ್ಟ್ರೀಯ ವಿಮೋಚನಾ ಹೋರಾಟಗಳಿಗೆ ಶಾಂತಿಯ ಪ್ರಶ್ನೆಗಳಿಗೆ ಸದಾ ಬೆಂಬಲಿಸುತ್ತಾ ಬಂದಿದ್ದು ಮುಂದುವರಿಸುವ ಆಶಯ ವ್ಯಕ್ತಪಡಿಸಿ ಜಾಗತಿಕ ಶಾಂತಿ ರಕ್ಷಣೆಯಲ್ಲಿ ಸೋವಿಯೆತ್ ದೇಶದ ಪಾತ್ರದ ಬಗ್ಗೆ ಅಪಸ್ವರವೆತ್ತಿದ SUCI ಪ್ರತಿ... ಉತ್ತರಿಸಿದರು.

ಮುಖ್ಯ ಅತಿಥಿಗಳಾಗಿ ಆಗ... ಕಾಂಗ್ರೆಸ್(ಐ) ಸಂಸತ್ ಸದಸ್ಯ ... ಶರೀಫ್‌ರವರು 'ಪ್ಯಾಲೆಸ್ಟೀನಿ... ಹೋರಾಟವನ್ನೂ ಹತ್ತಿರದಿಂದ ಕಂಡಿ... ಭಾರತದ ಜನತೆ ಬೆಂಬಲ ಸ್ವಾ... ಹೋರಾಟದ ಕಾಲದಿಂದಲೂ ನೀ... ಬಂದಿದ್ದಾರೆ. ಇದು ಮುಂ... ಯುವುದೆಂದರು.

ಯಾವುದೇ ದೇಶವನ್ನೂ ... ಯುವ ವೇದಿಕೆ ಇದಲ್ಲ. ಸೋವಿ... ದೇಶದಲ್ಲಾಗುತ್ತಿರುವ ಬದಲಾವ... ಸಮಾಜವಾದದ ಕ್ರೋಢಿಕರಣ ... ಮುನ್ನಡೆಗೆ ಸಾಧಕವಾಗಿದೆ. ಈ... ಸೋವಿಯೆತ್ ಜನತೆ ಶಾಂತಿ ... ಸ್ವಾತಂತ್ರ್ಯ ಪ್ರಜಾಸತ್ತೆಗಾಗಿ, ಹೋರಾಟ... ಬೆಂಬಲವಾಗಿ ನಿಂತಿದ್ದಾರೆ' ಎಂದರು.

ಶಾಂತಿ ಮತ್ತು ಸೌಹಾ... ಸಮಿತಿಯ ಶ್ರೀ ಪಾರ್ಥಸಾರಥಿಯ... ಸಭೆಯ ಅಧ್ಯಕ್ಷತೆಯನ್ನೂ ವಹಿ... ಭಾರತದ ವಿದೇಶಾಂಗ ನೀತಿ ಸ್ವಾ... ಹೋರಾಟದಿಂದಲೂ ವಿಮೋಚನಾ ಹೋ... ಗಳಿಗೆ ಬೆಂಬಲ ನೀಡಿದ್ದನ್ನು ವಿ... ಸಂಪೂರ್ಣ ಬೆಂಬಲ ಘೋಷಿಸಿದರು.

ಭಾರತದಲ್ಲಿ ಪ್ಯಾಲೆಸ್ಟೀನ್ ರಾಯ... ಕಛೇರಿಯ ಪ್ರಥಮ ಕಾರ್ಯ... ಯವರು ತಮ್ಮ 'ಜನತೆಯ ಹೋರ... ದೊರೆತ ಬೆಂಬಲವನ್ನು ಸ್ಮರಿಸಿ ಮ... ಯೂ ದೊಡ್ಡ ಬೆಂಬಲ ರೀತಿ... ನೀಡಬೇಕೆಂದು ವಿನಂತಿಸಿದರು.

ಸಭೆಯ ಬಳಿಕ ಪ್ಯಾಲೆಸ್ಟೀ... ವಿದ್ಯಾರ್ಥಿಗಳಿಂದ ಗೆರಿಲ್ಲಾ ತರ... ಹೋರಾಟ ಮತ್ತು ಅಲ್ಲಿಯ ಸಾಂ... ಯಿಕ ನೃತ್ಯ ಕ್ರಾಂತಿಕಾರಿ ಹಾಡು... ನಾಟಕ ಪ್ರದರ್ಶನ ನಡೆದವು.

ಕೊನೆಗೆ SFI ಮತ್ತು AISF ಸಂಗಾತಿಗಳಿಂದ ಅಂತರಾಷ್ಟ್ರೀಯ ಹಾಡಿ ಸೌಹಾರ್ದತೆ ವ್ಯಕ್ತಪಡಿಸಲಾಯ್ತು.

– ವರದಿ: ಗುರು...

ಆದಾಯ ತೆರಿಗೆ ವಿನಾಯಿತಿ ಹೆಚ್ಚಳ ಒತ್ತಾಯಿಸಿ ಸಮಾವೇಶ

ಸಿ.ಐ.ಟಿ.ಯು ಮತ್ತು ಇತರ ಕಾರ್ಮಿಕ ಸಂಘಗಳ ಸಂಯೋಗದಲ್ಲಿ, ಆದಾಯ ತೆರಿಗೆ (ಇನ್‌ಕಂಟ್ಯಾಕ್ಸ್) ಮಿತಿಯನ್ನು ಹೆಚ್ಚಿಸಬೇಕೆಂದು ಒತ್ತಾಯಿಸಿ ರಾಜ್ಯ ಮಟ್ಟದ ಸಮಾವೇಶವೊಂದು ಬೆಂಗಳೂರಿನ ಪುರಭವನದಲ್ಲಿ ೨೭-೨-೯೦ ರಂದು ನಡೆಯಿತು.

ತಮಿಳುನಾಡಿನ ರಾಜ್ಯ ಸರಕಾರಿ ನೌಕರರ ಸಂಘಟನೆಯ ಪ್ರಧಾನ ಕಾರ್ಯದರ್ಶಿ ಕಾಂ.ಎಂ.ಆರ್.ಅಪ್ಪನ್ ಸಮಾವೇಶವನ್ನು ಉದ್ಘಾಟಿಸಿದ್ದು ಸಿ.ಐ.ಟಿ.ಯು. ಕರ್ನಾಟಕ ರಾಜ್ಯ ಸಮಿತಿಯ ಅಧ್ಯಕ್ಷ ಕಾ। ಸೂರ್ಯ ನಾರಾಯಣ್ ರಾವ್ ಅವರು ಅಧ್ಯಕ್ಷತೆ ವಹಿಸಿದ್ದರು.

ಕಾಂ। ಅಪ್ಪನ್ ತಮ್ಮ ಉದ್ಘಾಟನಾ ಭಾಷಣದಲ್ಲಿ, ಹೆಚ್ಚು ಆದಾಯ ಬರುವ ಶ್ರೀಮಂತರು ದೇಶದ ಉನ್ನತಿಗೋಸ್ಕರ ತಮ್ಮ ಆದಾಯದ ಒಂದು ಭಾಗವನ್ನು ಮೀಸಲಾಗಿರಿಸಬೇಕೆಂದು ಉದ್ದೇಶವಿಟ್ಟುಕೊಂಡು ಬ್ರಿಟಿಷರ ಆಡಳಿತದ ಕಾಲದಿಂದಲೇ ಆದಾಯ ತೆರಿಗೆ ನೀತಿ ಕಾರ್ಯ ರೂಪಕ್ಕೆ ಬಂದಿತು. ಆದರೆ ಈ ಉದ್ದೇಶ ವಿರುದ್ಧ ದಿಕ್ಕಿನಲ್ಲಿ ಸಾಗುತ್ತಿದ್ದು ಇಂದು ದೊಡ್ಡ ವ್ಯಾಪಾರಸ್ಥರು ಕೈಗಾರಿಕೋದ್ಯಮಿಗಳಿಗೆ ಈ ತೆರಿಗೆಯ ಹೊರೆ ಕಡಿಮೆಯಾಗುತ್ತಿದ್ದು ಮಧ್ಯಮವರ್ಗ ಮತ್ತು ಕೆಳಮಧ್ಯಮ ವರ್ಗದ ನೌಕರರು ಮಾತ್ರ ಹೆಚ್ಚು ಹೆಚ್ಚಾಗಿ ಆದಾಯ ತೆರಿಗೆ ನೀಡುತ್ತಿದ್ದಾರೆ. ದೇಶದ ಉದ್ದಗಲಕ್ಕೂ ಹರಡಿರುವ ಶ್ರೀಮಂತ ಭೂಮಾಲೀಕರ ಮೇಲೆ ಯಾವುದೇ ತೆರಿಗೆಯನ್ನು ವಿಧಿಸಿಲ್ಲ. ದೇಶದಲ್ಲಿ ಪ್ರತಿಪಕ್ಷದ ಸರಕಾರವೊಂದು ಅಧಿಕಾರಕ್ಕೆ ಬಂದಾಕ್ಷಣ ಎಲ್ಲವೂ ಸರಿಹೋಗುತ್ತದೆ ಎಂಬ ಕಲ್ಪನೆ ಇಟ್ಟುಕೊಳ್ಳುವುದು ಸರಿಯಲ್ಲ. ಮೂಲಭೂತವಾಗಿ ಜನತಾದಳ ಸರಕಾರದ ವರ್ಗಗುಣ ಬದಲಾಗಿಲ್ಲ. ಸರಕಾರದ ಈ ನೀತಿಯನ್ನು ಬದಲಿಸಬೇಕಾದರೆ ಎಲ್ಲಾ ವಿಭಾಗದ ನೌಕರರು ಒಂದಾಗಿ ಹೋರಾಡಬೇಕಾಗಿದೆ. ಈ ಹೋರಾಟವನ್ನು ಬರೇ ಸಮಾವೇಶದಲ್ಲಿ ಮುಕ್ತಾಯಗೊಳಿಸದೆ ಸಂಘಟನಾ ಶಕ್ತಿಗೆ ಅನುಗುಣವಾಗಿ ವಿವಿಧ ಕಾರ್ಯಕ್ರಮಗಳನ್ನು ರೂಪಿಸಿ ಎಡಪಕ್ಷಗಳಿಗೆ ಸೇರಿದ ಪ್ರತಿನಿಧಿಗಳ ಬೆಂಬಲ ದೊಂದಿಗೆ ಕೇಂದ್ರ ಸರಕಾರಕ್ಕೆ ಒತ್ತಡ ತರಬೇಕೆಂದು ಕರೆ ನೀಡಿದರು.

ಸಿ.ಐ.ಟಿ.ಯು ಕರ್ನಾಟಕ ಸಮಿತಿಯ ಪ್ರಧಾನ ಕಾರ್ಯದರ್ಶಿ ಕಾ।ವಿ.ಜೆ.ಕೆ. ನಾಯರ್ ವಿಷಯವನ್ನು ಮಂಡಿಸುತ್ತಾ ೧೯೩೦ ರಲ್ಲಿ ಆದಾಯ ತೆರಿಗೆ ಮೇಲೆ ರೂ ೨೦೦೦/- ಇದ್ದು ಇಂದು ಬೆಲೆ ೩೦ ಪಟ್ಟು ಜಾಸ್ತಿಯಾಗಿದೆ. ಅಂದರೆ ಮಿತಿ ರೂ.೬೦,೦೦೦ ಕ್ಕೆ ಏರಿಸಬೇಕು. ಅದಲ್ಲದೆ ಸಂವಿಧಾನದಲ್ಲಿ ವಿವರಿಸಿದ ಜೀವನಾವಶ್ಯಕ ವೇತನ (ಲಿವಿಂಗ್ ವೇಜ್)ವು ಇಂದಿನ ಪರಿಸ್ಥಿತಿಯಲ್ಲಿ ತಿಂಗಳಿಗೆ ರೂ ೪೨೦೦/- ರಷ್ಟಾದರೂ ಇರಲೇಬೇಕು. ಅಂದರೆ ವರ್ಷಕ್ಕೆ ರೂ ೫೦೦೦೦/- ಕ್ಕಿಂತಲೂ ಜಾಸ್ತಿ ವರಮಾನ ಇರುವವರಿಗೆ ಮಾತ್ರ ಆದಾಯ ತೆರಿಗೆ ವಿಧಿಸಬೇಕು ಎಂದು ಹೇಳಿದ್ದಲ್ಲದೆ, ಈ ಕುರಿತು ಎಲ್ಲ ಸಂಘಟನೆಗಳ ಮುಖಂಡರು ಚರ್ಚೆ ನಡೆಸಬೇಕೆಂದು ಕೋರಿಕೊಂಡರು.

ಅಧಿಕಾರಿವರ್ಗಕ್ಕೆ ಸೇರಿದ ಪ್ರತಿನಿಧಿಗಳೂ ಸೇರಿದಂತೆ ಎಲ್ಐಸಿಯಿಂದ ಶ್ರೀಯುತರಾದ ಬಾಲ್‌ಸುಬ್ರಮಣ್ಯ ಹಾಗು ಲಕ್ಷ್ಮೀಕಾಂತ, ಕೇಂದ್ರ ಸರಕಾರಿ ನೌಕರರ ಪರವಾಗಿ ಸಿ.ವಿ.ಆನಂದ, ರಾಜ್ಯ ಸರಕಾರಿ ನೌಕರರ ಪರವಾಗಿ ಕೇಶವಮೂರ್ತಿ ಕೋಲಾರ ಜಿಲ್ಲೆಯ ಕಾರ್ಮಿಕರ ಪರವಾಗಿ ಸುವರಿದಾಸ, ಮತ್ತಿತರ ನಿರ್ಣಯವನ್ನು ಸಮರ್ಥಿಸಿ ಮಾತನಾಡಿ ಹೋರಾಟವನ್ನು ಬೆಂಬಲಿಸಿದರು.

ಒಟ್ಟು ಚರ್ಚೆಯ ಆಧಾರದಲ್ಲಿ ಈ ಕೆಳಗಿನ ಹೋರಾಟ ಕಾರ್ಯಕ್ರಮವನ್ನು ಸಮಾವೇಶದ ಸಿದ್ಧತಾ ಸಮಿತಿಯ ಸಂಚಾಲಕರೊಬ್ಬರಾದ ಕಾ। ವೀರಾಸ್ವಾಮಿ ಸೂಚಿಸಿದ್ದು ಸಭೆಯು ಸರ್ವಾನುಮತದಿಂದ ಒಪ್ಪಿತು:

೧) ಆದಾಯ ತೆರಿಗೆ ಮಿತಿಯನ್ನು ರೂ ೧೮,೦೦೦ ದಿಂದ ರೂ ೫೦,೦೦೦ ಹೆಚ್ಚಿಸುವಂತೆ ಎಲ್ಲಾ ಸಂಘಟನೆಗಳ ಸದಸ್ಯರು ಪ್ರಧಾನ ಮಂತ್ರಿಯವರಿಗೆ ಪತ್ರ ಕಳಿಸುವುದು.

೨) ೧೨-೩-೯೦ರಂದು ಬೇಡಿಕೆ ದಿನಾಚರಣೆ- ಕಛೇರಿಗಳ ಮುಂದೆ ಸಭೆ ಪ್ರದರ್ಶನಗಳನ್ನು ನಡೆಸಿ ಸಂಘಟನೆಯ ವತಿಯಿಂದ ಹಣಕಾಸು ಮಂತ್ರಿಯವರಿಗೆ ತಂತಿ ಕಳಿಸುವುದು

೩) ರಾಜ್ಯದಿಂದ ನಿಯೋಗವೊಂದು ಹಣಕಾಸು ಮಂತ್ರಿಯವರನ್ನು ಭೇಟಿ ಮಾಡುವುದು.

ರಾಜ್ಯ ಸಿ.ಐ.ಟಿ.ಯು ಅಧ್ಯಕ್ಷ ಕಾ। ಸೂರ್ಯನಾರಾಯಣ್‌ರಾವ್ ಸಮಾವೇಶದ ಅಧ್ಯಕ್ಷತೆ ವಹಿಸಿದ್ದು, ಮಧ್ಯಮ ವರ್ಗದ ...ರ್ಮಿಕ ನೌಕರರ ಸಮಸ್ಯೆಗಳಿಗೂ ಸಿಐಟಿಯು ಆದ್ಯತೆ ನೀಡುತ್ತಿದೆ. ಇಂದಿನ ಪರಿಸ್ಥಿತಿಯಲ್ಲಿ ಕಾರ್ಮಿಕ ವರ್ಗ ಐಕ್ಯ ಹೋರಾಟವನ್ನು ಮುಂದುವರಿಸಿಕೊಂಡು ಹೋಗಬೇಕಾಗಿ ಕೇಳಿಕೊಂಡುದದು ಮಾತ್ರವಲ್ಲದೆ, ಮಧ್ಯಮ ವರ್ಗದ ನೌಕರರು ಮುಂದೆಯೂ ಸಹ ಅವರ ಬೇಡಿಕೆಗಳಿಗೆ ಹೋರಾಟ ನಡೆಸಿದಲ್ಲಿ, ಸಿಐಟಿಯು ಸಂಪೂರ್ಣ ಬೆಂಬಲ ನೀಡುವುದಾಗಿ ಘೋಷಿಸಿದರು.

ಸಮಾವೇಶದ ಸಂಚಾಲಕರಲೊಬ್ಬರಾದ ಸಿ.ಐ.ಟಿ.ಯು ಪದಾಧಿಕಾರಿ ಹಾಗೂ ಎಲ್ಐಸಿ ನೌಕರರ ಮುಖಂಡರಾದ ಕಾ। ಕೆ.ವಿ.ಶ್ರೀನಿವಾಸನ್ ಸ್ವಾಗತ ಮಾಡಿದರು.

ಕೊಳೆತು ನಾರುತ್ತಿರುವ...

- ಪುಟ ೭ರಿಂದ

ಭೂಮಿಗೆ ಪ್ರತಿಯಾಗಿ ವಿನಿಮಯ ಮಾಡಿದ್ದಾರೆ. ಇದರಲ್ಲಿ ರೂ. 50,000 ಲಂಚ ಪಡೆದಿದ್ದಾರೆಂದು ಸುದ್ದಿ. ಇದೇ ರೀತಿ ಪಂಡೇಲಾ ಆಯಿಲ್ ಮಿಲ್ ನವರೊಂದಿಗೆ ಪ್ಲಾಟುಗಳ ವಿನಿಮಯ ಮಾಡಿದ್ದಾರೆ.

ಎಲ್ಲ ತಿಂದು ತೇಗಿದ ಮೇಲೆ ಏನೂ ಉಳಿಯದಿದ್ದಾಗ ಚರಂಡಿಯನ್ನು ಲೀಜ್‌ಗೆ ಕೊಟ್ಟಿದ್ದಾರೆ. ವೈಶಾಖ್ ಆಯಿಲ್ ಮಿಲ್ ಎದುರು ಇರುವ ಚರಂಡಿಯನ್ನೂ ಸೈಯದ್ ಶಾಹ ಆಲಮ್‌ಗೆ ಪ್ರತಿ ತಿಂಗಳಿಗೆ ರೂ. 100 ರಂತೆ ಲೀಜ್ ಕೊಟ್ಟಿದ್ದಾರೆ. ಪುರಸಭೆ ನಿಯಮಾವಳಿಗಳ ಪ್ರಕಾರ ಚರಂಡಿಗಳನ್ನು ಲೀಜ್ ಕೊಡಬಾರದೆಂದಿದೆ.

ಸೀಯ ತಲಾಬ್‌ನಲ್ಲಿನ ಪುರಸಭೆ ಜಾಗೆಯನ್ನು ತಿಂಗಳಿಗೆ ರೂ. 100 ರಂತೆ ಐದು ವರ್ಷಕ್ಕೆ ಶಾಂತಿ ಸಾ ಮಿಲ್‌ಗೆ ಲೀಜ್ ಕೊಡಲಾಗಿದೆ. ಅಲ್ಲದೆಕಾಂಪೌಂಡ್ ಕಟ್ಟಿಸಿ ಕೊಳ್ಳಲೂ ಅನುಮತಿ ನೀಡಲಾಗಿದೆ. ಇದೇ ಜಾಗೆಯನ್ನು ಬಹಿರಂಗ ಹರಾಜಿಗೆ ಹಾಕಿದ್ದರೆ ರೂ. 3,00,0000 ಲೀಜ್‌ಗೆ ಹೋಗುತ್ತಿತ್ತು.

ಶಾಂತಿ ಸಾ ಮಿಲ್‌ನವರು ಆಂಜನೇಯಲು ಅವರ ಮನೆ ಕಟ್ಟಲು ನೀಡಿರುವ ಕಟ್ಟಿಗೆ ಕಬ್ಬಿಣ ಸಿಮೆಂಟ್ ಕಾಣಿಕೆಗಳಿಗೆ ಪ್ರತಿಕಾಣಿಕೆಯೆಂದು ವದಂತಿ.

ಮೈಸೂರು ಪೆಟ್ರೋ ಕೆಮಿಕ... ಪ್ರತಿದಿನ 1 ಲಕ್ಷ ಗ್ಯಾಲನ್ ನೀರು ... ರಾಜು ಮಾಡುವ ಒಪ್ಪಂದ ... ಕೊಂಡು ಒಂದೂವರೆ ಲಕ್ಷ ಗ್ಯಾ... ನೀರು ಸರಬರಾಜು ಮಾಡಿದ್ದು 50... ಗ್ಯಾಲನ್ ನೀರಿನ ಹಣವನ್ನು ಜ... ಇಳಿಸಿ ನಾಗರಿಕರ ಬಾಯಿಗೆ ನೀರಿಲ್ಲ... ಮಾಡಿದ್ದು.

ಹರಿಜನರ ರಿಜರ್ವ್ ಸೇ. 18 ಬ... ನಲ್ಲಿ ಟೆಕ್ನಿಕಲ್ ಅಪ್ರೂವಲ್ ಇರದೆ ... ರೆಡ್ಡಿಯವರ ಅಳಿಯ ಜಿ. ಶೇಖ... ಯವರಿಗೆ ಹರಿಜನವಾಡದಿಂದ ಗ... ರೋಡ್‌ಗೆ ಅಪ್ರೋಚ್‌ರೋಡ್ ನಿರ್ಮಾ... ರೂ. 49,000 ಕಾಂಟ್ಯಾಕ್ಟ್ ಕೊಟ್ಟಿದ್ದು ... ಮಾಡದೆ ಮೆಟಲ್ ಮಾತ್ರ ಸ... ಮಾಡಿದ್ದರೂ ಬಿಲ್‌ಸ್ಯಾಂಕ್ಷನ್ ಮಾಡಿ...

ರಾಮಲಿಂಗೇಶ್ವರ ಲೇ ಔಟ... ನಿವೇಶನ ಹಂಚಿಕೆಯಲ್ಲಿ ಭ್ರಷ್ಟಾಚಾರ.

ಇಷ್ಟೆಲ್ಲ ಭಾರಾಬಾನಗಡಿ ಮ... ಮಹಾಶಯರೇ ಬೇರೆ ಮುಖ... ಮುಂದು ಮಾಡಿ ಪುರಸಭೆಯ... ಮತ್ತೆ ನುಸುಳಲು ಸಿದ್ಧತೆ ನಡೆಸಿ... ಜನತೆ ಈ ಬಗ್ಗೆ ಎಚ್ಚರಗೊಳ್ಳಬೇಕಾಗಿ...

- ವರ...

ಅಫಘಾನಿಸ್ತಾನದಲ್ಲಿ ಕ್ಷಿಪ್ರ ಕ್ರಾಂತಿ ಯತ್ನ ವಿಫಲ

ಅಫಘಾನಿಸ್ತಾನದ ಪಿ.ಡಿ.ಪಿ.ಎ. ಸರಕಾರದ ವಿರುದ್ಧ ಕ್ಷಿಪ್ರ ಕ್ರಾಂತಿಯ ಪ್ರಯತ್ನವೊಂದನ್ನು ಮಾರ್ಚ್ ೬ ರಂದು ಫಲಗೊಳಿಸಲಾಗಿದೆ ಎಂದು ಅಧ್ಯಕ್ಷ ನಜಿಬುಲ್ಲಾ ಹೇಳಿದ್ದಾರೆ. ಪಕ್ಷದೊಳಗಿನ ತೀವ್ರಗಾಮಿಗಳು ಅಫಘಾನ್ ಇಸ್ಲಾಮೀ ಪಾರ್ಟಿಯ ಹಿಕ್‌ಮತ್ಯಾರ್ ಜತೆಗೂಡಿ ಜನತೆಯ ವಿರುದ್ಧ ತಮ್ಮ ಕೊನೆಯ ವಿಶ್ವಾಸ ಘಾತ ನಡೆಸಲು ಪ್ರಯತ್ನಿಸಿದರು ಎಂದು ಅವರು ತಿಳಿಸಿದ್ದಾರೆ.

ರಕ್ಷಣಾ ಮಂತ್ರಿ ಶಾನವಾಜ್ ತನಾಯಿ ನೇತೃತ್ವದಲ್ಲಿ ನಡೆದ ಈ ಕ್ಷಿಪ್ರ ಕ್ರಾಂತಿಯ ವಿಫಲತೆಯ ನಂತರ ಸರಕಾರದಿಂದ ಕಿತ್ತು ಹಾಕಲ್ಪಟ್ಟ ಶಾನವಾಜು ಹಾಗೂ ಆತನ ಬೆಂಬಲಿಗರು ಪಾಕಿಸ್ತಾನಕ್ಕೆ ಓಡಿಹೋಗಿದ್ದಾರೆ ಎಂದು "ಜತೆಗೆ ಬಹಳಷ್ಟು ಅಮೆರಿಕನ್‌ಡಾಲರುಗಳು ಇದ್ದವು" ಎಂದು ಅಧ್ಯಕ್ಷ ನಜಿಬುಲ್ಲಾ ರೇಡಿಯೋ ಪ್ರಚಾರ ಭಾಷಣವೊಂದರಲ್ಲಿ ಹೇಳಿದ್ದಾರೆ.

ರಾಷ್ಟ್ರೀಯ ಹೊಂದಾಣಿಕೆಯ ನೀತಿ ಹಾಗೂ ಅಫಘಾನಿಸ್ತಾನದಲ್ಲಿ ವ್ಯಾಪಕ ಆಧಾರದ ಸರಕಾರದ ರಚನೆಯನ್ನು ವಿರೋಧಿಸುತ್ತಿದ್ದ ಪ್ರಮುಖ ಸೈನ್ಯಾಧಿಕಾರಿಗಳು ಈ ಕ್ಷಿಪ್ರ ಕ್ರಾಂತಿಯ ಯೋಜನೆ ತಯಾರಿಸಿರಬಹುದೆಂದೂ ಕೆಲವು ಮೂಲಗಳು ಅಭಿಪ್ರಾಯಪಟ್ಟಿವೆ.

ಈ ನಡುವೆ ಬುಶ್ ಸರಕಾರದ ಅಫಘಾನ್ ಧೋರಣೆಯನ್ನು ಇಬ್ಬರು ಪ್ರಮುಖ ಡೆಮೊಕ್ರಾಟಿಕ್ ಶಾಸನ ಸಭಾ ಸದಸ್ಯರು ತೀವ್ರವಾಗಿ ಖಂಡಿಸಿದ್ದಾರೆ. ಸೋವಿಯತ್ ಸೈನ್ಯ ವಾಪಾಸು ಹೋದ ಮೇಲೂ ವರ್ಷಕ್ಕೆ ೩೦ ರಿಂದ ೪೦ ಕೋಟಿ ಡಾಲರುಗಳಷ್ಟು ನೆರವನ್ನು ಪಾಕಿಸ್ತಾನದ ಮೂಲಕ ಹಂಚುವುದಕ್ಕೆ ಯಾವ ಆಧಾರವೂ ಇಲ್ಲವೆಂದು ಅವರು ಟೀಕಿಸಿದ್ದಾರೆ.

ಪಾಶ್ಚಿಮಾತ್ಯ ದೇಶಗಳಲ್ಲಿ ಮಹಿಳಾ ಕಾರ್ಮಿಕರು

ಪಶ್ಚಿಮದ ಮುಂದುವರಿದ ಕೈಗಾರೀಕೃತ ದೇಶಗಳಲ್ಲಿ ಮಹಿಳಾ ಕಾರ್ಮಿಕರ ವಿರುದ್ಧ ಈಗಲೂ ಸತತ ಲೈಂಗಿಕ ಕಿರುಕುಳ, ಅನಾಚಾರ ಮುಂದುವರಿಯುತ್ತಿದೆ. ಮಹಿಳಾ ಕೆಲಸಗಾರರು, ಉದ್ಯೋಗಿಗಳು ಸದಾ ತಮ್ಮ ಬಾಸ್‌ಗಳಿಂದ ಬ್ಲ್ಯಾಕ್‌ಮೇಲ್ ಅಥವಾ ಹಿಂಸೆಯ ಭಯದ ನೆರಳಲ್ಲಿ ಕೆಲಸ ಮಾಡಬೇಕಾಗಿದೆ ಎಂದು ದುಡಿಯುವ ಮಹಿಳೆಯ ವಿರುದ್ಧ ಹಿಂಸಾಚಾರ ವಿರೋಧಿ ಸಂಘ ತಿಳಿಸಿದೆ. ಯುರೋಪಿಯನ್ ಸಮುದಾಯದ ದೇಶಗಳು, ಅಮೆರಿಕಾ, ಕೆನಡಾ, ಫಿನ್‌ಲಂಡ್, ಸ್ವಿಟ್ಜರ್ಲೆಂಡ್, ಆಸ್ಟ್ರಿಯಾ, ಸ್ವೀಡನ್‌ನ ಪ್ರತಿನಿಧಿಗಳು ಈ ಸಂಘದ ಸದಸ್ಯರು ಇವರಲ್ಲಿ ಬಹುಮಂದಿ ಟ್ರೇಡ್ ಯೂನಿಯನ್ ಕಾರ್ಯಕರ್ತೆಯರು, ಸಮಾಜ ವಿಜ್ಞಾನಿಗಳು.

ತಮ್ಮ ಗಂಡಂದಿರೂ ಸಹೋದರರು ಅಥವಾ ತಂದೆಯರಿಂದ ಹಲ್ಲೆಗೊಳಗಾಗುವ ಮಹಿಳೆಯರ ಸಂಖ್ಯೆಯ ವಿಶ್ವದಾಖಲೆ ಬ್ರಿಟನ್ನಿನದು ಎಂದು ಐರಿಷ್ ಸಮಾಜ ವಿಜ್ಞಾನಿಯೊಬ್ಬರು ಹೇಳಿದ್ದಾರೆ. ಯುರೋಪಿಯನ್ ಸಮುದಾಯದ ದೇಶಗಳಲ್ಲಿ ಕನಿಷ್ಟ ೧೦% ದುಡಿಯುವ ಮಹಿಳೆಯರು ಕೆಲಸ ಪಡೆಯಲು ಮತ್ತು ಪಡೆದದ್ದನ್ನು ಉಳಿಸಿಕೊಳ್ಳಲು ಲೈಂಗಿಕ ಬ್ಲ್ಯಾಕ್‌ಮೇಲ್‌ಗೆ ಒಳಗಾಗಬೇಕಾಗುತ್ತದೆ ಎಂದು ಅಂಕಿ-ಅಂಶಗಳಿಂದ ತಿಳಿದು ಬಂದಿದೆ.

ಅಭಿವೃದ್ಧಿ ಶೀಲ ದೇಶಗಳ ಆರ್ಥಿಕದ ಮೇಲೆ ಬಹು ರಾಷ್ಟ್ರೀಯ ಕಂಪೆನಿಗಳ ಬಿಗಿಮುಷ್ಟಿ.

ಇತ್ತೀಚಿನ ದಿನಗಳಲ್ಲಿ ಆಫ್ರಿಕಾ, ಏಶಿಯಾ ಮತ್ತು ಲ್ಯಾಟಿನ್ ಅಮೆರಿಕಾದ ರಾಷ್ಟ್ರಗಳ ಒಟ್ಟು ಔದ್ಯಮಿಕ ಉತ್ಪಾದನೆಯಲ್ಲಿ ಶೇಕಡ ೪೦ ಭಾಗ, ವಿದೇಶ ವ್ಯಾಪಾರ ಕ್ಷೇತ್ರದಲ್ಲಿ ಶೇಕಡಾ ೬೦ ಭಾಗ ಮತ್ತು ಅಮೂಲ್ಯ ಕಚ್ಚಾ ವಸ್ತುಗಳ ಮಾರಾಟ ಕ್ಷೇತ್ರದಲ್ಲಿ ಶೇಕಡಾ ೫೦-೯೦ ಭಾಗ ಶ್ರೀಮಂತ ಪಾಶ್ಚಿಮಾತ್ಯ ಗುತ್ತೇದಾರಿ ಸಂಸ್ಥೆಗಳ ನಿಯಂತ್ರಣದಲ್ಲಿದೆ ಎಂದು ತಿಳಿದು ಬಂದಿದೆ. ಕೇವಲ ಅಮೆರಿಕನ್ ಕಂಪೆನಿಗಳೇ ಈ ದೇಶಗಳಲ್ಲಿ ತೊಡಗಿಸಿರುವ ಬಂಡವಾಳ ೧೫೦೦ ಶತಕೋಟಿ ಡಾಲರುಗಳು. ಅಂದರೆ ಇದು ದಕ್ಷಿಣ ಏಶಿಯಾ ಮತ್ತು ಆಗ್ನೇಯ ಏಶಿಯಾದ ಕೆಲವು ದೇಶಗಳ ಒಟ್ಟು ರಾಷ್ಟ್ರೀಯ ಉತ್ಪಾದನೆಯ ಮೂರು ಪಟ್ಟಾಗಿಂತಲೂ ಹೆಚ್ಚು! ಅದ್ದರಿಂದ ಈ ಕಂಪೆನಿಗಳು ಇಂತಹ ದೇಶಗಳ ಆರ್ಥಿಕದ ಜೀವಾಳವಾದ ರಂಗಗಳಲ್ಲಿ ಯಜಮಾನಿಕೆ ಸ್ಥಾಪಿಸಿ ಪರ್ಯಾಯ ಸರಕಾರದಂತೆಯೇ ವರ್ತಿಸುತ್ತಿದ್ದರೆ ಆಶ್ಚರ್ಯವೇನು? ಈ ದೇಶಗಳ ಸರಕಾರೀ ಅಧಿಕಾರಿಗಳಿಗೆ ಧಾರಾಳ ಲಂಚ, ಸ್ಥಳೀಯ ಕಾನೂನುಗಳ ಸಾರಾಸಗಟು ಉಲ್ಲಂಘನೆ, ಪ್ರಾಕೃತಿಕ ಸಂಪನ್ಮೂಲಗಳ ದೋಚುವಿಕೆ, ಅಂತರಿಕ ವ್ಯವಹಾರದಲ್ಲಿ ಮೂಗು ತೂರಿಸುವಿಕೆ ಬಹುರಾಷ್ಟ್ರೀಯ ಕಂಪೆನಿಗಳ ಚಟುವಟಿಕೆಗಳ ಒಂದು ಅಂಗವಾಗುತ್ತಿದೆ ಎಂದು ಅಧ್ಯಯನದಿಂದ ತಿಳಿದು ಬಂದಿದೆ.



ಆಫ್ರಿಕಾ ರಾಷ್ಟ್ರೀಯ ಕಾಂಗ್ರೆಸ್‌ನ ಸಭೆಯಲ್ಲಿ ತಮ್ಮ ಐತಿಹಾಸಿಕ ಬಿಡುಗಡೆಯ ನಂತರ ಮೊದಲ ಬಾರಿಗೆ ಭಾಗವಹಿಸಲು ಲುಸಾಕಾಕ್ಕೆ ಆಗಮಿಸಿದಾಗ ಒಬ್ಬ ಪ್ರಭಾತ 'ಮಾರ್ಗದರ್ಶಕ'ನಿಂದ ಪ್ರೀತಿಯಿಂದ ಎ.ಎನ್.ಸಿ. ಸ್ಕಾರ್ಫ್ ಹೊದ್ದಿಸಿಕೊಳ್ಳುತ್ತಿರುವ ನೆಲ್ಸನ್ ಮಂಡೇಲಾ.

ಮಿಲಿಟರಿ ಕ್ಷೇತ್ರದಲ್ಲಿ ಶ್ರೇಷ್ಠತೆಯಗಿಳನ್ನು ಅಮೆರಿಕಾ ಬಿಟ್ಟಿದೆಯೇ?

ಸೋವಿಯತ್ ಒಕ್ಕೂಟದಲ್ಲಿ ಗೊರ್ಬಚೆವ್‌ರ ನೇತೃತ್ವದಲ್ಲಿ ಅನುಷ್ಠಾನಗೊಳ್ಳುತ್ತಿರುವ ಕ್ರಾಂತಿಕಾರಿ ಸುಧಾರಣೆಗಳಿಗೆ ತಮ್ಮ ಬೆಂಬಲವಿದೆ ಎಂದು ಅಮೆರಿಕನ್ ಅಧ್ಯಕ್ಷ ಬುಶ್ ಹೊಸ ವರ್ಷದ ಆರಂಬದಲ್ಲಿ ಸೋವಿಯತ್ ಜನತೆಗೆ ಶುಭಾಶಯ ಕೋರುತ್ತಾ ಹೇಳಿದ್ದರು. ಆದರೆ ಈಗಿನ ಪರಿಸ್ಥಿತಿಯನ್ನು ಗಮನಿಸಿದರೆ ಅಮೆರಿಕಾ ತನ್ನ ಪಡೆಗಳನ್ನು ಆಧುನೀಕರಿಸುವ ಕಾರ್ಯಕ್ರಮಗಳನ್ನು ಮುಂದುವರಿಸಬೇಕಾಗುತ್ತದೆ ಎಂದು ಬುಶ್ ಅಮೆರಿಕಾದ ವಾಯುಪಡೆಯ ಮುಖ್ಯಸ್ಥರನ್ನು ಉದ್ದೇಶಿಸಿಮಾಡಿದ ಭಾಷಣದಲ್ಲಿ ಹೇಳಿರುವುದು ಅಮೆರಿಕಾ ತನ್ನ ಈಗಿಳನ್ನು ಇನ್ನೂ ಬಿಟ್ಟಿಲ್ಲ ಎಂಬುದನ್ನು ತೋರಿಸಿದೆ. ಅಂದಿನ ಜಗತ್ತಿನ ಹೊಸವಾಸ್ತವಿಕತೆಗೆ ಅನು ಗುಣವಾದ ಹೊಸ ಚಿಂತನೆಯೇನೂ ಅಮೆರಿಕಾದ ಬಳಿಯಿಲ್ಲ ಎಂದು ಅಮೆರಿಕಾದ ೧೯೯೧ರ ರಕ್ಷಣಾ ಬಜೆಟ್ ಬಗ್ಗೆ ಪ್ರತಿ ಕ್ರಿಯೆ ವ್ಯಕ್ತಪಡಿಸುತ್ತಾ ಅಮೆರಿಕಾದ ಶಾಸನ ಸಭೆಯಸದಸ್ಯ ಲೆಸ್‌ಎಸ್ಪಿನ್ ಹೇಳಿದ್ದಾರೆ.

ಅದೇ ರೀತಿ ೨೦೦೦ ಇಸವಿಯ ಒಳಗಾಗಿ ಇತರ ದೇಶಗಳ ಭೂಭಾಗಗಳಲ್ಲಿನ ವಿದೇಶೀ ಸೈನಿಕ ಹಾಜರಾತಿಯನ್ನು ಕೊನೆಗಾಣಿಸುವ ಬಗ್ಗೆ ಸೋವಿಯತ್ ಕರೆಯನ್ನು ಅಮೆರಿಕಾ ಬದಿಗೆ ತಳ್ಳಿದೆ ಎಂದು ಪ್ರಾವ್ಡಾ ದೈನಿಕದ ಫೆಬ್ರುವರಿ ೨೬ ರ ಸಂಚಿಕೆಯಲ್ಲಿ ರಾಜಕೀಯ ವಿಶ್ಲೇಷಕರೊಬ್ಬರು ಹೇಳಿದ್ದಾರೆ. ಸೋವಿಯತ್ ಒಕ್ಕೂಟದ ನಿಲುವಿಗೆ ತದ್ವಿರುದ್ಧವಾಗಿ ಅಮೆರಿಕಾದ ವರಿಷ್ಠ ಆಡಳಿತಗಾರರು ತಮ್ಮ ದೇಶ ಆಮದಾದ ಕಚ್ಚಾಸಾಮಗ್ರಿಗಳಿಲ್ಲದೆ ಬದುಕಲಾರದ ದೇಶವಾದ್ದರಿಂದ ಇದು ಸಾಧ್ಯವಿಲ್ಲ ಎಂದು ವಾದ ಮಾಡುತ್ತಿರುವುದನ್ನು ಪ್ರಸ್ತಾಪಿಸಿರುವ ಈ ವಿಶ್ಲೇಷಕರು ಅದರೆ ಅಮೆರಿಕಾ ತನ್ನ ಸೇನಾಪಡೆಗಳನ್ನು ಜಮಾಯಿಸಿರುವುದು ತಮಗೆ ಬೇಕಾದ ಕಚ್ಚಾ ವಸ್ತುಗಳಿರುವ ಪ್ರದೇಶಗಳಲ್ಲಲ್ಲ; ಅಮೆರಿಕಾದ ಸೇನಾ ಪಡೆಗಳಲ್ಲಿ ಮೂರರಲ್ಲಿ ಎರಡು ಭಾಗ ಪಶ್ಚಿಮ ಯುರೋಪಿನಲ್ಲಿ, ಒಂದು ಭಾಗ ಸೋವಿಯತ್ ಒಕ್ಕೂಟದ ಸೀಮೆಗೆ ತಾಗಿಕೊಂಡಿರುವ ಪೂರ್ವ ಏಶ್ಯಾದಲ್ಲಿ ಎಂಬ ಸಂಗತಿಯತ್ತ ಗಮನಸೆಳೆದಿದ್ದಾರೆ.

ದೇಶ – ವಿದೇಶ

ಹರಿಯಾಣದಲ್ಲಿ ಯಶಸ್ವೀ ಕೈಗಾರಿಕಾ ಮುಷ್ಕರ

ತಾನು ಭರವಸೆ ನೀಡಿದ ಕನಿಷ್ಟ ಕೂಲಿಯ ಅನುಷ್ಠಾನ ಮಾಡದ ಸರಕಾರದ ನೀತಿ ವಿರುದ್ಧ ಹಾಗೂ ಕಾರ್ಮಿಕ ಸಂಘಗಳ ಹಲ್ಲೆಗಳ ವಿರುದ್ಧ ಫೆಬ್ರುವರಿ ೬ ರಂದು ಹರಿಯಾಣಾ ರಾಜ್ಯದಾದ್ಯಂತ ಒಂದು ದಿನದ ಕೈಗಾರಿಕಾ ಮಷ್ಕರ ಅತ್ಯಂತ ಯಶಸ್ವಿಯಾಗಿ ನಡೆಯಿತು. ಸರಕಾರೀ ಟ್ರೇಡ್ ಯೂನಿಯನ್ ಎಂದು ಕುಪ್ರಸಿದ್ಧವಾಗಿರುವ ಲೋಕ ಮಜ್ದೂರ್ ಸಂಘಟನೆ ಈ ಮುಷ್ಕರವನ್ನು ವಿರೋಧಿಸಿದರೂ, ಚೌತಾಲಾ ಸರಕಾರ ಪೋಲೀಸ್ ಬಲವನ್ನು ಮಾಲಿಕರ ಪರವಾಗಿ ಬಳಸಿದರೂ ಅಸಂಘಟಿತ ಕಾರ್ಮಿಕರು ದೊಡ್ಡ ಪ್ರಮಾಣದಲ್ಲಿ ಇದರಲ್ಲಿ ಭಾಗವಹಿಸಿದರು. ಮೆರವಣಿಗೆ ಸಭೆಗಳು ನಡೆದವು.

ಇದಕ್ಕೆ ಮೊದಲು ಜನವರಿ ೨೯ ರಂದು ಜಿಲ್ಲಾ ಇಲಾಖಾವಾರು ರ್‍ಯಾಲಿಗಳು ನಡೆದವು. ಜನವರಿ ೩೦ ರಂದು ರಾಜ್ಯಾದ್ಯಂತ ಕಾರ್ಮಿಕ ಕಚೇರಿಗಳೆದುರು ಧರಣಿ ನಡೆಯಿತು. ಮತ್ತೆ ಫೆಬ್ರುವರಿ ೨ ರಂದು ಜಂಟಿ ರ್‍ಯಾಲಿಗಳು ನಡೆದವು. ಫೆಬ್ರುವರಿ ೪ ಹಾಗೂ ೫ ರಂದು ವ್ಯಾಪಕ ಪ್ರಚಾರ ಪ್ರಕ್ಷೋಭೆ ನಡೆಸಲಾಗಿತ್ತು.

ದೇವಿಲಾಲ್ ಸರಕಾರ ಜೂನ್ ೧೯೮೮ ರಲ್ಲಿ ಕನಿಷ್ಠ ಕೂಲಿ ೧೨೫೦ ರೂ. ನಿಗದಿ ಮಾಡಬೇಕೆಂಬ ಕಾರ್ಮಿಕ ಆಂದೋಲನದ ಬಹುದಿನದ ಬೇಡಿಕೆಗಳಿಗೆ ಎದುರಾಗಿ ೮೦೦ ರೂ. ಕನಿಷ್ಟ ಕೂಲಿ ನಿಗದಿ ಮಾಡಿರುವುದಾಗಿ ಘೋಷಿಸಿತು. ಆದರೆ ಈ ಬಗ್ಗೆ ಗೆಜಟ್ ನೋಟಿಫಿಕೇಶನ್ ಬಂದದ್ದು ಅಕ್ಟೋಬರ್‌ನಲ್ಲಷ್ಟೆ. ಈ ಮಧ್ಯೆ ೨೦-೨೫ ಮಾಲಿಕರು ಕೋರ್ಟಿಗೆ ಹೋಗಿ ಕೂಲಿ ಬಾಕಿ ಪಾವತಿಗೆ ಸ್ಟೇಆರ್ಡರ್ ಪಡೆದರು. ಉಳಿದ ಮಾಲಿಕರೂ ಬಾಕಿ ಪಾವತಿ ಮಾಡಲು ನಿರಾಕರಿಸಿದರು. ಇದರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಸರಕಾರವನ್ನು ಕೇಳಿದಾಗ ಅದು ಮಾಲಿಕರ ಪಕ್ಷವನ್ನೇ ವಹಿಸಿತು. ಇದರಿಂದ ಕಾರ್ಮಿಕರಿಗೆ ವ್ಯಾಪಕ ಅಸಂತೃಪ್ತಿ ಹರಡಿತು.

ಈ ನಡುವೆ ಚೌತಾಲಾ ಸರಕಾರ ಕಾರ್ಮಿಕ ಸಂಘಟನೆಯ ಹಕ್ಕುಗಳ ಮೇಲೆ ಹಿಂದೆಂದೂ ಕಾಣದಷ್ಟು ಆಕ್ರಮಣ ನಡೆಸಲಾರಂಭಿಸಿತು. ಕಾರ್ಖಾನೆಗಳ ಅಟ್ಟದಿಂದ ಮಾಲಿಕರ ಗೂಂಡಾಗಳು ಗುಂಡು ಹಾರಿಸಿದರೆ ರಾಜ್ಯದ ಪೋಲೀಸ್ ಕಾರ್ಖಾನೆ ಗೇಟುಗಳಲ್ಲಿ ಕಾರ್ಮಿಕರ ಮೇಲೆ ಗುಂಡುಹಾರಿಸಿದ ಹಲವಾರು ಘಟನೆಗಳು ನಡೆದವು. ಇವೆಲ್ಲದರ ವಿರುದ್ಧ ಸಿ.ಐ.ಟಿ.ಯು.,ಎ.ಐ.ಟಿ.ಯು.ಸಿ., ಹೆಚ್.ಎಂ.ಎಸ್., ಬಿ.ಎಂ.ಎಸ್. ಜಂಟಿ ಸಭೆ ನಡೆಸಿ ಮೇಲೆ ಹೇಳಿದ ಕಾರ್ಯಾಚರಣೆಯನ್ನು ರೂಪಿಸಲಾಗಿತ್ತು.

ಉತ್ತರಪ್ರದೇಶ: ಕೋಮು ಸೌಹಾರ್ದ ರಕ್ಷಣೆಗಾಗಿ ನಿರಂತರ ಪ್ರಚಾರ-ಪ್ರಕ್ಷೋಭೆ

ಫೆಬ್ರುವರಿ ೧೪ ರಿಂದ ರಾಮಮಂದಿರ ನಿರ್ಮಾಣ ಕೆಲಸ ಆರಂಭಿಸುವ ವಿಶ್ವ ಹಿಂದೂ ಪರಿಷತ್ತಿನ ಹಿಂದಿನ ನಿರ್ಣಯದ ಹಿನ್ನೆಲೆಯಲ್ಲಿ ಫೆಬ್ರುವರಿ ೧೩ ರಂದು ಸಿ.ಪಿ.ಐ(ಎಂ) ಉತ್ತರ ಪ್ರದೇಶ ರಾಜ್ಯ ಸಮಿತಿಯ ಕರೆಯ ಮೇರೆಗೆ ಕೋಮು ಸೌಹಾರ್ದ ರಕ್ಷಣೆಗೆ ರಾಜ್ಯದ ಜಿಲ್ಲಾ ಕಚೇರಿಗಳ ಎದುರು ಮತ ಪ್ರದರ್ಶನ ನಡೆಸಲಾಯಿತು. ಸುಲ್ತಾನಪುರದಲ್ಲಿ ಸಾವಿರಾರು ರೈತರು, ಕೃಷಿಕೂಲಿಕಾರರು ಪ್ರದರ್ಶನ ನಡೆಸಿ ಮ್ಯಾಜಿಸ್ಟ್ರೇಟರಿಗೆ ಮನವಿ ಸಲ್ಲಿಸಿದರು. ಇಟಾವಾದಲ್ಲಿ ಧರಣಿನಡೆಸಲಾಯಿತು. ಕೋಮು ಸೌಹಾರ್ದ ಕುರಿತ ಪೋಸ್ಟರುಗಳ, ಚಿತ್ರಗಳ ಪ್ರದರ್ಶನ ನಡೆಯಿತು. ವಾರಾಣಾಸಿಯಲ್ಲಿ ಸಾರ್ವಜನಿಕ ಸಭೆ ನಡೆಯಿತು. ಇದರ ಅಧ್ಯಕ್ಷತೆಯನ್ನು ಪಕ್ಷದ ಎಂ.ಎಲ್.ಎ. ರಾಜ್ ಕಿಶೋರ್ ಸಿಂಹ ವಹಿಸಿದ್ದರು. ಬರೇಲಿಯಲ್ಲಿ ಸಿ.ಪಿ.ಐ. ಜತೆಗೂಡಿ ಜಂಟಿ ಕಾರ್ಯಾಚರಣೆ ನಡೆಸಲಾಯಿತು. ಹರಿದ್ವಾರದಲ್ಲಿ ಜಿಲ್ಲಾ ಮ್ಯಾಜಿಸ್ಟ್ರೇಟ್ ಕಚೇರಿಯೆದುರು ಪ್ರದರ್ಶನ ನಡೆಯಿತು.

ಫೆಬ್ರುವರಿ ೧೩ ರಂದು ವಿ.ಹೆಚ್.ಪಿ. ನಡೆಸಿದ 'ಸಂತ ಸಮ್ಮೇಳನ' ಎನ್ನಲಾದ ಸಭೆಯಲ್ಲಿ ಮಂದಿರ ನಿರ್ಮಾಣ ಕೆಲಸವನ್ನು ನಾಲ್ಕು ತಿಂಗಳು ಮುಂದೂಡಲು ನಿರ್ಧರಿಸಿರುವುದು ಜಾತ್ಯತೀತ ಶಕ್ತಿಗಳ ಆರಂಭದ ಸಫಲತೆ ಎಂದು ಉತ್ತರ ಪ್ರದೇಶ ಸಿ.ಪಿ.ಐ (ಎಂ) ಕಾರ್ಯದರ್ಶಿ ರಾಮ್‌ಸುಮೇರ್‌ಯಾದವ್ ಪ್ರತಿಕ್ರಿಯೆ ವ್ಯಕ್ತಪಡಿಸಿದ್ದಾರೆ. ಈ ಬಗ್ಗೆ ಉತ್ತರಪ್ರದೇಶ ಸರಕಾರದ ದೃಢನಿಲುವನ್ನು ಅವರು ಪ್ರಶಂಸಿಸಿದ್ದಾರೆ.

ಧಾರ್ಮಿಕ ಉನ್ಮಾದ ಎಬ್ಬಿಸಿ ಅಲ್ಪ ಸಂಖ್ಯಾತರು ಮತ್ತು ಬಹುಸಂಖ್ಯಾತರ ನಡುವೆ ಹಿಂಸಾತ್ಮಕ ಘರ್ಷಣೆ ಸೃಷ್ಟಿಸುವ ತನ್ನ ದುಷ್ಟ ಆಶಯ ವಿಫಲವಾದುದರಿಂದ ವಿ.ಹೆಚ್.ಪಿ. ಮುಖಂಡತ್ವ ಖಿನ್ನವಾಗಿದೆ. ಕಾಶೀ, ಮಥುರಾ ಮಂದಿರಗಳ ವಿಮೋಚನೆ, ಏಪ್ರಿಲ್ ೯ ಕ್ಕೆ ಹನುಮ ಜಯಂತಿ ಆಚರಣೆ, ಏಪ್ರಿಲ್ ೯ ರಿಂದ ಜೂನ್ ೯ ರವರೆಗೆ ರಾಮ ಜಾನಕಿ ರಥಗಳು, ಅಯೋಧ್ಯೆಯಿಂದ ಕಾಶಿ, ಕಾಶಿಯಿಂದ ಮಥುರೆ, ಮತ್ತೆ ಅಯೋಧ್ಯೆಗೆ ಜಾಥಾದ ನಿರ್ಣಯ ಇವೆಲ್ಲಾ ಈ ಖಿನ್ನತೆಯ ಲಕ್ಷಣಗಳು ಎಂದಿರುವ ಕಾಮ್ರೇಡ್ ಯಾದವ್ ನಾಲ್ಕು ತಿಂಗಳಲ್ಲಿ ಈ ಕಂಟಕ ನಿವಾರಣೆಯಾಗುತ್ತದೆ ಎಂದು ಸ್ಪಷ್ಟವಾಗಿ ಹೇಳಿರದ ವಿ.ಹೆಚ್.ಪಿ.ಯ ಫೆಬ್ರುವರಿ ೧೩ ರ ನಿರ್ಣಯದ ಹಿನ್ನೆಲೆಯಲ್ಲಿ ಇಮ್ಮಡಿ ಶಕ್ತಿ ಗೂಡಿಸಿ ಧಾರ್ಮಿಕ ಉನ್ಮಾದ ಎಬ್ಬಿಸುವವರ ವಿರುದ್ಧ, ಕೋಮುಕಂದರ ಸೃಷ್ಟಿಸುವವರ ವಿರುದ್ಧ ಪ್ರಚಾರ ಪ್ರಕ್ಷೋಭೆ ನಡೆಸಬೇಕೆಂದು ರಾಜ್ಯದ ಎಲ್ಲಾ ಜಾತ್ಯತೀತ, ದೇಶಪ್ರೇಮಿ ಶಕ್ತಿಗಳಿಗೆ ಕಳಕಳಿಯ ಮನವಿ ಮಾಡಿಕೊಂಡಿದ್ದಾರೆ.

ಫೆಬ್ರುವರಿ 1990 ರ ಚುನಾವಣಾ ಫಲಿತಾಂಶ

	ಹಿಮಾಚಲ ಪ್ರದೇಶ	ರಾಜಾಸ್ಥಾನ	ಮಧ್ಯ ಪ್ರದೇಶ	ಗುಜರಾತ್	ಮಹಾರಾಷ್ಟ್ರ	ಒರಿಸ್ಸಾ	ಮಣಿಪುರ	ಅರುಣಾಚಲ ಪ್ರದೇಶ	ಪಾಂಡಿಚೇರಿ	ಬಿಹಾರ
ಜನತಾದಳ	11	54	28	70	25	123	10	11	4	121
ಕಾಂಗ್ರೆಸ್(ಐ)	8	50	56	33	142	10	26	37	11	71
ಬಿ.ಜೆ.ಪಿ.	44	85	219	66	42 + 51(ಶಿವಸೇನೆ)	2	–		–	36
ಸಿ.ಪಿ.ಐ	1	–	3	–	2	5	3		2	23
ಸಿ.ಪಿ.ಐ.(ಎಂ)	–	1	–	–	3	1	–		–	6
ಇತರರು	1	9	13	12	16 (ಪಿ.ಡಬ್ಲ್ಯು.ಪಿ-8 ಸೇರಿ)	6	6 (ಕಾಂಗ್ರೆಸ್ ಎಸ್) 10 (ಎಂ.ಪಿ.ಪಿ.) 3 ಇತರರು	11	ಡಿ.ಎಂ.ಕೆ. 9 + 1 ಪಕ್ಷೇತರ ಎ.ಡಿ.ಎಂ.ಕೆ	59 (ಜೆ.ಎಂ.ಎಂ. 19 ಮತ್ತು ಐ.ಪಿ.ಎಫ್.೭ ಸೇರಿ)
ಒಟ್ಟು	65	199	319	181	288	147	58	59	30	316

ವಿಧಾನಸಭಾ ಚುನಾವಣೆಗಳ ಬಗ್ಗೆ ಪಿ.ಬಿ.

ಕಾಂಗ್ರೆಸ್‌ಗೆ ತಿರಸ್ಕಾರದ ಪುನರುಚ್ಚರಣೆ

ಒರಿಸ್ಸಾ, ಬಿಹಾರ, ರಾಜಸ್ಥಾನ, ಮಧ್ಯಪ್ರದೇಶ, ಗುಜರಾತ್ ಮತ್ತು ಹಿಮಾಚಲ ಪ್ರದೇಶದ ಜನತೆ ಕಾಂಗ್ರೆಸ್(ಐ)ನ್ನು ಸಂಪೂರ್ಣ ಪರಾಭವಗೊಳಿಸಿರುವುದಕ್ಕಾಗಿ ಸಿ.ಪಿ.ಐ.(ಎಂ) ಪೊಲಿಟ್‌ಬ್ಯೂರೋ ಅವರನ್ನು ಅಭಿನಂದಿಸಿದೆ. ಮಹಾರಾಷ್ಟ್ರದಲ್ಲೂ ಕಾಂಗ್ರೆಸ್(ಐ) ಬಲ ಕುಗ್ಗಿರುವುದು, ಪಾಂಡಿಚೇರಿಯಲ್ಲೂ ಕಾಂಗ್ರೆಯೇತರ ಸರಕಾರದ ರಚನೆ, ಕಾಂಗ್ರೆಸ್(ಐ) ಅಳ್ವಿಕೆಗೆ ಮೂರು ತಿಂಗಳ ಹಿಂದೆ ಲೋಕ ಸಭಾ ಚುನಾವಣೆಗಳಲ್ಲಿ ಜನ ತೋರಿದ ತಿರಸ್ಕಾರವನ್ನು ಮತ್ತೊಮ್ಮೆ ಒತ್ತಿ ಹೇಳಿದಂತಾಗಿದೆ ಎಂದಿರುವ ಪೊಲಿಟ್‌ಬ್ಯೂರೊ "ಆದರೆ ಇವು ಕೇವಲ ಲೋಕಸಭಾ ಚುನಾವಣೆಗಳಲ್ಲಿ ಕಂಡು ಬಂದ ಪ್ರವೃತ್ತಿಯ ಮುಂದುವರಿಕೆಯಷ್ಟೇ ಅಲ್ಲ. ಈ ರಾಜ್ಯಗಳಲ್ಲಿನ ದುರಾಡಳಿತದ ಮೇಲೂ ಒಂದು ನಿರ್ಣಾಯಕ ತೀರ್ಪು" ಎಂದು ಹೇಳಿದೆ. ಶ್ರೀಮಂತರಿಗೆ ಪ್ರಯೋಜನವಾಗಿರುವ, ಭ್ರಷ್ಟಾಚಾರ ಹಬ್ಬಿಸಿರುವ, ಕೋಮು ಸೌಹಾರ್ದ ರಕ್ಷಿಸಲಾಗದ ಕಾಂಗ್ರೆಸ್(ಐ) ಧೋರಣೆಗಳು ದುರಾಡಳಿತದ ವಿರುದ್ಧ ತೀವ್ರ ತೀರ್ಪು ಇದು.

ಜನತಾದಳ ಒರಿಸ್ಸಾದಲ್ಲಿ ಭಾರೀ ಬಹುಮತಗಳಿಸಿದೆ ಬಿಹಾರ, ಗುಜರಾತದಲ್ಲಿ ಅತೀ ದೊಡ್ಡ ಪಕ್ಷವಾಗಿ ಹೊರಹೊಮ್ಮಿದೆ. ಆದರೆ ಮಧ್ಯಪ್ರದೇಶ, ಹಿಮಾಚಲ ಪ್ರದೇಶಗಳಲ್ಲಿ ಬಿ.ಜೆ.ಪಿ. ಬಹುಮತ ಗಳಿಸಿದೆ. ರಾಜಸ್ಥಾನದಲ್ಲಿ ಅತೀ ದೊಡ್ಡ ಪಕ್ಷವಾಗಿದೆ. ಈ ರಾಜ್ಯಗಳಲ್ಲಿ ಬಿ.ಜೆ.ಪಿ.ಯ ಯಶಸ್ಸು ಮುಖ್ಯತಃ ತೀವ್ರ ಕಾಂಗ್ರೆ-ವಿರೋಧಿ ಅಸಂತೃಪ್ತಿಯಿಂದ ಪಡೆದ ಲಾಭವಾಗಿದೆ ಎಂದಿರುವ ಪೊಲಿಟ್‌ಬ್ಯೂರೋ ಮಹಾರಾಷ್ಟ್ರದಲ್ಲಿ ಶಿವಸೇನೆಯೂ ಸೇರಿದಂತೆ ಈ ಜಾತ್ಯತೀತವಲ್ಲದ ಶಕ್ತಿಗಳ ಮತ ಹೆಚ್ಚಿರುವುದು ನಮ್ಮ ರಾಜಕೀಯ ರಂಗದ ಜಾತ್ಯತೀತ ಸ್ವರೂಪವನ್ನು ಶಕ್ತಿಯುತಗೊಳಿಸಲು ತಕ್ಕುದಾದಂತಹುದು ಅಲ್ಲ ಎಂದು ಅಭಿಪ್ರಾಯಪಟ್ಟಿದೆ. ಈ ರಾಜ್ಯಗಳ ಜನತೆ ಕಾಂಗ್ರೆಸ್(ಐ) ವಿರುದ್ಧ ಮತ ನೀಡಿದ್ದಾರೆ. ಆದರೆ ಈ ಚುನಾವಣಾ ಲಾಭವನ್ನು ಬಹು ಸಂಖ್ಯಾತ ಕೋಮುವಾದ ಬೆಳೆಸಲು ಬಳಸುವ ಪ್ರಲೋಭನೆ ಅದಕ್ಕಿದೆ. ಇಂತಹದೊಂದು ಬೆಳವಣಿಗೆಯ ಬಗ್ಗೆ ಎಲ್ಲಾ ಜಾತ್ಯತೀತ ಶಕ್ತಿಗಳಲ್ಲಿ ಕಾತುರ ಹುಟ್ಟಿರಬೇಕು. ಉಂಟುಮಾಡಬಹುದಾದ ಅಪಾಯದ ಬಗ್ಗೆ ಜಾಗರೂಕರಾಗಿರಬೇಕು ಎಂದು ಪಿ.ಬಿ. ಎಚ್ಚರಿಸಿದೆ.

ಕೇಂದ್ರದ ರಾಷ್ಟ್ರೀಯ ರಂಗ ಸರಕಾರದ ಮುಖ್ಯ ಅಂಗವಾದ ಜನತಾದಳಕ್ಕೆ ಸುಮಾರಾಗಿ ಸಕಾರಾತ್ಮಕ ತೀರ್ಪು ಸಿಕ್ಕಿದೆಯೆನ್ನಬಹುದು. ಆದ್ದರಿಂದ ಜಾತ್ಯತೀತತೆಯನ್ನು, ದೇಶದ ಐಕ್ಯತೆಯನ್ನು ಕಾದುಕೊಳ್ಳುವ ಒಂದು ದೊಡ್ಡ ಜವಾಬ್ದಾರಿ ಆ ಪಕ್ಷದ ಮೇಲೆ ಬೀಳುತ್ತದೆ. ಈ ಧೋರಣೆಗಳಿಗೆ ಬದ್ಧವಾಗಿದ್ದುದರ ಜೊತೆಗೆ ಜನತೆಗೆ ಆರ್ಥಿಕ ಪರಿಹಾರ ನೀಡುವ ಅದರ ಭರವಸೆ, ಅಲ್ಪ ಸಂಖ್ಯಾತರ ಹಕ್ಕುಗಳ ರಕ್ಷಣೆ ಹಾಗೂ ಪ್ರಜಾಪ್ರಭುತ್ವ ಬಲಗೊಳಿಸಿದುದರಿಂದಾಗಿಯೇ ವ್ಯಾಪಕ ಬೆಂಬಲ ಗಳಿಸುವುದು ಅದಕ್ಕೆ ಸಾಧ್ಯವಾಗಿದೆ. ಕೇಂದ್ರದಲ್ಲಿ ಮತ್ತು ರಾಜ್ಯಗಳಲ್ಲಿ ತನ್ನ ಚುನಾವಣಾ ಪ್ರತಿಜ್ಞೆಗಳ ಅನುಷ್ಠಾನವೊಂದೇ ಇನ್ನು ಮುಂದೆಯೂ ಅದಕ್ಕೆ ನಿರಂತರ ಜನ ಬೆಂಬಲ ಗಳಿಸಿಕೊಡಬಲ್ಲ ಮಾರ್ಗ, ಎಂದು ಪಿ.ಬಿ. ಹೇಳಿದೆ.

ಬಿಹಾರದಲ್ಲಿ ಮತ್ತು ಹರಿಯಾಣದ ಮೆಹಾಂ ವಿಧಾನಸಭಾ ಉಪ ಚುನಾವಣೆಯಲ್ಲಿ ಅಭೂತ ಪೂರ್ವ ಹಿಂಸಾಚಾರ ನಡೆದಿರುವುದರ ಬಗ್ಗೆ ಪೊಲಿಟ್‌ಬ್ಯೂರೊ ತನ್ನ ಗಂಭೀರ ಆತಂಕ ವ್ಯಕ್ತಪಡಿಸಿದೆ. ಬಿಹಾರದಲ್ಲಿ ಐಂಬತ್ತಕ್ಕೂ ಹೆಚ್ಚು ಮಂದಿ, ಮೆಹಾಂನಲ್ಲಿ ಹತ್ತಕ್ಕೂ ಹೆಚ್ಚು ಮಂದಿ ಪ್ರಾಣ ಕಳೆದುಕೊಂಡರು. ಬಿಹಾರದಲ್ಲಿ ವ್ಯಾಪಕವಾಗಿ ಮತಗಟ್ಟೆ ಕಸಿದುಕೊಳ್ಳುವ, ಹಲವೆಡೆ ಸರಕಾರಿ ಯಂತ್ರದ ನೆರವಿನಿಂದಲೇ ಹೀಗೆ ಮಾಡಿರುವ ಘಟನೆಗಳು ನಡೆದಿದೆ. ರಾಜಕೀಯ ರಂಗವೂ ಅಪರಾಧೀಕರಣ, ಭೂಮಾಲಿಕರ, ಪಟ್ಟಭದ್ರ ಹಿತಾಸಕ್ತಿಗಳಿಗೆ ಸೇರಿದ ಗ್ಯಾಂಗ್‌ಗಳನ್ನು ಜನತೆಯ ಇಚ್ಛೆಯನ್ನು ಮುರಿಯಲಿಕ್ಕಾಗಿ ಬಳಸುತ್ತಿರುವ ಅಪಾಯವನ್ನು ಈ ಸಮಸ್ಯೆ ಎತ್ತಿ ತೋರಿಸಿದೆ ಎಂದು ಪಿ.ಬಿ. ಅಭಿಪ್ರಾಯಪಟ್ಟಿದೆ. ಇಂತಹ ನಗ್ನ ಹಲ್ಲೆಗಳ ವಿರುದ್ಧ ಪ್ರತಿರೋಧ ಒಡ್ಡಲು ಜನತೆಯನ್ನು ಬಡಿದೆಬ್ಬಿಸುವ ಜತೆಗೆ ಪರಿಣಾಮಕಾರಿ ಚುನಾವಣಾ ಸುಧಾರಣೆ ತಂದು ಜನತೆಯ ಪ್ರಾಥಮಿಕ ಪ್ರಜಾಪ್ರಭುತ್ವ ಹಕ್ಕುಗಳನ್ನು ರಕ್ಷಿಸುವ ತುರ್ತು ಅವಶ್ಯಕತೆಯಿದೆ.

ಪಶ್ಚಿಮ ಬಂಗಾಳ, ಕೇರಳಗಳಲ್ಲಿ ಉಪಚುನಾವಣೆಗಳಲ್ಲಿ ಸಿ.ಪಿ.ಐ. (ಎಂ) ಹಾಗು ಎಡಪಕ್ಷಗಳು ದೊಡ್ಡ ವಿಜಯ ಗಳಿಸಿವೆ. ಪಶ್ಚಿಮ ಬಂಗಾಳದಲ್ಲಿ ದುರ್ಗಾಪುರ ಲೋಕಸಭಾ ಸ್ಥಾನವನ್ನು ಎರಡು ಲಕ್ಷಕ್ಕೂ ಹೆಚ್ಚು ಅಂತರದಿಂದ ಸಿ.ಪಿ.ಐ.(ಎಂ) ಗೆದ್ದಿದೆ. ನಾಲ್ಕು ಅಸೆಂಬ್ಲಿ ಉಪಚುನಾವಣೆಗಳಲ್ಲೂ ಎಡರಂಗ ಹಿಂದಿನ ಚುನಾವಣೆಗಳಿಗಿಂತ ದೊಡ್ಡ ಅಂತರದಲ್ಲಿ ಗೆದ್ದಿದೆ. ಕೇರಳದಲ್ಲಿ ಸಾಮಾನ್ಯವಾಗಿ ಕಾಂಗ್ರೆಸ್ (ಐ) ನದಾಗಿದ್ದ ಹರಿಪ್ಪಡ್ ಸ್ಥಾನವನ್ನು ಎಲ್.ಡಿ.ಎಫ್. ಗೆದ್ದುಕೊಂಡಿದೆ. ಹಿಂದೆ ಲೋಕಸಭಾ ಚುನಾವಣೆಗಳ ಜತೆಗೆ ನಡೆದ ತಲಿಪ್ಪಾರಾಂಬ ಉಪಚುನಾವಣೆಯಂತೆ ಇದು ಕೂಡಾ ಜನ ಎಲ್.ಡಿ.ಎಫ್. ಸರಕಾರದ ಮೇಲೆ ಈಗಲೂ ವಿಶ್ವಾಸವಿಟ್ಟಿದ್ದಾರೆ ಎಂಬುದನ್ನು ಮತ್ತೆ ತೋರಿಸಿಕೊಟ್ಟಿದೆ ಎಂದು ಪಿ.ಬಿ. ಹೇಳಿಕೆ ತಿಳಿಸುತ್ತದೆ.

ಪುಟ 1ರಿಂದ

ತಿಳುವಳಿಕೆಗೆ ಬಂದಿದ್ದರೆ ಅವುಗಳು ಇನ್ನೂ ಉತ್ತಮ ಫಲಿತಾಂಶ ಪಡೆಯ ಬಹುದಾಗಿತ್ತು.

ಜನರ ಸಿಟ್ಟನ್ನು ಮತ್ತೊಮ್ಮೆ ತೋರಿದ ವಿಧಾನಸಭಾ ಚುನಾವಣೆಗಳು

ಲೋಕಸಭಾ ಚುನಾವಣೆಗಳಂತೆ ವಿಧಾನಸಭಾ ಚುನಾವಣೆಗಳೂ ಕಾಂಗ್ರೆಸ್(ಐ) ವಿರುದ್ಧ ಜನತೆಯ ಸಿಟ್ಟನ್ನು ತೋರಿಸಿವೆ. ಅದರ ವಿರುದ್ಧ ಜನತೆ ಒಂದು ಸ್ಪಷ್ಟ ತೀರ್ಪು ನೀಡಿದ್ದಾರೆ. ಕಾಂಗ್ರೆಸ್(ಐ)ನ ದಶಕಗಳ ಅಧಿಕಾರದ ಗುತ್ತೇದಾರಿಕೆ, ಅದರ ಜನ-ವಿರೋಧಿ ಧೋರಣೆಗಳಿಂದಾಗಿ ಅದನ್ನು ಅಧಿಕಾರದಿಂದ ಓಡಿಸಬೇಕು ಎಂದು ನಿರಂತರವಾಗಿ ಹೋರಾಡುತ್ತಾ ಬಂದ ಎಡ ಜಾತ್ಯತೀತ ಶಕ್ತಿಗಳಿಗೊಂದು ದೊಡ್ಡ ವಿಜಯ ಇದು. ಆದರೆ ದುರದೃಷ್ಟವಶಾತ್ ಪ್ರತಿಯೊಂದೆಡೆ ಕಾಂಗ್ರೆಸ್ (ಐ) ವಿರುದ್ಧವಾದ ಅಸಂತೃಪ್ತಿ ಪ್ರಜಾಸತ್ತಾತ್ಮಕ ದಿಕ್ಕಿನತ್ತ ಕ್ರೋಢೀಕರಣ ಗೊಳ್ಳಲಿಲ್ಲ. ಎಡ ಶಕ್ತಿಗಳು ದುರ್ಬಲ ವಾಗಿದ್ದರೆ, ಜನತಾದಳ ಸಮಯ ಸಾಧಕ ನೀತಿ ಅನುಸರಿಸಿದೆಡೆಗಳಲ್ಲಿ ಬಿ.ಜೆ.ಪಿ. ತನ್ನ ಕೋಮು ಪ್ರಚಾರದೊಂದಿಗೆ ಜನತೆ ತನ್ನನ್ನು ಅನುಸರಿಸು ವಂತೆ ಮಾಡಲು ಯಶಸ್ವಿಯಾಯಿತು. ಇನ್ನು ಮುಂದೆಯೂ ಇಂತಹ ಕೋಮುವಾದಿ ಪ್ರಶ್ನೆಗಳನ್ನೆತ್ತಿ ಹಿಂದೂ ಜನಸಮೂಹಗಳನ್ನು ಅಣಿನೆರೆಸಿ ದೇಶದ ವಿಭಿನ್ನ ಕೋಮುಗಳ ನಡುವೆ ಕಂದರ ಹುಟ್ಟಿಸಲು ಬಿ.ಜೆ.ಪಿ.ಗೆ ಇದರಿಂದ ಪ್ರೋತ್ಸಾಹ ದೊರೆಯಲಿದೆ.

ಎಡ ಪಕ್ಷಗಳ ಗುರುತರ ಹೊಣೆ

ಕಾಶ್ಮೀರ ಸನ್ನಿವೇಶದ ಬಗ್ಗೆ ಬಿ.ಜೆ.ಪಿ.ಯ ಇತ್ತೀಚಿನ ಹೇಳಿಕೆ ಅದು ಉಪದ್ರವ ಸೃಷ್ಟಿಸಲು ಹೊರಟಿದೆ ಎಂಬ ಬಗ್ಗೆ ಸಾಕಷ್ಟು ಸಂಕೇತ ನೀಡಿದೆ. ಆದ್ದರಿಂದ ಕೋಮುವಾದದ ವಿರುದ್ಧ ಗರಿಷ್ಠ ಜಾಗರೂಕತೆ ಅತ್ಯಗತ್ಯ. ರಾಷ್ಟ್ರೀಯ ಐಕ್ಯತೆಯ ರಕ್ಷಣೆಯ ಹೋರಾಟವನ್ನು ಎಡ ಜಾತ್ಯತೀತ ಶಕ್ತಿಗಳುನಿರಂತರವಾಗಿ ಮುಂದುವರೆಸಬೇಕು. ಪ್ರಜಾಪ್ರಭುತ್ವ ಆಂದೋಲನವನ್ನು ದೇಶದ ಐಕ್ಯತೆ ಯನ್ನು ಛಿದ್ರಗೊಳಿಸುವ ಕೋಮು ಭಾವೋದ್ರೇಕವನ್ನು ಎಬ್ಬಿಸಲು ಬಿಡಬಾರದು. ಈ ವಿಷಯದಲ್ಲಿ ಯಾವುದೇ ರಾಜಿ ನಿಲುವು ದೇಶದ ಪ್ರಜಾಪ್ರಭುತ್ವ ಸ್ವರೂಪಕ್ಕೇ ವಿನಾಶಕಾರಿಯಾಗಬಹುದು.

ಈ ಸಂದರ್ಭದಲ್ಲಿ ಎಡ ಪ್ರಜಾಪ್ರಭುತ್ವ ಶಕ್ತಿಗಳ ಐಕ್ಯತೆ ಮಹತ್ವದ್ದಾಗುತ್ತದೆ. ಇದನ್ನು ಸಾಧಿಸಲು ವಿಧಾನ ಮಂಡಲಗಳ ಒಳಗೆ ಹಾಗೂ ಹೊರಗೆ ಜನರನ್ನು ಅಣಿನೆರೆಸುವಲ್ಲಿ ಎಡ ಐಕ್ಯತೆಯನ್ನು ಮತ್ತಷ್ಟು ಬಲಗೊಳಿಸಬೇಕು. ಎಡ ಪಕ್ಷಗಳು ರಾಷ್ಟ್ರೀಯ ಐಕ್ಯತೆಯ ಪ್ರಮುಖ ಪ್ರತಿಪಾದಕರಾಗಬೇಕು.

ಚುನಾವಣಾ ಫಲಿತಾಂಶಗಳು ಎಡಪಕ್ಷ ಮೇಲೆ ದೊಡ್ಡ ಜವಾಬ್ದಾರಿ ಹಾಕಿವೆ. ಇದನ್ನು ಅವು ಚಾಕಚಕ್ಯತೆಯಿಂದ ನಿಭಾಯಿಸಿದರೆ ದೇಶದಲ್ಲಿ ಎಡ, ಪ್ರಜಾಸತ್ತಾತ್ಮಕ, ಜಾತ್ಯತೀತ ಶಕ್ತಿಗಳು ಬಲಗೊಂಡು ಕೋಮುವಾದ ಪ್ರಚಾರ, ಕೋಮುವಾದಿ ಪಕ್ಷಗಳು ದುರ್ಬಲಗೊಂಡ ಒಂದು ಹೊಸ ವರ್ಗ ಸಮೀಕರಣವನ್ನು ಸೃಷ್ಟಿಸಬಹುದು. ಕೇವಲ ಸಭೆಗಳನ್ನು ನಡೆಸಿ ತೃಪ್ತರಾಗಬಾರದು. ಕಾರ್ಮಿಕ ವರ್ಗದ, ಕೋಟ್ಯಂತರ ಶ್ರಮ ಜೀವಿಗಳ ಹಿತಾಸಕ್ತಿಗಳ ರಕ್ಷಣೆಗೆ ಸಾಮೂಹಿಕ ಆಂದೋಲನಗಳನ್ನು ಹರಿಯ ಬಿಡಬೇಕು. ಕೋಮುವಾದದ ಅಪಾಯದ ವಿರುದ್ಧ, ರಾಷ್ಟ್ರೀಯ ಐಕ್ಯತೆಯ ರಕ್ಷಣೆಗಾಗಿ ಒಂದು ಚೈತನ್ಯ ಪೂರ್ಣ ಪ್ರಚಾರ ಆರಂಭಿಸಬೇಕು.

ದುರ್ಗಾಪುರದ ಚರಿತ್ರಾರ್ಹ ಸಮಾವೇಶ ಕೆಲಸದ ಹಕ್ಕು ಮೂಲಭೂತ ಹಕ್ಕಾಗಬೇಕೆಂಬ ಕೂಗು.

ಕೆಲಸದ ಹಕ್ಕು ಮೂಲಭೂತ ಹಕ್ಕಾಗಬೇಕೆಂದೂ, ಅದನ್ನು ಭಾರತದ ಸಂವಿಧಾನದಲ್ಲಿ ಸೇರಿಸಬೇಕೆಂದೂ ಸಿ.ಪಿ.ಐ.(ಎಂ) ಹಾಗೆಯೇ ಎಸ್.ಎಫ್.ಐ., ಡಿ.ವೈ.ಎಫ್.ಐ., ಸಿ.ಐ.ಟಿ.ಯು. ಮೊದಲಾದ ಸಂಘಟನೆಗಳು ಬಲವಾಗಿ ಪ್ರತಿಪಾದನೆ ಮಾಡುತ್ತ ಬಂದಿವೆ. 'ಹೋದ ನವಂಬರ್ ತಿಂಗಳಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ ರಾಷ್ಟ್ರೀಯ ರಂಗವು ಕೆಲಸದ ಹಕ್ಕನ್ನು ಮೂಲಭೂತ ಹಕ್ಕನ್ನಾಗಿ ಮಾಡಿ ಸಂವಿಧಾನದಲ್ಲಿ ಸೇರಿಸುತ್ತೇವೆಂಬ ಆಶ್ವಾಸನೆಯಿಂದಾಗಿ ಈ ಪ್ರಶ್ನೆ ಹೆಚ್ಚು ಮಹತ್ವ ಪಡೆದಿದೆ. ಸಂವಿಧಾನದಲ್ಲಿ ತಿದ್ದುಪಡಿ ತರುವುದರಿಂದ ಮಾತ್ರ ದೇಶದಲ್ಲಿರುವ ಸುಮಾರು ೧೫ ಕೋಟಿ ನಿರುದ್ಯೋಗಿಗಳಿಗೆ ಉದ್ಯೋಗ ಲಭಿಸುವುದಿಲ್ಲ; ಉದ್ಯೋಗ ಸೃಷ್ಟಿಸುವ ಬೃಹತ್ ಯೋಜನೆಗಳನ್ನು ಕೈಗೊಳ್ಳುವುದು ಅತ್ಯಗತ್ಯ. ಈಗಾಗಲೇ ನೊಂದಾಯಿಸಲ್ಪಟ್ಟ ನಿರುದ್ಯೋಗಿಗಳ ಸಂಖ್ಯೆ ೩೦.೮ ಮಿಲಿಯವಾದರೆ, ಗ್ರಾಮಾಂತರದಲ್ಲಿ ೭೦ ಮಿಲಿಯಕ್ಕಿಂತಲೂ ಹೆಚ್ಚು ನಿರುದ್ಯೋಗಿಗಳಿದ್ದಾರೆ. ಇಷ್ಟು ಅಪಾರ ಸಂಖ್ಯೆಗೆ ಉದ್ಯೋಗದ ಅವಕಾಶ ಒದಗಿಸಬೇಕಾದರೆ ಪ್ರಗತಿಪರವಾದ ಆರ್ಥಿಕ ನೀತಿಯನ್ನು, ಪುರೋಗಾಮಿ ಭೂಸುಧಾರಣೆಯನ್ನೂ ಅನುಷ್ಠಾನದಲ್ಲಿ ತಾರದೆ ಈ ಬೃಹತ್ ಜವಾಬ್ದಾರಿಯನ್ನು ಪೂರೈಸಲು ಸಾಧ್ಯವಿಲ್ಲ.

ಈ ಸಮಸ್ಯೆಗೆ ಪರಿಹಾರ ಕಂಡುಹಿಡಿಯಲು ಮತ್ತು ವಿ.ಪಿ.ಸಿಂಗ್ ಸರ್ಕಾರ ಇವುಗಳನ್ನು ತುರ್ತಾಗಿ ಕಾರ್ಯಚರಣೆಯಲ್ಲಿ ತರಬೇಕೆಂದು ಒತ್ತಾಯ ಮಾಡಲು ಪಶ್ಚಿಮ ಬಂಗಾಳದ ಬರ್ದ್ವಾನ್ ಜಿಲ್ಲೆಯ ೩ ರಂದು "ಕೆಲಸದ ಹಕ್ಕಿಗಾಗಿ" ಸಮಾವೇಶ ನಡೆಸಲು ಖಾಸಗೀ ಮತ್ತು ಸಾರ್ವಜನಿಕ ಕ್ಷೇತ್ರದ ಕಾರ್ಮಿಕ ಸಂಘಗಳು ನಿರ್ಧರಿಸಿವೆ.

ಚರಿತ್ರಾರ್ಹವಾದಂಥ ಈ ಸಮಾವೇಶ, ಎಲ್ಲರಿಗೂ ಕೆಲಸ ಕೊಡಿಸಬೇಕೆಂದೂ ಮುಚ್ಚಲ್ಪಟ್ಟ ಕಾರ್ಖಾನೆಗಳನ್ನೆಲ್ಲ ತೆಗೆಸಬೇಕೆಂದೂ ಇನ್ನು ಮುಂದೆ ಕಾರ್ಖಾನೆಗಳು ಮುಚ್ಚದಂತೆ, ಕೆಲಸಗಾರರನ್ನು ತೆಗೆದು ಹಾಕದಂತೆ ಕ್ರಮ ಕೈಗೊಳ್ಳಬೇಕೆಂದೂ, ಕೇಂದ್ರ ರಾಜ್ಯ ಸರಕಾರಗಳು ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಗಳು ಹೊಸ ನೌಕರರನ್ನು ಕೆಲಸಕ್ಕೆ ಸೇರಿಸಿಕೊಳ್ಳುವುದರ ಮೇಲೆ ಹೇರಿರುವ ನಿರ್ಬಂಧ ತೆಗೆದು ಹಾಕಬೇಕೆಂದೂ, ಹೀಗೆ ಹಲವಾರು ಪರಿಹಾರ ಕ್ರಮಗಳನ್ನು ಸೂಚಿಸಲಿದೆ.

ಈ ಸಮಾವೇಶದಲ್ಲಿ ಕರ್ನಾಟಕದಿಂದ ೨೫ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ.

ಕೆಲಸದ ಹಕ್ಕು ಮೂಲಭೂತ ಹಕ್ಕು ಎಂಬುದು ಬರೇ ಮತಗಳಿಕೆಯ ಘೋಷಣೆಯಾಗಿಯೇ ಉಳಿಯದೆ ಅದೊಂದು ಆಂದೋಲನದ ಘೋಷಣೆಯಾಗಿ ಬೆಳೆದು ಬಂದು ಸ್ವಾವಲಂಬಿ ಅರ್ಥ ವ್ಯವಸ್ಥೆಯನ್ನು ಹೊಂದಿದ ಬಲಿಷ್ಠ ರಾಷ್ಟ್ರವಾಗಿ ಬೆಳೆದು ಬರುವಂತೆ ಕಾರ್ಮಿಕ, ಕೃಷಿಕೂಲಿಗಾರ ನೌಕರ, ಶಿಕ್ಷಕ, ಮಹಿಳೆ, ವಿದ್ಯಾರ್ಥಿ ಯುವಜನತೆಯ ಬೃಹತ್ ಚಳುವಳಿ ಬೆಳೆದು ಬರುವಂತೆ ದುರ್ಗಾಪುರ ಸಮಾವೇಶ ಸ್ಫೂರ್ತಿದಾಯಕ ಮಾರ್ಗದರ್ಶನ ನೀಡಲಿದೆ.

- ಎನ್ವೆ

ದಾರಿ ಯಾವುದಯ್ಯಾ

ಪುಟ 5 ರಿಂದ

ಕೆಳಗಿನ ಹಂತದಿಂದ ಬಂದವರು. ಈ ಚುನಾಯಿತ ಪ್ರತಿನಿಧಿಗಳು ಪಂಚಾಯತಿಗಳನ್ನು ನಡೆಸಬೇಕು. ವಿವಿಧ ಅಭಿವೃದ್ಧಿ ಮತ್ತು ಜನಪರ ಕಾರ್ಯಕ್ರಮಗಳನ್ನು ರೂಪಿಸಿ ಕಾರ್ಯಗತಗೊಳಿಸುವ ಜವಾಬ್ದಾರಿಯನ್ನು ಅವರಿಗೆ ನೀಡಲಾಗಿದೆ. ಈ ಹಂತದಲ್ಲಿ ಕೂಲಿಗಾಗಿ ಕಾಳು, ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆ ಇತ್ಯಾದಿಗಳನ್ನು ಬಳಸಿಕೊಳ್ಳಲಾಗುತ್ತದೆ.

ಅಭಿವೃದ್ಧಿ ಕಾರ್ಯಗಳಲ್ಲಿ ಗುತ್ತಿಗೆದಾರರ ಪಾತ್ರವನ್ನು ಕಡಿಮೆ ಮಾಡಲಾಗಿದೆ. ಸಂಬಂಧಪಟ್ಟ ಮಂಡಲ ಸದಸ್ಯರಿಗೆ ಹೆಚ್ಚಿನ ಜವಾಬ್ದಾರಿಯನ್ನು ನೀಡಲಾಗಿದೆ. ಹೀಗೆ ಮಾಡಿರುವುದರಿಂದ ಕೆಲಸದ ಗುಣಮಟ್ಟವೂ ಹೆಚ್ಚಿದೆ. ಜೊತೆಗೆ ಯೋಜನಾ ವೆಚ್ಚದಲ್ಲಿ ಹಿಡಿತ ಸಿಕ್ಕಿದೆ. ಹೀಗೆ ವಿವಿಧ ಹಂತಗಳಲ್ಲಿ ಜನರ ಪ್ರತಿನಿಧಿಗಳ ಪಾತ್ರವನ್ನು ಗಣನೀಯವಾಗಿ ಹೆಚ್ಚಿಸಲಾಗಿದೆ. ವಿವಿಧ ಹಂತಗಳಲ್ಲಿ ಸ್ಥಳೀಯ ಸಂಸ್ಥೆಗಳನ್ನು ಸಕ್ರಿಯಗೊಳಿಸಲಾಗಿದೆ.

೧. ಜಿಲ್ಲಾ ಯೋಜನೆ ಮತ್ತು ಕ್ಷೇತ್ರ ಯೋಜನೆಗಳನ್ನು ರೂಪಿಸಿ ಅವುಗಳೊಳಗೆ ವಿವಿಧ ಬ್ಯಾಂಕುಗಳ ಯೋಜನೆಗಳನ್ನು ಅಡಕವಾಗಿಸುವ ಪ್ರಯತ್ನ ಮಾಡಲಾಗುತ್ತಿದೆ.

೨. ವಿಕೇಂದ್ರೀಕರಣವನ್ನು ಕ್ಷೇತ್ರದ ಹಂತದಿಂದ ವಿವಿಧ ಗ್ರಾಮಗಳ ಹಂತಕ್ಕೆ ಕೊಂಡೊಯ್ಯುವ ಪ್ರಯತ್ನ ಮಾಡಲಾಗುತ್ತಿದೆ.

೩. ಪಟ್ಟಣನಗರ ಅಭಿವೃದ್ಧಿ ಯೋಜನೆಗಳ ಆವಶ್ಯಕತೆ ಇಂದು ಕಂಡು ಬರುತ್ತದೆ. ಈ ದಿಸೆಯಲ್ಲಿಯೂ ಪ್ರಯತ್ನಗಳನ್ನು ಮಾಡಲಾಗುತ್ತಿದೆ.

೪. ಯೋಜನಾ ವೆಚ್ಚದ ಜೊತೆಗೆ ಕೆಲವು ಯೋಜನೇತರ ವೆಚ್ಚವನ್ನು ಸಹ ವಿಕೇಂದ್ರೀಕರಣ ಗೊಳಿಸುವ ಪ್ರಯತ್ನ ಮಾಡಲಾಗುತ್ತಿದೆ.

೫. ವಿಕೇಂದ್ರೀಕರಣವನ್ನು ವೆಚ್ಚಗಳಿಗಾಗಿ ಮಾತ್ರವಲ್ಲದೆ ಸಂಪನ್ಮೂಲಗಳ ಕ್ರೋಢೀಕರಣಕ್ಕೆ ಬಳಸಬಹುದಾಗಿದೆ. ಆದ್ದರಿಂದ ಸ್ಥಳೀಯ ಸಂಸ್ಥೆಗಳಿಗೆ ಈ ದಿಸೆಯಲ್ಲೂ ಗುರಿಗಳನ್ನು ನಿಗದಿಗೊಳಿಸಲಾಗುತ್ತಿದೆ.

ವಿಕೇಂದ್ರೀಕೃತ ವ್ಯವಸ್ಥೆಯಲ್ಲಿ ಅಂತಿಮವಾಗಿ ನಾವು ಉತ್ತರಿಸಬೇಕಾದ್ದು ಜನರಿಗೆ ಎಲ್ಲ ಹಂತಗಳಲ್ಲೂ. ವೆಚ್ಚಗಳ ಮತ್ತು ಆದಾಯಗಳ ಪರಿವೀಕ್ಷಣೆಯ ಏರ್ಪಾಡು ಮಾಡಲಾಗಿದೆ. ಗ್ರಾಮ ಪಂಚಾಯತಿಗಳು ಜನರಿಗೆ ನೇರವಾಗಿ ಜವಾಬ್ದಾರವಾಗಿರಬೇಕೆಂಬ ವಿಚಾರದಿಂದ ಕನಿಷ್ಠ ಎರಡು ಸಾರ್ವಜನಿಕ ಸಭೆ ಏರ್ಪಡಿಸುವುದನ್ನು ಖಡ್ಡಾಯ ಗೊಳಿಸಲಾಗಿದೆ. ಇವು ಇಡೀ ಪ್ರಜಾಸತ್ತಾತ್ಮಕ ವ್ಯವಸ್ಥೆಯನ್ನು ಪರೀಕ್ಷೆಗೊಳಪಡಿಸುತ್ತವೆ.

ಮಹತ್ವಪೂರ್ಣ ನಿರ್ಣಯ

ಪುಟ 1ರಿಂದ

ಇತ್ತೀಚಿನ ಘಟನೆಗಳಲ್ಲಿ ಪ್ರಾಣ ಕಳೆದುಕೊಂಡವರ ಸಂಬಂಧೀಕರಿಗೆ ಈ ಸರ್ವಪಕ್ಷ ಮನವಿ. ತನ್ನಆಳವಾದ ಸಹಾನುಭೂತಿ ವ್ಯಕ್ತಪಡಿಸಿದೆ. ಸರ್ವಪಕ್ಷ ನಿಯೋಗವೊಂದನ್ನು ಜಮ್ಮು - ಕಾಶ್ಮೀರಕ್ಕೆ ಕಳಿಸಲು ಈ ಸಭೆ ನಿರ್ಣಯಿಸಿತು. ಆ ಪ್ರಕಾರ ನಿಯೋಗವೊಂದು ರಾಜ್ಯಕ್ಕೆ ಭೇಟಿ ನೀಡಿ ಬಂದಿದೆ.

ಇದೊಂದು ಬಹಳ ಮಹತ್ವಪೂರ್ಣ ಮನವಿ. ಆದರೆ ಘೋಷಣೆಗಳಷ್ಟೇ ಪ್ರತ್ಯೇಕತಾವಾದಿಗಳನ್ನು ಎದುರಿಸಲು ನೆರವಾಗಲಾರದು. ಬಹುಮುಖ ಪ್ರಯತ್ನಗಳು ಇದಕ್ಕೆ ಅಗತ್ಯ. ಮೊತ್ತ ಮೊದಲನೆಯದಾಗಿ ಜನತೆಯ ಜೀವ, ಆಸ್ತಿಗಳನ್ನು ರಕ್ಷಿಸಬೇಕು ರಾಜ್ಯದಲ್ಲಿ ಕಾನೂನು ವ್ಯವಸ್ಥೆ ಮರುಸ್ಥಾಪಿಸಬೇಕು. ಪ್ರತ್ಯೇಕತಾವಾದ ಪ್ರತಿಪಾದಿಸುವವರ ವಿರುದ್ಧ ಕಟ್ಟುನಿಟ್ಟಾದ ಕ್ರಮ ಕೈಗೊಳ್ಳಬೇಕು. ಇದರ ಬೆನ್ನ ಹಿಂದೆಯೇ ಜನತೆಯ ನಡುವೆ ರಾಜಕೀಯ ಪ್ರಚಾರ ನಡೆಯಬೇಕು. ಜನತೆಯ ಭವಿಷ್ಯವಿರುವುದು ಪ್ರತ್ಯೇಕಗೊಳ್ಳುವುದರಲ್ಲಿ ಅಲ್ಲ, ಬದಲಾಗಿ, ಸ್ವಂತಿಕೆಯನ್ನು ರಕ್ಷಿಸುವ ರಾಷ್ಟ್ರೀಯ ಐಕ್ಯತೆಯ ಚೌಕಟ್ಟಿನೊಳಗೆ ಸಮಸ್ಯೆಗಳ ಪರಿಹಾರದಲ್ಲಿ ಮಾತ್ರ ಎಂದು ಮನಗಾಣಿಸಬೇಕು.

ಪ್ರತ್ಯೇಕತಾವಾದಿ ಶಕ್ತಿಗಳನ್ನು ಪ್ರಚೋದಿಸುವವರು ಯಾರು, ರಾಷ್ಟ್ರೀಯ ಐಕ್ಯತೆಯನ್ನು ಪ್ರತಿಪಾದಿಸುವವರು ಯಾರು ಎನ್ನುವವರ ನಡುವೆ ಸ್ಪಷ್ಟ ರೇಖೆಯೆಳೆಯಬೇಕು. ರಾಷ್ಟ್ರೀಯ ಐಕ್ಯತೆಗಾಗಿ ನಿಲ್ಲುವ ಎಲ್ಲಾ ಶಕ್ತಿಗಳನ್ನು ಒಂದುಗೂಡಿಸಬೇಕು. ಇಂತಹ ಒಂದು ನಿಲುವಿನಿಂದ ಮಾತ್ರವೇ ಸಮಸ್ಯೆ ಪರಿಹಾರಕ್ಕೆ ನೆರವು ಸಿಗಬಲ್ಲದು.

ಈ ಸರ್ವಪಕ್ಷ ಸಭೆಯ ಸಂದೇಶ ಬಹಳ ನೆರವಾಗಬಲ್ಲದು. ಇದು ನಮ್ಮ ಆಂತರಿಕ ವ್ಯವಹಾರಗಳಲ್ಲಿ ಮೂಗು ತೂರಲು ಪಾಕಿಸ್ತಾನಿ ಆಳರಸರಿಗೆ, ಪ್ರತ್ಯೇಕತಾವಾದಿಗಳಿಗೆ ಅವಕಾಶ ಕೊಡುವುದಿಲ್ಲ ಎಂಬ ಸಂಕೇತ ನೀಡಿದೆ ಎಂಬ ಭರವಸೆ ನಮಗಿದೆ. ವಿವಿಧ ರಾಜಕೀಯ ಪಕ್ಷಗಳ ನಡುವಿನ ರಾಜಕೀಯ - ಸೈದ್ಧಾಂತಿಕ ಭಿನ್ನಾಭಿಪ್ರಾಯಗಳೇನೇ ಇರಲಿ ದೇಶ ಒಗ್ಗಟ್ಟಾಗಿ ನಿಲ್ಲುತ್ತದೆ.

Printed and published by R.Ramachandra Rao on behalf of Communist party of India (Marxist), Karnataka State Committee L-56, K.V.Temple Street, Sultanpet, Bangalore - 560 053. Phone No. 75331. Editor: P.RAMACHANDRA RAO